# ಯುಗರಶ್ಮಿ

★ "ವೇದಪ್ರಕಾಶ" ಮತ್ತು ಇಸ್ಲಾಂ

★ ಕ್ರೈಸ್ತ ಮಿತ್ರರಿಗೊಂದು ಸುವಾರ್ತೆ

★ ಧೀರತೆಯಿಂದ ಮುನ್ನಡೆಯಿರಿ

★ ಕನ್ನಡದಲ್ಲಿ ಖುತ್‌ಬಾ-ಮುಸ್ಲಿಂ ಲೋಕ ಎತ್ತ?

ತ್ರೈಮಾಸಿಕ

ಜನವರಿ 1984

ಬೆಲೆ: ರೂ. 1-00

ಕರುಣಾನಿಧಿಯಾದ ದೇವನ ಭಕ್ತದಾಸರು ಭೂಮಿಯಲ್ಲಿ ಸಮಾಧಾನ ಮತ್ತು ಸೌಮ್ಯತೆಯಿಂದ ಕೂಡಿದವರಾಗಿ ನಡೆಯುತ್ತಾರೆ; ಅಜ್ಞಾನಿಗಳಾದ ಜನರು ಅನುಚಿತವಾಗಿ ನುಡಿಯುವಾಗ ಅದಕ್ಕುತ್ತರವಾಗಿ ಅವರಿಗೆ ಶಾಂತಿಯನ್ನು ಬಯಸುತ್ತಾರೆ.

—ಪವಿತ್ರ ಖುರ್‌ಆನ್ (25 : 64)

# ಯುಗರಶ್ಮಿ ತ್ರೈಮಾಸಿಕ

10-23-1008, ಅನ್ಸಾರಿ ರೋಡ್, ಬಂದರ್, ಮಂಗಳೂರು-575 001.

ಬಿಡಿಪ್ರತಿ. ರೂ. 1-00

ವಾರ್ಷಿಕ ಚಂದಾ: ರೂ. 4-00
ಅಂಚೆ ಮೂಲಕ: ರೂ. 5-00

ವಿಷಯ ಸೂಚಿಕೆ: ಪುಟ


* ಕ್ರೈಸ್ತರೊಡನೆ ... 1
* ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು ... 2
* "ವೇದಪ್ರಕಾಶ" ಮತ್ತು ಇಸ್ಲಾಂ-೨ ... 3
* ಕ್ರೈಸ್ತ ಮಿತ್ರರಿಗೊಂದು ಸುವಾರ್ತೆ ... 13
* ಧೀರತೆಯಿಂದ ಮುನ್ನಡೆಯಿರಿ ... 19
* ಕನ್ನಡದಲ್ಲಿ ಖುತ್ಬಾ-ಮುಸ್ಲಿಂ ಲೋಕ ಎತ್ತ? ... 24
* ಹಿರಿಯ ಪತ್ರಿಕೆ ಯಾವುದು? ... 25
* ಚುಟುಕು-ಚೂರು ... 26
* ಅಹ್ಮದಿಯಾ ವಾರ್ತೆಗಳು ... 27



## AHMADIYYA ENGLISH LITERATURE

1. The Christian Doctrine of Atonement
2. Why did early Christians Accept Islam
3. Muhammad in the Bible
4. How to get rid of the Bondage of Sin
5. A Spiritual Invitation to Dr. Billy Graham the Evangelist

**WILL BE SENT FREE**

Apply with 25 Paise Stamp for each book to:

Book Secretary, Ahmadiyya Muslim Mission,
10-23-1008, Ansari Road, Mangalore-575 001.

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

ಸಂಪಾದಕ: ಮುಹಮ್ಮದ್ ಯೂಸುಫ್

| ಸಂಪುಟ: 9 | ಡಿಸೆಂಬರ್ 1983–ಜನವರಿ 1984 / ಫತಹ್ 1362–ಸುಲ್ಹ್ 1363 | ಸಂಚಿಕೆ: 2 |
|---|---|---|

## ಕ್ರೈಸ್ತರೊಡನೆ

ಯೇಸು ಶಿಲುಬೆಯ ಮೇಲೆ ಗತಿಸಿದರೆಂದು ಹೇಳುತ್ತಾ ನಿರಪರಾಧಿಯಾದ ಅವರನ್ನು ಶಾಪಗ್ರಸ್ತರೆಂದು ನೀವು ಡಂಗುರ ಬಾರಿಸಿ ಘೋಷಿಸುತ್ತೀರಿ. ನಿಮಗಾಗಿ ಅತ್ಯಂತ ಅಸಹ್ಯವಾದ ವೇದನೆಗಳನ್ನು ಸಹಿಸಿದ ಅವರನ್ನು ನೀವು ಧಿಕ್ಕಾರಕ್ಕೆ ಗುರಿಪಡಿಸುತ್ತಿದ್ದೀರಿ. ಯಾಕೆಂದರೆ, ಶಿಲುಬೆಯ ಮೇಲೆ ಸಾಯುವವನು ಕಳ್ಳ ಪ್ರವಾದಿಯೆಂದೂ ಶಾಪಗ್ರಸ್ತನೆಂದೂ ಬೈಬಲ್‌ನಲ್ಲಿ ಬರೆಯಲ್ಪಟ್ಟಿದೆ. ನಿಮ್ಮ ಮಾತುಗಳಿಂದಾಗಿ ನೀವೇ ಅವರ ಕಪಟತನವನ್ನು ಒಪ್ಪಿಕೊಂಡಂತಾಗುವುದು. ಮಾತ್ರವಲ್ಲ ಇತರರೂ ಸಹ ಅವರನ್ನು ಪರಿಹಾಸ್ಯ ಮಾಡಲು ಕಾರಣವಾಗುವುದು. ಶಾಪಗ್ರಸ್ತ ಎಂಬುದರ ಅರ್ಥವು ದೇವರ ಸಂಪರ್ಕದಿಂದ ಬೇರ್ಪಡುವುದು ಎಂದಾಗಿದೆ. ಹಾಗಿರುವಾಗ ಯೇಸುವನ್ನು ದೇವರ ಪ್ರಿಯಸುತನೆಂದು ನೀವು ಹೇಗೆ ಹೇಳುವಿರಿ? ದೈವಸುತನೆಂದು ನೀವು ನಂಬುವ ಯೇಸುಕ್ರಿಸ್ತರನ್ನು ದೇವರ ಸಂಪರ್ಕದಿಂದ ಬೇರ್ಪಟ್ಟ ಶಾಪಗ್ರಸ್ತನೆಂದು ಕೂಡಾ ನೀವು ಹೇಳುತ್ತಿರುವಿರಿ! ತಿಳಿಯಿರಿ, ದುಷ್ಟರು ಮಾತ್ರವೇ ದೇವರಿಂದ ಬೇರ್ಪಟ್ಟು ದೂರ ಸರಿಯುತ್ತಾರೆ; ದ್ರೋಹಿಗಳು ಮಾತ್ರವೇ ಅವನನ್ನು ದ್ವೇಷಿಸುತ್ತಾರೆ. ಹಾಗಿರುವಾಗ ದೇವರ ಪ್ರೀತಿಗೆ ಪಾತ್ರರಾದ ಯೇಸುವನ್ನು ಶಾಪಗ್ರಸ್ತರೆಂದು ನೀವು ಸಾರುವುದು ಏತಕ್ಕಾಗಿ ?

—ಹಜ್ರತ್ ಅಹ್ಮದ್

ಅಹ್ಮದಿಯಾ ಸಂಘಟನೆಯ ಸ್ಥಾಪಕರು.

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

1. ಸರಳ ಜೀವನ ಸತ್ಯ ವಿಶ್ವಾಸದ ಅಂಶವಾಗಿದೆ.

2. ಸಾತ್ವಿಕ, ಸಂತೃಪ್ತ ಹಾಗೂ ಪಾಪಗಳಿಂದ ದೂರವಿರುವವನನ್ನು ಅಲ್ಲಾಹನು ಪ್ರೀತಿಸುತ್ತಾನೆ.

3. ಸೌಮ್ಯ ಭಾವವೇ ಸಂಪತ್ತು; ಸಾತ್ವಿಕತೆಯೇ ಕುಲೀನತೆ.

4. ಅನ್ಯರು ಹೊಂದಿರುವುದರ ಮೇಲೆ ಆಶೆಯಿಲ್ಲದವನು ಯಥಾರ್ಥ ಸಂಪನ್ನನು.

5. ಲೌಕಿಕ ಸುಖದ ಬಗ್ಗೆ ಜಾಗರೂಕರಾಗಿರಿ; ಏಕೆಂದರೆ ಅದು ಹಚ್ಚನೆ ಹಾಗೂ ಮಾಧುರ್ಯದಿಂದ ಕೂಡಿದೆ.

6. ಈ ಜೀವನದಲ್ಲಿ ಒಬ್ಬ ಕೆಲಸದಾಳು ಮತ್ತು ಒಂದು ಕುದುರೆ ಸುಖ ಸಂತೃಪ್ತಿಗೆ ನಿಮಗೆ ಧಾರಾಳ ಸಾಕು.

7. ಮುಆದಿಬ್ನು ಜಬಲ್ ಯಮನಿನ ಗವರ್ನರಾಗಿ ನೇಮಿಸಲ್ಪಟ್ಟಾಗ ಪೈಗಂಬರರು ಅವರೊಡನೆ ಹೀಗೆ ಹೇಳಿದರು:

ಸುಖಾಡಂಬರಗಳ ಬಗ್ಗೆ ಎಚ್ಚರಿಕೆಯಿಂದಿರಿ, ಅಲ್ಲಾಹನ ಯಥಾರ್ಥ ದಾಸರು ಸುಖಾಡಂಬರಗಳನ್ನು ಇಷ್ಟಪಡುವುದಿಲ್ಲ.

8. ಬಡತನವು ನನ್ನ ಅಭಿಮಾನವಾಗಿದೆ.

9. ನಿಮ್ಮ ಪೈಕಿಯ ನಿರ್ಗತಿಕ ಹಾಗೂ ದಿಕ್ಕಿಲ್ಲದವರ ಕಾರಣದಿಂದ ನಿಮಗೆ ಸಹಾಯ ಮತ್ತು ಸಂರಕ್ಷಣೆ ಒದಗುತ್ತವೆ.

10. ದುರ್ಬಲ ಮತ್ತು ನಿಶ್ಯಕ್ತರ ಮಧ್ಯೆ ನನ್ನನ್ನು ಹುಡುಕಿರಿ. ನಿಮ್ಮ ಪೈಕಿಯ ದುರ್ಬಲ ಮತ್ತು ಸಹಾಯವಿಲ್ಲದವರ ಕಾರಣ ನಿಮಗೆ ಸಹಾಯವೂ ಸಂರಕ್ಷಣೆಯೂ ದೊರೆಯುತ್ತವೆ.

(ಸರ್ ಮುಹಮ್ಮದ್ ಝಫ್ರುಲ್ಲಾ ಖಾನ್ ಬರೆದ **Wisdom of the Holy Prophet** ಎಂಬ ಪುಸ್ತಕದಿಂದ ಆಯ್ದುದು.)


READ

**The Holy Prophet Muhammad**

Being a short sketch of the life, teachings and character of the Holy Prophet Muhammad.

By: **Hazrat Mirza Bashiruddin Mahmud Ahmad**

Write to: **Nazir Dawat-O-Tabligh, Qadian-143 516 (Punjab)**

# "ವೇದಪ್ರಕಾಶ" ಮತ್ತು ಇಸ್ಲಾಂ-೨

★ ಎಂ. ಪಿ. ಇಬ್ರಾಹಿಂ

### ನೀಚವಾದ ಮನೋಧರ್ಮ

'ವೇದಪ್ರಕಾಶ'ದ ಲೇಖನದಲ್ಲಿ ಲೇಖಕ ಜೇಷ್ಮ ವರ್ಮನವರು ಹಝ್ರತ್ ಮುಹಮ್ಮದ್ ಪೈಗಂಬರರನ್ನು ಓದುಗರು ತಪ್ಪಾಗಿ ತಿಳಿಯುವಂತೆ ಅನೇಕ ಅಸಂಬದ್ಧ ಗಳನ್ನೂ ನೀಚ ಪದಗಳನ್ನೂ ಉಪಯೋಗಿಸಿ ಬರೆದಿದ್ದಾರೆ. "ಮುಹಮ್ಮದ್ ಪೈಗಂಬರನು ಅನೇಕ ಮಂದಿ ಹೆಣ್ಣು ಮಕ್ಕಳನ್ನು ಕೆಡಿಸಿದ್ದನು. ಖಾದೀಜಾ, ಆಯೇಶಾ, ಹಾಫ್ಸಾ, ಉಮ್ಮೇಹಬೀಬಾ, ಸುದೇಹ್, ಉಲ್ಮೇಸಲ್ಮಾ, ಸಫಿಯಾಹ್, ಮೆಮ್ನಾನಾ, ಜೈನಾಬ್, ಜುಬೆಯ್ಯಾಹ್ ಇತ್ಯಾದಿ ಇತ್ಯಾದಿ ಹೆಸರಿನ ಅನೇಕ ಮಂದಿ ಸ್ತ್ರೀಯರು ಅವನ ಪತ್ನಿಯರಾಗಿದ್ದರು." (ವೇದಪ್ರಕಾಶ ಜನವರಿ – 83). ನಂತರದ ಸಂಚಿಕೆಯಲ್ಲಿ ಅವರು ಇನ್ನೂ ಏನೆಲ್ಲಾ ಬರೆದು "ಇಂತಹ ಕಾಮುಕನಾಗಿದ್ದನಾ ಮುಹಮ್ಮದ್ ಪೈಗಂಬರನು! ಅವನ ಅನುಯಾಯಿಗಳು ಸಜ್ಜನರಾಗುವು ದಾದರೂ ಹೇಗೆ?" ಎಂದೂ ಪ್ರಶ್ನಿಸಿದ್ದಾರೆ.

'ವೇದಪ್ರಕಾಶ' ಮತ್ತು ಅದರ ಲೇಖಕರು ಹಝ್ರತ್ ಮುಹಮ್ಮದ್ ಪೈಗಂಬರರ ಕುರಿತು ಬರೆಯಲು ಬಳಸಿದ ಶೈಲಿಯನ್ನು ನಿಷ್ಪಕ್ಷಮತಿಗಳಾದ ವಾಚಕರು ತಿಳಿದು ಕೊಳ್ಳಲಿ. ಜಗತ್ತಿನಲ್ಲಿರುವ ಬಹುಕೋಟಿ ಮುಸಲ್ಮಾನರು ತಮ್ಮ ಪ್ರಾಣಕ್ಕಿಂತಲೂ ಹೆಚ್ಚು ಪ್ರೀತಿಸುವ ಒಬ್ಬ ಮಹಾನ್ ಪ್ರವಾದಿಯ ಬಗ್ಗೆ ವಿಮರ್ಶಿಸಿ ಬರೆಯುವಾಗ ಸಾಮಾನ್ಯವಾಗಿ ಪಾಲಿಸಬೇಕಾದ ಪ್ರತಿಪಕ್ಷ ಗೌರವವನ್ನು ಸಹ ಶ್ರೀ ಜೇಷ್ಮವರ್ಮನ್ ಗಾಳಿಗೆ ತೂರಿ ತನ್ನ ಇಡೀ ಎರಡು ಲೇಖನಗಳಲ್ಲಿ ಆ ಪವಿತ್ರ ಪ್ರವಾದಿಯ ಕುರಿತು ಏಕವಚನವನ್ನು ಬಳಸಿ ಬರೆದಿದ್ದಾರೆ. 'ಅವನ ಅನುಯಾ ಯಿಗಳು ಸಜ್ಜನರಾಗುವುದಾದರೂ ಹೇಗೆ?' ಎಂದು ಪ್ರಶ್ನಿಸಿದ ಜೇಷ್ಮವರ್ಮನವರೊಡನೆ, "ತಾವು ಕಲಿತ ಈ ಮರ್ಯಾದೆ ಯಾವ ಮಹಾನುಭಾವರಿಂದ ಅಥವಾ ಯಾವ ಮಹಾಗ್ರಂಥವನ್ನೋದಿ ಕಲಿತುಕೊಂಡಿದ್ದೀರಿ?" ಎಂದು ನಾನು ಮರುಪ್ರಶ್ನೆ ಹಾಕುವುದಿಲ್ಲ. ಅವರ ಹಾಗೂ 'ವೇದಪ್ರಕಾಶ'ದ ಸಂಸ್ಕೃತಿಯನ್ನು ಅವರ ಲೇಖ ನವು ಪ್ರತಿಬಿಂಬಿಸುತ್ತದೆ.

### ಬಹುಪತ್ನಿತ್ವ

ಹಝ್ರತ್ ಮುಹಮ್ಮದ್ ಪೈಗಂಬರರು ಬಹು ಪತ್ನಿತ್ವವನ್ನು ಸ್ವೀಕರಿಸಿದ್ದರು ಎಂಬುದು ನಿಜ. ಬಹು ಪತ್ನಿತ್ವ ಸಂಪ್ರದಾಯದೊಡನೆ ಶ್ರೀ ಜೇಷ್ಮವರ್ಮನಿಗಾ ಗಲೀ ವೇದಪ್ರಕಾಶದ ಸಂಪಾದಕರಿಗಾಗಲೀ ಜಿಗುಪ್ಸೆಯಿ ದೆಯೆಂದಾದರೆ, ಅದು ಅವರ ವಿಚಾರಶೂನ್ಯತೆಯೆಂದು ಹೇಳದೆ ನಿರ್ವಾಹವಿಲ್ಲ. ಈ ಲೋಕದಲ್ಲಿ ಜನ್ಮತಾಳಿದ ಅನೇಕ ಮಹಾಪುರುಷರೂ ಮನುಷ್ಯಕುಲದ ಉದ್ಧಾರಕ ರಾಗಿ ನಿಯೋಗಿತರಾದ ಪ್ರವಾದಿಗಳಲ್ಲಿ ಹೆಚ್ಚಿನವರೂ ಕೂಡಾ ಸಂದರ್ಭೋಚಿತವಾಗಿ ಬಹುಪತ್ನಿತ್ವ ಸ್ವೀಕರಿಸಿರು ವುದನ್ನು ನಾವು ಕಾಣುತ್ತೇವೆ. ಮಹಾತ್ಮಾ ಶ್ರೀ ಕೃಷ್ಣ ನಿಗೆ ಅದೆಷ್ಟೋ ಪತ್ನಿಯರಿದ್ದರು. ಮಹಾರಾಜ್ ಶ್ರೀ ರಾಮನ ತಂದೆಯಾದ ದಶರಥನಿಗೆ ಮೂವರು ಹೆಂಡಂದಿ ಯರಿದ್ದರು. ಮಹರ್ಷಿ ಯಾಜ್ಞವಲ್ಕ್ಯನಿಗೆ ಇಬ್ಬರು ಪತ್ನಿಯರಿದ್ದರು. ಹೆಚ್ಚೇಕೆ, ದೇವತೆಗಳ ರಾಜನಾದ ದೇವೇಂದ್ರನೂ ಸಹ ಬಹುಪತ್ನಿತ್ವದ ಆರೋಪದಿಂದ (ಅದೊಂದು ಆರೋಪವೆಂದಾದರೆ) ಹೊರತಾಗಿಲ್ಲ. ದಾವಿದ್, ಅಬ್ರಹಾಂ ಮೊದಲಾದ ಮಹಾನ್ ಪ್ರವಾದಿ ಗಳೂ ಸಹ ಆಯಾ ಕಾಲದ ಪರಿಸ್ಥಿತಿಗಳಿಗನುಸಾರವಾಗಿ ಬಹುಪತ್ನಿತ್ವವನ್ನು ಸ್ವೀಕರಿಸಿದವರಾಗಿದ್ದಾರೆ. ಮಾತ್ರ ವಲ್ಲ, ವೈದಿಕ ಸಾಹಿತ್ಯಗಳೂ ಕೂಡಾ ಬಹುಪತ್ನಿತ್ವವನ್ನು ಪ್ರಬೋಧಿಸುತ್ತದೆ ಎಂದು ನಾನು ಹೇಳಿದರೆ ಬಹುಶಃ ವೇದಪ್ರಕಾಶಕ್ಕೆ ಆಶ್ಚರ್ಯವಾಗಬಹುದು. ಆದರೆ, ಅದು ಸತ್ಯ.

ಇಸ್ಲಾಂ ಧರ್ಮವು ಸಹ ಅನಿವಾರ್ಯವಾದ ಸಂದ ರ್ಭಗಳಲ್ಲಿ ಒಂದಕ್ಕಿಂತ ಹೆಚ್ಚು–ನಾಲ್ಕನ್ನು ಮೀರದಂತೆ

ಪತ್ನಿಯರನ್ನು ಸ್ವೀಕರಿಸಲು ಅನುಮತಿ ನೀಡಿದೆ. ಆದರೆ ಪತ್ನಿಯರೆಡೆಯಲ್ಲಿ ಸಮತ್ವವನ್ನು ಪಾಲಿಸಲು ಶಕ್ತಿಯುತವಾಗಿ ಆಜ್ಞಾಪಿಸುತ್ತಾ ಆ ರೀತಿ ನೀತಿಯುತವಾಗಿ ವರ್ತಿಸಲು ಸಾಧ್ಯವಾಗಲಾರದೆಂಬ ಭಯವಿದ್ದರೆ ಒಬ್ಬಳೇ ಪತ್ನಿ ಸಾಕೆಂದು ಸಹ ಉಪದೇಶಿಸಿದೆ. ಒಂದಕ್ಕಿಂತ ಹೆಚ್ಚಿನ ಸ್ತ್ರೀಯರನ್ನು ಯಾವ ಸಂದರ್ಭದಲ್ಲೂ ಏನೇ ಪರಿಸ್ಥಿತಿಯಲ್ಲೂ ವಿವಾಹವಾಗಬಾರದೆಂಬ ಮಾತಿನಲ್ಲಿ ಏನೇನೂ ತಿರುಳಿಲ್ಲವೆಂದೂ ಅದು ಮನುಷ್ಯ ಜೀವನದಲ್ಲಿ ಪ್ರಯೋಗಾತ್ಮಕವಲ್ಲವೆಂದೂ ಕಾಣಲು ಪ್ರಯಾಸವಿಲ್ಲ. ಹಝ್ರತ್ ಮುಹಮ್ಮದ್ ಪೈಗಂಬರರು ಸಹ ತನ್ನ ಅಂದಿನ ಪರಿಸ್ಥಿತಿಗಳನ್ನು ಮುಂದಿರಿಸಿ ಬಹುಭಾರ್ಯತ್ವವನ್ನು ಸ್ವೀಕರಿಸಿದವರಾಗಿದ್ದಾರೆ. ಅವರ ಜೀವನ ಚರಿತ್ರೆಯನ್ನು ಅಧ್ಯಯನ ಮಾಡುವ ಯಾರಿಗೂ ಕೂಡಾ ಅವರು ವಿವಾಹ ಮಾಡಿಕೊಂಡ ಪ್ರತಿಯೊಂದು ಪ್ರಸಂಗದಲ್ಲೂ ಅವರಿಗಿದ್ದ ಮಾನವ ಸ್ನೇಹವನ್ನೂ ಅವರ ಪ್ರಾಮಾಣಿಕತೆಯನ್ನೂ ಗುರುತಿಸಲು ಸಾಧ್ಯವಿದೆ. ಅದರ ಚಾರಿತ್ರಿಕ ಹಿನ್ನೆಲೆಗೆ ಪ್ರವೇಶಿಸಲು ಇಲ್ಲಿ ಅವಕಾಶವಿಲ್ಲದ ಕಾರಣ ನಾನು ಅದರ ವಿವರಣೆಗೆ ಮುಂದಾಗುವುದಿಲ್ಲ.

"ಮುಹಮ್ಮದ್ ಪೈಗಂಬರನು ಅನೇಕ ಮಂದಿ ಸ್ತ್ರೀಯರನ್ನು ಕೆಡಿಸಿದ್ದನು" ಎಂದು ಹೇಳುತ್ತಾ ಜೇಷ್ಠವರ್ಮನ್ ಹತ್ತು ಮಂದಿ ಸ್ತ್ರೀಯರ ಹೆಸರುಗಳನ್ನು ಬರೆದು ನಂತರ "ಇತ್ಯಾದಿ ಇತ್ಯಾದಿ ಹೆಸರಿನ ಅನೇಕ ಮಂದಿ ಸ್ತ್ರೀಯರು ಅವನ ಪತ್ನಿಯರಾಗಿದ್ದರು" ಎಂದು ಬರೆದಿದ್ದಾರೆ. ಮುಹಮ್ಮದ್ ಪೈಗಂಬರರ ಪತ್ನಿಯರ ಹೆಸರುಗಳನ್ನು ಬರೆಯುವಲ್ಲಿ ಲೇಖಕರು ಮಾಡಿರುವ ಕೆಲವು ಅಕ್ಷರ ತಪ್ಪುಗಳನ್ನು ಬಿಟ್ಟರೆ, ಆ ಹತ್ತು ಮಂದಿ ಸ್ತ್ರೀಯರು ಮುಹಮ್ಮದ್ ಪೈಗಂಬರರ ಪತ್ನಿಯರಾಗಿದ್ದರು ಎಂಬುದು ನಿಜ. ಜೇಷ್ಠವರ್ಮನರ ಕುಟಿಲತನ ಇಲ್ಲಿ ಅತ್ಯಂತ ಸ್ಪಷ್ಟವಾಗಿ ಎದ್ದು ಕಾಣುತ್ತದೆ. ಪೈಗಂಬರರ ಪತ್ನಿಯರ ದೀರ್ಘ ಪಟ್ಟಿಯನ್ನು ಕಷ್ಟಪಟ್ಟು ಸಂಗ್ರಹಿಸಿದ ಲೇಖಕರು ಆ ಪಟ್ಟಿಯಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರರ ಸಹಧರ್ಮಿಣಿಯಾಗಿದ್ದ ಮಾರಿಯಾ ಖಿಬ್‌ತಿಯಾ ಎಂಬವರ ಹೆಸರನ್ನು ಉದ್ದೇಶ ಪೂರ್ವಕವಾಗಿ ಕೈಬಿಟ್ಟಿದ್ದಾರೆ! ಮುಹಮ್ಮದ್ ಪೈಗಂಬರರನ್ನು ಹೀನಾಯಿಸಬೇಕೆಂಬ ದುರುದ್ದೇಶದ ಪಿತ್ತವು ಯಾವ ರೀತಿಯಲ್ಲಿ ಜೇಷ್ಠವರ್ಮನ್‌ರ ನೆತ್ತಿಗೇರಿತ್ತು ಎಂಬುದನ್ನು ನಿಷ್ಪಕ್ಷ ಚಿಂತಕರಾದ ಓದುಗರು ತಿಳಿದುಕೊಳ್ಳಬೇಕಾಗಿದೆ. ಅವರು ಬರೆಯುತ್ತಾರೆ: "ಮುಹಮ್ಮದ್ ಪೈಗಂಬರನು ತನ್ನ ಬೇರೆ ಬೇರೆ ಸ್ತ್ರೀಯರೊಡನೆ ಸಮಾಗಮಕ್ಕಾಗಿ ಬೇರೆ ಬೇರೆ ದಿನಗಳನ್ನು ನಿಶ್ಚಯಿಸಿದ್ದನು. ಒಂದು ದಿನ ಬೀಬೀ ಹಫ್ಸಾಳ ಬಾರಿ ಬಂತು. ಆದರೆ, ದುರ್ಭಾಗ್ಯದಿಂದ ಅವಳು ಆ ದಿನ ತನ್ನ ತವರು ಮನೆಗೆ ಹೋಗಿದ್ದಳು. ಮುಹಮ್ಮದನು ಹಫ್ಸಾಳ ಕೋಣೆಗೆ ಹೋದಾಗ ಅವಳು ಅಲ್ಲಿ ಇರದಿದ್ದರಿಂದ ಮಾರಿಯಾ ಕಬ್ತಿಯಾ ಎಂಬ ದಾಸಿಯೊಡನೆ ಸಮಾಗಮ ಮಾಡಿಕೊಂಡನು! ಇಂತಹ ಕಾಮುಕ ನಾಗಿದ್ದನು ಮುಹಮ್ಮದ್ ಪೈಗಂಬರನು! ಅವನ ಅನುಯಾಯಿಗಳು ಸಜ್ಜನರಾಗುವುದಾದರೂ ಹೇಗೆ ?"

ನ್ಯಾಯವೂ ನೀತಿಯೂ ಶ್ರೀ ಜೇಷ್ಠವರ್ಮನ್‌ರ ಲೇಖನದ ಮುಂದೆ ನಾಚಿಕೆಯಿಂದ ತಲೆ ತಗ್ಗಿಸುವಂತಾಗಿದೆ. ಮುಹಮ್ಮದ್ ಪೈಗಂಬರರ ಧರ್ಮಪತ್ನಿಯರ ಹೆಸರುಗಳನ್ನು ಬರೆಯುವಲ್ಲಿ ಹಝ್ರತ್ ಮಾರಿಯಾ ಖಿಬ್‌ತಿಯಾ ಎಂಬವರ ಹೆಸರನ್ನು ಅಲ್ಲಿ ಸೇರಿಸದೆ ಅವರನ್ನು ಪೈಗಂಬರರ ಒಬ್ಬ ದಾಸಿಯೆಂದು ಹೇಳುತ್ತಾ ಅವರೊಡನೆ ಸಮಾಗಮ ನಡೆಸಿದ್ದನ್ನು ಹೇಯವಾಗಿ ಚಿತ್ರೀಕರಿಸಿ ವಾಚಕರಿಗೆ ಮುಹಮ್ಮದ್ ಪೈಗಂಬರರ ಕುರಿತು ಜಿಗುಪ್ಸೆ ಮೂಡುವಂತೆ ಶ್ರೀ ಜೇಷ್ಠವರ್ಮನ್ ಪ್ರಯತ್ನಿಸಿದ್ದಾರೆ. ಈ ಪ್ರಪಂಚದಲ್ಲಿ ಇದುವರೆಗೆ ಜನಿಸಿದ ಹಾಗೂ ಇನ್ನು ಲೋಕಾವಸಾನದ ವರೆಗೆ ಜನಿಸಲಿರುವ ಸಮಸ್ತ ಮಾನವ ಕುಲಕ್ಕೆ ಮಾದರಿಯಾಗ ಬಲ್ಲಂತೆ ತನ್ನ ಪತ್ನಿಯರೆಡೆಯಲ್ಲಿ ಸಮತ್ವವನ್ನೂ ಅತ್ಯಂತ ನ್ಯಾಯ ನಿಷ್ಠೆಯನ್ನೂ ಪಾಲಿಸಿದ ಆ ಪ್ರವಾದಿ ವರ್ಯರು ತನ್ನ ಬೇರೆ ಬೇರೆ ಪತ್ನಿಯರೊಡನೆ ಸಹಯೋಗಕ್ಕಾಗಿ ಬೇರೆ ಬೇರೆ ದಿನಗಳನ್ನು ಗೊತ್ತುಪಡಿಸಿದ್ದರೆ ಅದರಲ್ಲಿ ಜೇಷ್ಠವರ್ಮನ್ ಆಶ್ಚರ್ಯಪಡಬೇಕಾದ ಅಂಶವೇನೂ ಇಲ್ಲವಲ್ಲ. ಹಾಗೂ ಒಂದು ದಿನ ಬೀಬೀ ಹಫ್ಸಾರ ಸರದಿ ಬಂದಾಗ ಅವರು ಆಕಸ್ಮಿಕವಾಗಿ ಮನೆಯಲ್ಲಿರದೆ ತನ್ನ ತವರಿಗೆ ಹೋಗಿದ್ದಿರಲೂ ಬಹುದು. ಇದು ಸಹ ಸಂಭಾವ್ಯವೇ. ಹಾಗೆಯೇ ಬೀಬೀ ಹಫ್ಸಾ ಮನೆಯಲ್ಲಿಲ್ಲದಿರುವುದನ್ನು ತಿಳಿದ ಪೈಗಂಬರರು ತನ್ನ ಬೇರೊಬ್ಬ ಪತ್ನಿಯಾದ ಮಾರಿಯಾ ಖಿಬ್‌ತಿಯಾ ಎಂಬವರೊಡನೆ ಅಂದು ಸಹಶಯನ ಮಾಡಿರಲೂ ಬಹುದು. ಅದರಲ್ಲೂ ಆಶ್ಚರ್ಯವೇನೂ ಇಲ್ಲ. ಸ್ವಲ್ಪವಾದರೂ ವಿವೇಕವಿರುವವರಿಗೆ ಇದರಲ್ಲಿ ಆಕ್ಷೇಪಾ

ರ್ಹವಾದ ಅಂಶವನ್ನು ಕಾಣಲು ಸಾಧ್ಯವಿಲ್ಲ. ಆದರೆ, ಈ ಪ್ರಸಂಗವನ್ನು ವಕ್ರವಾಗಿ ನಿರೂಪಿಸುತ್ತಾ "ಅವಳು ಅಲ್ಲಿ ಇರದಿದ್ದರಿಂದ ಮಾರಿಯಾ ಕಬ್ತಿಯಾ ಎಂಬ ದಾಸಿಯೊಡನೆ ಸಮಾಗಮ ಮಾಡಿಕೊಂಡನು. ಅಂತಹ ಕಾಮುಕನಾಗಿದ್ದನು ಮುಹಮ್ಮದ್ ಪೈಗಂಬರನು!" ಎಂದು ಬರೆದ ವೇದಪ್ರಕಾಶದ ಲೇಖಕರ ಮಸ್ತಿಷ್ಕದಲ್ಲಿ ತುಂಬಿಕೊಂಡಿರುವ ಇಸ್ಲಾಂ ಮತ ದ್ವೇಷದ ಬಗ್ಗೆ ನಿಜಕ್ಕೂ ನಮಗೆ ಆಶ್ಚರ್ಯವಾಗುತ್ತಿದೆ. ಶ್ರೀ ಜೇಷ್ಠವರ್ಮನ್ ಮತ್ತು ವೈದಿಕ ಸಾಹಿತ್ಯ ಪ್ರಕಾಶನದ ಎಲ್ಲ ಸದಸ್ಯರ ತಿಳುವಳಿಕೆಗಾಗಿ ಹೇಳುತ್ತೇನೆ – ಬೀಬೀ ಮಾರಿಯಾ ಖಿಬ್ತಿಯಾ ಎಂಬವರು ಹಝ್ರತ್ ಮುಹಮ್ಮದ್ ಪೈಗಂಬರರ ಧರ್ಮಪತ್ನಿಯಾಗಿದ್ದರು. ಮುಹಮ್ಮದ್ ಪೈಗಂಬರರ ಬಗ್ಗೆ ಅಷ್ಟು ಕೂಡಾ ತಿಳಿದಿಲ್ಲದ ಒಬ್ಬ ಅಜ್ಞಾನಿ ಅವರನ್ನು ಕಾಮುಕನೆಂದೂ ಅವರ ಅನುಯಾಯಿಗಳು ಸಜ್ಜನರಾಗುವುದಾದರೂ ಹೇಗೆ? ಎಂದೂ ಬರೆದಿದ್ದಾರೆ. ದಾರ್ಷ್ಟ್ಯದ ಪರಮಾವಧಿ ಎಂದಲ್ಲದೆ ಮತ್ತೇನು ಹೇಳಲಿ? ಪತ್ರಿಕಾ ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿಕೊಂಡು ವೇದ ಪ್ರಕಾಶವು ಈ ಆಧಾರ ರಹಿತ ಕ್ಷುದ್ರ ಲೇಖನವನ್ನು ಪ್ರಕಟಿಸಿದೆ.

## ವೇದಪ್ರಕಾಶದ ಡೊಂಬರಾಟ

ವೇದ ಪ್ರಕಾಶವು "ಇಸ್ಲಾಂ ಮತದ ಮೇಲೆ ಒಂದು ವಿಹಂಗಮ ದೃಷ್ಟಿ" ಎಂಬ ಲೇಖನವನ್ನು ತನ್ನ ಜನವರಿ ಮತ್ತು ಫೆಬ್ರವರಿ ತಿಂಗಳ ಸಂಚಿಕೆಗಳಲ್ಲಿ ಪ್ರಕಟಿಸಿದ ಬಳಿಕ ಇದರಿಂದ ಉದ್ರೇಕಗೊಂಡ ದಕ್ಷಿಣ ಕನ್ನಡದ ಮುಸಲ್ಮಾನರು ಅವರವರ ಶಕ್ತ್ಯಾನುಸಾರ ಹಾಗೂ ಅವರಿಗೆ ತಿಳಿದ ವಿಧಾನದಲ್ಲಿ ಆ ಲೇಖನಕ್ಕೆ ಪ್ರತಿಭಟನೆ ಸಲ್ಲಿಸಿದರು. ಇದರಿಂದಾಗಿ, ರಾಜ್ಯ ಪೋಲೀಸ್ ಇಲಾಖೆಯೂ ಸಹ ವೇದ ಪ್ರಕಾಶದ ಮೇಲೆ ಕಾನೂನು ಕ್ರಮ ಕೈಗೊಂಡಿತು. ನಂತರ 1983ನೇ ಎಪ್ರಿಲ್ ತಿಂಗಳ 'ವೇದಪ್ರಕಾಶ' ಮಾಸಿಕದಲ್ಲಿ ಇದರ ಬಗ್ಗೆ ಒಂದು ಸ್ಪಷ್ಟೀಕರಣ ಲೇಖನವನ್ನು ಪ್ರಕಟಿಸಲಾಗಿದೆ ಹಾಗೂ ವೇದಪ್ರಕಾಶದ ನಿಲುವನ್ನು ಸಹ ಅದರಲ್ಲಿ ತಿಳಿಸಲಾಗಿದೆ. ಎರಡು ಭಾಗಗಳಾಗಿ ದೀರ್ಘವಾಗಿ ಬರೆಯಲ್ಪಟ್ಟ ಆ ಸ್ಪಷ್ಟೀಕರಣ ಲೇಖನಗಳನ್ನು ಓದಿದ ಯಾರಿಗೂ ಆಶ್ಚರ್ಯವಾಗಿರುವುದರಲ್ಲಿ ಸಂದೇಹವಿಲ್ಲ. "ವಿಷಾದಿಸುತ್ತೇವೆ" ಎಂಬ ಶಿರೋನಾಮೆಯ ಕೆಳಗೆ ವೇದ ಪ್ರಕಾಶ ಈ ರೀತಿ ಬರೆಯುತ್ತದೆ:

ಪ್ರಕಾಶಕರು ವಾಹನಾಪಘಾತಕ್ಕೀಡಾದ 1982 ನೇ ಜನವರಿಯಿಂದ ಹೊರಗಿನಿಂದ ಬರುವ ಲೇಖನಗಳ ಪರಿಶೀಲನೆ ಅಸಾಧ್ಯವಾಗಿ 1983ರ ಜನವರಿ ಮತ್ತು ಫೆಬ್ರವರಿ ತಿಂಗಳ ಸಂಚಿಕೆಗಳಲ್ಲಿ ಪ್ರಕಟವಾದ "ಇಸ್ಲಾಂ ಮತದ ಮೇಲೆ ಒಂದು ವಿಹಂಗಮ ದೃಷ್ಟಿ" ಎಂಬ ಲೇಖನವೊಂದರಿಂದ ನಮ್ಮ ಮುಸ್ಲಿಂ ಬಾಂಧವರಾದ ಯಾರಿಗಾದರೂ ಅಸಮಾಧಾನವಾಗಿದ್ದಲ್ಲಿ ಅಥವಾ ತಪ್ಪು ಅಭಿಪ್ರಾಯ ಮೂಡಿದ್ದಲ್ಲಿ ಅದರಿಂದ ನಮಗೆಲ್ಲ ಅತೀವ ದುಃಖವಾಗುತ್ತಿದೆ...... ಯಾರಿಗೂ ನೋವನ್ನುಂಟುಮಾಡುವ ಇಚ್ಛೆ ಸರ್ವಥಾ–ಸರ್ವದಾ ನಮಗಿಲ್ಲವೆಂಬುದನ್ನು ಆತ್ಮಸಾಕ್ಷಿಯಾಗಿ ಹೇಳುತ್ತೇವೆ. ಯಾವುದೇ ದುರುದ್ದೇಶದಿಂದಲೂ ಈ ಲೇಖನ ಪ್ರಕಟವಾಗಿಲ್ಲ. ......ಪವಿತ್ರ ಕುರಾನ್ ವಿಷಯದಲ್ಲಾಗಲಿ, ಕ್ಷಮಾಗುಣದ ಪ್ರತಿಮೂರ್ತಿಯಾದ ಮಾನ್ಯ ಪ್ರವಾದಿ ಮುಹಮ್ಮದ್ ಪೈಗಂಬರರ ವಿಷಯದಲ್ಲಾಗಲಿ ನಮಗೆ ತುಂಬಾ ಗೌರವವಿದೆ.

—ವೇದಪ್ರಕಾಶ ಎಪ್ರಿಲ್ 83
(ಅಡಿಗೆರೆ ವೇದಪ್ರಕಾಶದ್ದಲ್ಲ)

ನಿಜವಾಗಿಯೂ ಹೇಳುವುದಾದರೆ, ವೇದಪ್ರಕಾಶದ ಜನವರಿ ಮತ್ತು ಫೆಬ್ರವರಿ ಸಂಚಿಕೆಗಳಲ್ಲಿ ಪ್ರಕಟವಾದ ಲೇಖನವನ್ನು ಪುನಃ ಒಮ್ಮೆ ಓದಿ ನೋಡುವ ಯಾವನೇ ನಿಷ್ಪಕ್ಷಮತಿಯೂ "ಪವಿತ್ರ ಖುರ್‌ಆನ್ ವಿಷಯದಲ್ಲಾಗಲಿ, ಕ್ಷಮಾಗುಣದ ಪ್ರತಿಮೂರ್ತಿಯಾದ ಮಾನ್ಯ ಪ್ರವಾದಿ ಮುಹಮ್ಮದ್ ಪೈಗಂಬರರ ವಿಷಯದಲ್ಲಾಗಲಿ ನಮಗೆ ತುಂಬಾ ಗೌರವವಿದೆ" ಎಂದೂ "ಯಾರಿಗೂ ನೋವನ್ನುಂಟುಮಾಡುವ ಇಚ್ಛೆ ಸರ್ವಥಾ–ಸರ್ವದಾ ನಮಗಿಲ್ಲವೆಂಬುದನ್ನು ಆತ್ಮಸಾಕ್ಷಿಯಾಗಿ ಹೇಳುತ್ತೇವೆ" ಎಂದೂ ಹೇಳುವ ವೇದಪ್ರಕಾಶದ ಮಾತುಗಳನ್ನು ನಂಬಲು ಕಷ್ಟಪಡಬಹುದು. ಆದರೂ ವೇದಪ್ರಕಾಶದ ವಿಷಾದವನ್ನೂ ಅದರ ಆತ್ಮಸಾಕ್ಷಿಯ ಮಾತನ್ನೂ ನಾವು ಬೇಶರತ್ ಒಪ್ಪಿಕೊಳ್ಳೋಣ. ಆದರೆ, ಕಷ್ಟ! ವೇದಪ್ರಕಾಶವು ಅದೇ ಸಂಚಿಕೆಯಲ್ಲಿ ಪುನಃ ಇಸ್ಲಾಂ ಧರ್ಮವನ್ನೂ ಪವಿತ್ರ ಖುರ್‌ಆನನ್ನೂ ಮುಹಮ್ಮದ್ ಪೈಗಂಬರರನ್ನೂ ನಿರಾಧಾರವಾದ ದೋಷಾರೋಪಣೆಗಳಿಗೆ ಗುರಿಪಡಿಸುವ ಸಾಹಸಮಾಡಿದೆ!

ವಿಷಾದವನ್ನು ಮುಂದುವರಿಸಿ ಸಂಪಾದಕರು ಈ ರೀತಿ ಬರೆಯುತ್ತಾರೆ :

"ಸ್ವಯಂ ಲೇಖಕರಾದ ಶ್ರೀ ಜೇಷ್ಮವರ್ಮ ನ್‌ರೂ ಸಹ ಸರ್ವಥಾ ಯಾವುದೇ ದುರುದ್ದೇಶದವರಲ್ಲ. ಅವರ ವಿಶ್ಲೇಷಣಾತ್ಮಕವಾದ, ಜನ ಜಾಗೃತಿಯನ್ನುಂಟು ಮಾಡುವ 38 ಲೇಖನಗಳು ಈ ಹಿಂದೆ 'ವೇದ ಪ್ರಕಾಶ'ದಲ್ಲಿ ಪ್ರಕಟವಾಗಿವೆ……ಮೇಲೆ ಹೇಳಿದ ವೈಚಾರಿಕವಾದ ಅವರ ಲೇಖನ ಅವರ ಸ್ವಂತ ಕೃತಿಯಲ್ಲ. ಮುಂಬಯಿ ನಿಂದ ಹೊರಡುವ "ಮಸೂರಾಶ್ರಮ ಪತ್ರಿಕೆ"ಯ 1981ನೇ ಜನವರಿಯಲ್ಲಿ ಪ್ರಕಟವಾದ್ದ ಶ್ರೀಮಾನ್ ಆರ್. ಡಿ. ಶರ್ಮಾರ ಇಂಗ್ಲೀಷ್ ಲೇಖನದ ಅನುವಾದ ಮಾತ್ರವಾಗಿದೆ. ಶ್ರೀಮಾನ್ ಆರ್. ಡಿ. ಶರ್ಮರವರೂ ಸಹ ಸ್ವಯಂ ವಿದ್ವಾಂಸರಾದ ಕಾರಣ ಆಧಾರ ಸಹಿತವಾಗಿಯೇ ಅದನ್ನು ಪ್ರಕಟಿಸಿದ್ದಾರೆಂದು ತಿಳಿದು ಬರುತ್ತದೆ. ಈ ಸತ್ಯವನ್ನು ಇಸ್ಲಾಂ ಧರ್ಮದ ಅಭಿಮಾನೀ ಅನುಯಾಯಿಗಳು ಅರಿತುಕೊಳ್ಳಬೇಕಾಗಿ ವಿನಂತಿ."

ಮಾನವೀಯತೆಯೇ ಲಜ್ಜಿಸಿಕೊಳ್ಳುವಂತಹ ಮಾತುಗಳಿಂದ ಮುಹಮ್ಮದ್ ಪೈಗಂಬರರನ್ನು ಆಕ್ಷೇಪಿಸಿದ ವೇದಪ್ರಕಾಶವು ಈಗ ಲೇಖಕ ಶ್ರೀ ಜೇಷ್ಮವರ್ಮನ್ ಮತ್ತು ಅವರ ಲೇಖನದ ರಕ್ಷಣೆಗೆ ಹೊರಟಿದೆ, "ಶ್ರೀಮಾನ್ ಆರ್. ಡಿ. ಶರ್ಮಾರವರೂ ಸಹ ಸ್ವಯಂ ವಿದ್ವಾಂಸರಾದ ಕಾರಣ ಆಧಾರ ಸಹಿತವಾಗಿಯೇ ಅದನ್ನು ಪ್ರಕಟಿಸಿದ್ದಾರೆಂದು ತಿಳಿದು ಬರುತ್ತದೆ" ಎಂದು ಹೇಳುತ್ತಾ ವೇದಪ್ರಕಾಶವು ತಾವು ಮೊದಲು ಪ್ರಕಟಿಸಿದ ಲೇಖನವನ್ನು ಸಮರ್ಥಿಸಿಕೊಂಡಿದೆ. ವೇದಪ್ರಕಾಶ ಮುಂದುವರಿಸುತ್ತದೆ :

ಅವರ (ಮುಹಮ್ಮದ್ ಪೈಗಂಬರರ) ಜೀವನದ ಸಂಘರ್ಷ ಕಾಲದಲ್ಲಿ ಅವರ ಎದುರಾಳಿಗಳಿಂದ ಕೆಲವು ಅಪಚಾರಗಳು ನಡೆದಿರಬೇಕು. ಅವರು ತಮ್ಮ ಸ್ವಾರ್ಥ ಸಾಧನೆಗಾಗಿ ಧರ್ಮ ಗ್ರಂಥಗಳಲ್ಲಿ ಅನೇಕ ಬದಲಾವಣೆಗಳನ್ನು ಮಾಡಿದ್ದಾರೆಂದು ತಿಳಿದು ಬರುವುದು. ಕುರಾನ್ ಅವತರಣಿಕೆ ಒಂದೇ ಸಲ ಆಗದ್ದರಿಂದ ವಿರೋಧಿಗಳಿಂದ ಅನೇಕ ವಿಪರ್ಯಾಸಗಳು ನಡೆದು ಹಜರತ್ ಮುಹಮ್ಮದ್‌ರನ್ನು ಅವಹೇಳನ ಮಾಡಲು ಮೂಲಕ್ಕೆ ವ್ಯತಿರಿಕ್ತವಾದ ಪ್ರಕ್ಷಿಪ್ತ ಭಾಗವು ಗ್ರಂಥದಲ್ಲಿ ಸೇರಿಸಲ್ಪಟ್ಟಿರಬೇಕೆಂದು ಯಾರಾದರೂ ಹೇಳಬಹುದು.

ವೇದಪ್ರಕಾಶದ ಸಂಪಾದಕರು ಹೇಳುವಂತೆ ಪವಿತ್ರ ಖುರ್‌ಆನಿನಲ್ಲಿ ಮುಹಮ್ಮದ್ ಪೈಗಂಬರರ ಕಾಲದಲ್ಲೂ ಅದರ ನಂತರವೂ ಬೇಕಾದಷ್ಟು ಬದಲಾವಣೆಯಾಗಿ ಅದರಲ್ಲಿ ಪ್ರಕ್ಷಿಪ್ತ ವಚನಗಳು ಸೇರಿಕೊಂಡಿವೆ. ಈ ರೀತಿ ಪ್ರಕ್ಷಿಪ್ತ ವಚನಗಳು ಖುರ್‌ಆನಿನಲ್ಲಿ ಸೇರಿರುವುದರಿಂದ ವೇದಪ್ರಕಾಶವು ಪ್ರಮಾದವಶಾತ್ ಮುಹಮ್ಮದ್ ಪೈಗಂಬರರನ್ನು ಅವಹೇಳಿಸಿದೆ ! ಆದರೆ, ನಮಗೆ ಇನ್ನೂ ಅರ್ಥವಾಗದ ಸಂಗತಿಯೆಂದರೆ, ವೇದಪ್ರಕಾಶ ಹೇಳುವಂತೆ ಖುರ್‌ಆನಿನಲ್ಲಿ ಮೂಲ ಪ್ರತಿಗಿಂತ ಅನೇಕ ಬದಲಾವಣೆಗಳು ಉಂಟಾಗಿದ್ದರೂ ಸಹ ಮುಹಮ್ಮದ್ ಪೈಗಂಬರರು ಕಾಮುಕ, ಮಹಾಸ್ತ್ರೀಲಂಪಟ, ಅನೇಕ ಹೆಣ್ಣು ಮಕ್ಕಳನ್ನು ಕೆಡಿಸಿದವ, ಕ್ರೂರ, ವಿಶ್ವಾಸಘಾತಕ, ಅತ್ಯಾಚಾರಗಳನ್ನು ಮಾಡುವುದರಲ್ಲಿ ನಿಪುಣ (ನವೂದುಬಿಲ್ಲಾ) ಹೇಗೆ ಆಗುತ್ತಾರೆಂಬುದು ನಮಗಿನ್ನೂ ಬ್ರಹ್ಮ ರಹಸ್ಯವಾಗಿಯೇ ಉಳಿದಿದೆ. ಮೂಲಕ್ಕೆ ವ್ಯತಿರಿಕ್ತವಾದ ಕೆಲವು ವಚನಗಳನ್ನು ಪೈಗಂಬರರ ಶತ್ರುಗಳು ಖುರ್‌ಆನಿನಲ್ಲಿ ಸೇರಿಸಿರುವುದರಿಂದ (!) ವೇದಪ್ರಕಾಶವು ಪ್ರಮಾದವಶಾತ್ ಆ ಪೈಗಂಬರರನ್ನು ಈ ರೀತಿಯೆಲ್ಲಾ ಹೀನಾಯಿಸಲು ಕಾರಣವಾಯಿತೇನು? ಅಥವಾ ಖುರ್‌ಆನಿನಲ್ಲಿ ಸೇರಿಸಲ್ಪಟ್ಟ ಆ ಪ್ರಕ್ಷಿಪ್ತ ಭಾಗಗಳಲ್ಲಿ ಪೈಗಂಬರರನ್ನು ಈ ರೀತಿಯೆಲ್ಲಾ ಹೇಳಿದೆಯೇ? ಇಮಾಂ ಸಾಹೇಬರಿಗೂ ಗೋಕುಲಾಷ್ಟಮಿಗೂ ಏನು ಸಂಬಂಧವೆಂದು ನಮಗೆ ಅರ್ಥವಾಗುವುದಿಲ್ಲ. ಇಸ್ಲಾಂ ಧರ್ಮದ ಪ್ರವಾದಿಯನ್ನು ಮನ ಬಂದಂತೆ ಬೈದು ಭಂಗಿಸಿದ ವೇದಪ್ರಕಾಶಕ್ಕೆ ಈಗ ಭೋದೋಯವಾಗಿದೆ. ಹೀಗೆಲ್ಲಾ ಅವಹೇಳನ ಮಾಡಲು ಮೂಲ ಖುರ್‌ಆನಿನಲ್ಲಿ ಅನೇಕ ಬದಲಾವಣೆಗಳು ಆಗಿರುವುದೇ ಕಾರಣವೆಂಬ ವಿಚಿತ್ರವಾದ ಕಾರಣವನ್ನು ವೇದಪ್ರಕಾಶ ಈಗ ಮುಂದಿಟ್ಟಿದೆ. ಮರೀಚಿಕೆಯ ಮರೆಯಲ್ಲಿ ಅಡಗಿಕೊಳ್ಳಲು ಹವಣಿಸುವ ವೇದಪ್ರಕಾಶದ ಮೇಲೆ ನಮಗೆ ಕನಿಕರ ತೋರುತ್ತದೆ.

ಮತ್ತೂ ವಿಚಿತ್ರವೇನೆಂದರೆ, ವೇದಪ್ರಕಾಶವು ತಾನು ಪ್ರಕಟಿಸಿದ್ದೆಲ್ಲವೂ ಆಧಾರ ಸಹಿತವೇ ಆಗಿದೆ ಎಂದು ಕೂಡಾ ಹೇಳುತ್ತದೆ! ಅದರ ದೃಷ್ಟಿಯಲ್ಲಿ ಪ್ರೊ। ಜೇಷ್ಮ

ವರ್ಮನ್ ಒಬ್ಬ ಮಹಾ ವಿದ್ವಾಂಸ. ಮೂಲ ಲೇಖಕ ಆರ್. ಡಿ. ಶರ್ಮ ಮತ್ತೂ ದೊಡ್ಡ ವಿದ್ವಾಂಸ. ಆದುದರಿಂದ ಅವರ ಲೇಖನಗಳು ಆಧಾರವಿಲ್ಲದ್ದು ಹೇಗೆ ಆದೀತು? ಈ ಎರಡು ಮಹಾವಿದ್ವಾಂಸರು ಸೇರಿ ಕಂಡು ಹಿಡಿದ ನೂತನವಾದ ಸಂಶೋಧನೆಯೇ ಪವಿತ್ರ ಖುರ್ಆನಿನಲ್ಲಿ ಮೂಲ ಪ್ರತಿಗೆ ವ್ಯತಿರಿಕ್ತವಾದ ಅನೇಕ ಪ್ರಕ್ಷಿಪ್ತ ಭಾಗಗಳು ಸೇರಿಕೊಂಡಿವೆ ಎಂಬುದು! ಈಯೆರಡು ಮಹಾ ವಿದ್ವಾಂಸರ ರಾಗಕ್ಕೆ ಸರಿಯಾಗಿ ಸಂಪಾದಕರ ಒಂದು ಪಲ್ಲವಿ— "ಕುರಾನ್ ತರ್ಜುಮೆ ಅನೇಕ ವಿದ್ವಾಂಸರಿಂದಾಗಿದೆ. ಬೇರೆ ಬೇರೆ ತರ್ಜುಮೆದಾರರಿಂದ ಆಯತ್‌ಗಳ ಸಂಖ್ಯೆಗಳಲ್ಲಿ ಈ ರೀತಿ ಭೇದವಿದೆ. 6000, 6212, 6218, 6225, 6236, 6250, 6616, 7301, 7000, ಕನ್ನಡ 6236." ನಗಬೇಕೋ ಅಳಬೇಕೋ ಎಂದು ತಿಳಿಯುವುದಿಲ್ಲ. ಈ ವೇದ ಪ್ರಕಾಶಕರು ಮತ ಚರಿತ್ರೆಗಳ ಬಗ್ಗೆ ಎಷ್ಟೊಂದು ಅಲ್ಪಜ್ಞರು!

ಪವಿತ್ರ ಖುರ್ಆನ್ ಒಂದನ್ನುಳಿದು ಲೋಕದಲ್ಲಿ ಇಂದು ಅಸ್ತಿತ್ವದಲ್ಲಿರುವ ಎಲ್ಲಾ ಮತ ಗ್ರಂಥಗಳೂ ಕಾಲಾಂತರದಲ್ಲಿ ಮಾನವರ ಹಸ್ತಕ್ಷೇಪಕ್ಕೆ ಗುರಿಯಾದವುಗಳೆಂದೂ ಇಂದು ನಮ್ಮ ಮುಂದಿರುವ ಅದರ ಪ್ರತಿಗಳಿಗೂ ಮೂಲ ಗ್ರಂಥಕ್ಕೂ ಬಹಳಷ್ಟು ವ್ಯತ್ಯಾಸವಿದೆಯೆಂದೂ ಆಧಾರ ಸಹಿತವಾಗಿ ನಿರೂಪಿಸಲು ಸಾಧ್ಯವಿದೆ. ಆದರೆ, ಪವಿತ್ರ ಖುರ್ಆನ್ ಈ ರೀತಿಯ ಮಾನವ ಹಸ್ತಕ್ಷೇಪಗಳಿಂದೆಲ್ಲಾ ವಿಮುಕ್ತವಾಗಿರುವ ಏಕಮಾತ್ರ ದೈವಿಕ ಗ್ರಂಥವಾಗಿರುತ್ತದೆ.

ಇತರ ಮತ ಗ್ರಂಥಗಳಿಗಿಂತ ಪವಿತ್ರ ಖುರ್ಆನಿಗೆ ಪ್ರಧಾನವಾದ ಮೂರು ವಿಶೇಷತೆಗಳಿವೆ. ಅವುಗಳು ಯಾವುವೆಂದರೆ—

ಒಂದನೆಯದಾಗಿ, ಇತರ ಎಲ್ಲಾ ದಿವ್ಯ ಗ್ರಂಥಗಳೂ ಒಂದು ಪ್ರತ್ಯೇಕ ಕಾಲಪರಿಧಿಗೆ ಮಾತ್ರ ಸಂಬಂಧ ಪಟ್ಟದ್ದಾಗಿವೆ. ಅವುಗಳ ಚಲಾವಣೆಯು ಲೋಕಾವಸಾನದ ವರೆಗೂ ಮುಂದುವರಿಯದೆ ಒಂದು ನಿರ್ದಿಷ್ಟ ಕಾಲದ ವರೆಗೆ ಮಾತ್ರ ಅದು ಅನುಕರಣಾ ಯೋಗ್ಯವಾಗಿದ್ದು ನಂತರ ಅವುಗಳು ಕಾಲಹರಣಕ್ಕೆ ಗುರಿಯಾಗುತ್ತವೆ. ಆದರೆ, ಪವಿತ್ರ ಖುರ್ಆನ್ ಲೋಕಾಂತ್ಯದ ವರೆಗೂ ಜಾರಿಯಲ್ಲಿರುವ, ಅದನ್ನು ಕಾಲಹರಣ ಪಡಿಸಿಕೊಂಡು ಇನ್ನೊಂದು ಗ್ರಂಥದ ಅವತರಣೆ ಉಂಟಾಗಲಾರದಂತಹ ಸರ್ವಕಾಲೀನ ವೇದ ಗ್ರಂಥವಾಗಿರುತ್ತದೆ. ಅಂತ್ಯದಿನದ ವರೆಗೂ ಅದು ಅನುಸರಣಾ ಯೋಗ್ಯವಾಗಿ ನೆಲೆ ನಿಲ್ಲುವುದು. ಪವಿತ್ರ ಖುರ್ಆನ್ ಮತ್ತು ಇತರ ಧರ್ಮ ಗ್ರಂಥಗಳನ್ನು ನಿಷ್ಪಕ್ಷವಾಗಿಯೂ ಗಹ್ವರವಾಗಿಯೂ ಅಧ್ಯಯನ ನಡೆಸಿದರೆ ಈ ವ್ಯತ್ಯಾಸವು ಗೋಚರವಾಗಬಹುದು.

ಎರಡನೆಯದಾಗಿ, ಇತರ ಎಲ್ಲಾ ಧರ್ಮಗ್ರಂಥಗಳೂ ಒಂದು ಪ್ರತ್ಯೇಕ ಜನವಿಭಾಗಕ್ಕೆ ಅಥವಾ ಒಂದು ನಿರ್ದಿಷ್ಟ ದೇಶದವರಿಗೆ ಮಾತ್ರ ಅನ್ವಯಿಸುವಂಥದ್ದಾಗಿದ್ದರೆ, ಪವಿತ್ರ ಖುರ್ಆನ್ ಸಮಸ್ತ ಮಾನವ ಜನಾಂಗಕ್ಕಾಗಿಯೂ ಸಮಸ್ತ ಲೋಕಕ್ಕಾಗಿಯೂ ಅವತೀರ್ಣವಾದಂತಹ ಒಂದು ಸಾರ್ವಲೌಕಿಕ ದಿವ್ಯ ಗ್ರಂಥವಾಗಿದೆ. ಯಾವುದೇ ಮತ ಗ್ರಂಥವನ್ನೂ ಪವಿತ್ರ ಖುರ್ಆನನ್ನೂ ಶ್ರದ್ಧೆಯಿಂದ ಓದುವ ಯಾರಿಗೂ ಈ ಸಂಗತಿ ಗೋಚರವಾಗಬಹುದು.

ಮೂರನೆಯದಾಗಿ, ಇತರ ಎಲ್ಲಾ ವೇದಗ್ರಂಥಗಳೂ ಕಾಲಾಂತರದಲ್ಲಿ ಅದರ ಅನುಯಾಯಿಗಳಿಂದಲೇ ಹಸ್ತಕ್ಷೇಪಕ್ಕೆ ಗುರಿಯಾಗಿ ರೂಪಾಂತರಗೊಂಡಿದ್ದರೆ, ಪವಿತ್ರ ಖುರ್ಆನ್ ಆ ರೀತಿಯ ಯಾವುದೇ ಮಾನವ ಹಸ್ತಕ್ಷೇಪಕ್ಕೂ ಗುರಿಯಾಗದೆ ಅಲ್ಲಾಹನಿಂದ ಮುಹಮ್ಮದ್ ಪೈಗಂಬರರಿಗೆ ಯಾವ ರೀತಿ ಅವತೀರ್ಣವಾಯಿತೋ ಅದೇ ರೀತಿ ಸಂರಕ್ಷಿಸಲ್ಪಟ್ಟ ಏಕ ಮಾತ್ರ ದೈವಿಕ ಗ್ರಂಥವಾಗಿದೆ. ಅದು ಸಮಸ್ತ ಜಗತ್ತಿಗೂ ಎಲ್ಲಾ ಮಾನವರಾಶಿಗೂ ಅನ್ವಯವಾಗುವಂತಹ ಮತ್ತು ಲೋಕಾವಸಾನದ ವರೆಗೂ ನೆಲೆನಿಲ್ಲಬೇಕಾದ ಧರ್ಮ ಗ್ರಂಥವಾದುದರಿಂದ ಮಾನವರ ಹಸ್ತಕ್ಷೇಪದಿಂದ ಅತೀತವಾಗಿ ಮೂಲ ರೂಪದಲ್ಲೇ ಲೋಕಾವಸಾನದ ವರೆಗೂ ಸಂರಕ್ಷಿಸಲ್ಪಡಬೇಕಾದುದು ಅಗತ್ಯವೂ ಕೂಡ ಆಗಿರುತ್ತದೆ.

ಪವಿತ್ರ ಖುರ್ಆನಿನಲ್ಲಿ ಮೂಲಕ್ಕೆ ವ್ಯತಿರಿಕ್ತವಾದ ಪ್ರಕ್ಷಿಪ್ತ ಭಾಗವು ಸೇರಿಸಲ್ಪಟ್ಟಿದೆ ಎಂದು ವೇದಪ್ರಕಾಶವು ಹೇಳುತ್ತದೆ. ಪವಿತ್ರ ಖುರ್ಆನಿನಲ್ಲಿ ಒಂದೇ ಒಂದು ಅಕ್ಷರವಾಗಲೀ ಒಂದೇ ಒಂದು ಬಿಂದುವಾಗಲೀ ನಂತರದ ಕಾಲದಲ್ಲಿ ಸೇರಿಸಲ್ಪಟ್ಟಿದೆ ಅಥವಾ ನೀಗಿಸಲ್ಪಟ್ಟಿದೆ ಎಂಬುದನ್ನು ಆಧಾರ ಸಹಿತ ನಿರೂಪಿಸಲು ನಾವು ವೇದಪ್ರಕಾಶವನ್ನು ಆಹ್ವಾನಿಸುತ್ತೇವೆ. ಮಹಾವಿದ್ವಾಂಸರಾದ ಅದರ ಯಾರೇ ಲೇಖಕರಾಗಲಿ ಸಂಪಾದಕರಾಗಲಿ ಅಥವಾ ಎಲ್ಲರೂ

ಒಟ್ಟಾಗಿಯಾದರೂ ನಮ್ಮ ಈ ಆಹ್ವಾನವನ್ನು ಸ್ವೀಕರಿಸಲು ಮುಂದೆ ಬರಲಿ !

## ಪವಿತ್ರ ಖುರ್‌ಆನಿಗೆ ದೈವಿಕ ಸಂರಕ್ಷಣೆ

ಪವಿತ್ರ ಖುರ್‌ಆನ್ ಒಂದೆಡೆ ಈ ರೀತಿ ಹೇಳುತ್ತದೆ: "ಇನ್ನಾ ನಹ್‌ನು ನಸ್ಸಲ್‌ನದ್ದಿಕ್‌ರ ವ ಇನ್ನಾ ಲಹು ಲಹಾಫಿಸೂನ್"

(ಖಂಡಿತವಾಗಿಯೂ ಈ ವೃತ್ತಾಂತವನ್ನು — ಖುರ್‌ಆನನ್ನು-ಅವತೀರ್ಣ ಗೊಳಿಸಿದ್ದು ನಾವು; ನಿಶ್ಚಯವಾಗಿಯೂ ಇದರ ಸಂರಕ್ಷಕರೂ ನಾವೇ ಆಗಿದ್ದೇವೆ). ಆದುದರಿಂದ ಇತರ ಯಾವುದೇ ಧರ್ಮಗ್ರಂಥಗಳಿಗೀತಲೂ ಭಿನ್ನವಾದ ರೀತಿಯಲ್ಲಿ ಪವಿತ್ರ ಖುರ್‌ಆನಿನ ಸಂರಕ್ಷಣಾ ಜವಾಬ್ದಾರಿಕೆಯನ್ನು ಪರಮಾತ್ಮನೇ ವಹಿಸಿಕೊಂಡಿರುವನು ಎಂಬುದು ಅದರ ಒಂದು ವೈಶಿಷ್ಟ್ಯವಾಗಿದೆ. ಅದರ ಪತ್ಯ ಸಂರಕ್ಷಣೆಗೆ ಬಾಹ್ಯವಾದ ಏರ್ಪಾಡುಗಳು ಈ ರೀತಿ ಉಂಟಾಯಿತು:

ಹಝ್ರತ್ ಮುಹಮ್ಮದ್ ಪೈಗಂಬರರಿಗೆ ಆ ಪವಿತ್ರ ಗ್ರಂಥವು ಒಮ್ಮಿಂದೊಮ್ಮೆಲೇ ಅವತೀರ್ಣವಾಗದೆ ಅವರ 40 ಮತ್ತು 63ನೇ ವಯಸ್ಸಿನೆಡೆಯಲ್ಲಿ ಸ್ವಲ್ಪ ಸ್ವಲ್ಪವಾಗಿಯೂ ಸಂದರ್ಭೋಚಿತವಾಗಿಯೂ ಅವತೀರ್ಣಗೊಂಡಿತು. ಪೈಗಂಬರರು ತನಗೆ ಲಭಿಸಿದ ದೈವವಾಣಿಗಳನ್ನು ಆಗಾಗಲೇ ಬರೆದು ದಾಖಲಿಸಿಕೊಳ್ಳಲು ತನ್ನ ಶಿಷ್ಯರಲ್ಲಿ 15 ಮಂದಿಯನ್ನು ಪ್ರತ್ಯೇಕವಾಗಿ ನಿಯೋಗಿಸಿದ್ದರು. ದೇವರಿಂದ ಒಂದು ವಚನವಾದರೂ ಪೈಗಂಬರರಿಗೆ ಅವತೀರ್ಣವಾಯಿತೆಂದಾದರೆ, ಇವರಲ್ಲಿ ಯಾರಿಗಾದರೂ ತಿಳಿಸಿ ಪೈಗಂಬರರು ಆ ವಚನವನ್ನು ಉಚ್ಚರಿಸಿ ಆಗಲೇ ಅವರಿಂದ ಬರೆಯಿಸುತ್ತಿದ್ದರು. ದೇವವಾಣಿಯಾದ ಖುರ್‌ಆನ್ ವಚನಗಳನ್ನಲ್ಲದೆ ತಾನು ಹೇಳುವ ಇತರ ಯಾವುದೇ ಮಾತುಗಳನ್ನೂ ತನ್ನ ಮರಣದ ಪರಿಯಂತ ಬರೆದಿಡಬಾರದೆಂಬುದಾಗಿ ಪೈಗಂಬರರು ಕಟ್ಟಾಜ್ಞೆ ಮಾಡಿದ್ದರು. ಈ ರೀತಿಯಾಗಿ ಪವಿತ್ರ ಖುರ್‌ಆನನ್ನು ಅವತೀರ್ಣವಾದಾಗಲೇ ಬರೆದು ದಾಖಲೆ ಮಾಡಲಾಯಿತು. ಅದರಲ್ಲಿ ಬೇರೆ ಯಾವ ವಚನಗಳೂ (ಪೈಗಂಬರರ ವಚನಗಳು ಕೂಡ) ಸೇರಿಕೊಳ್ಳುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಪವಿತ್ರ ಖುರ್‌ಆನಿನ ವಚನಗಳನ್ನು ಮುಸ್ಲಿಮರು ಕಂಠಪಾಠ ಮಾಡಬೇಕೆಂಬುದಾಗಿ ಸಹ ಪೈಗಂಬರರು ಉಪದೇಶಿಸಿದರು. ಪ್ರತಿ ದಿನ ಐದು ವೇಳೆಯ ನಮಾಜಿನಲ್ಲೂ ಪವಿತ್ರ ಖುರ್‌ಆನಿನ ಯಾವುದಾದರೂ ಭಾಗಗಳನ್ನು ಓದಬೇಕಾದುದು ಪ್ರತಿಯೊಬ್ಬ ಮುಸಲ್ಮಾನರ ಮೇಲೆ ಕಡ್ಡಾಯವಾಗಿದೆ. ಪವಿತ್ರ ಖುರ್‌ಆನನ್ನು ಸಂಪೂರ್ಣವಾಗಿ ಬಾಯಿಪಾಠ ಮಾಡಿದ ಅಸಂಖ್ಯಾತ ಶಿಷ್ಯರು ಪೈಗಂಬರರ ಕಾಲದಲ್ಲೇ ಇದ್ದರು, ಪುರುಷರು ಮಾತ್ರವಲ್ಲ ಸ್ತ್ರೀಯರೂ ಕೂಡಾ. ಆಯಿಶಾ, ಹಫ್ಸಾ, ಉಮ್ಮು ಸಲ್ಮಾ ಎಂಬ ಪೈಗಂಬರರ ಪತ್ನಿಯರು ಪವಿತ್ರ ಖುರ್‌ಆನನ್ನು ಸಂಪೂರ್ಣವಾಗಿ ಕಂಠಪಾಠ ಮಾಡಿದವರಾಗಿದ್ದರು. ಸಂಪೂರ್ಣ ಖುರ್‌ಆನನ್ನು ಬಾಯಿಪಾಠ ಮಾಡಿದವರನ್ನು "ಹಾಫಿಝ್" ಎಂದು ಕರೆಯಲಾಗುವುದು. ಇವರಿಗೆ ಮುಸ್ಲಿಂ ಸಮಾಜದಲ್ಲಿ ವಿಶೇಷ ಸ್ಥಾನಮಾನಗಳಿವೆ. ಹೀಗೆ ಪವಿತ್ರ ಖುರ್‌ಆನನ್ನು ಪೂರ್ಣವಾಗಿ ಕಂಠಪಾಠ ಮಾಡುವ ಪರಿಪಾಠವು ಮುಹಮ್ಮದ್ ಪೈಗಂಬರರ ಕಾಲದಿಂದಲೇ ಪ್ರಾರಂಭವಾಗಿ ಇಂದಿನವರೆಗೂ ಮುಂದುವರಿದಿದೆ. ಇಂದು ಕೂಡಾ ಜಗತ್ತಿನಲ್ಲಿ ಅಸಂಖ್ಯಾತ ಮುಸ್ಲಿಮರು ಸಂಪೂರ್ಣ ಖುರ್‌ಆನನ್ನು ಕಂಠಪಾಠ ಮಾಡಿಕೊಂಡವರಾಗಿ ಇದ್ದಾರೆ. ಪ್ರಪಂಚದಲ್ಲಿರುವ ಎಲ್ಲಾ ಖುರ್‌ಆನ್ ಪ್ರತಿಗಳನ್ನು ಒಂದೂ ಉಳಿಯದಂತೆ ಸಂಪೂರ್ಣ ನಾಶಪಡಿಸಿದರೂ ಸಹ ಲಕ್ಷಾಂತರ ಮುಸ್ಲಿಮರ ಸ್ಮೃತಿ ಪಟಲದಲ್ಲಿ ಅದು ಶೇಷವಾಗಿರುವುದರಿಂದ ಯಾವುದೇ ವ್ಯತ್ಯಾಸವೂ ಇಲ್ಲದೆ ಪವಿತ್ರ ಖುರ್‌ಆನನ್ನು ಪುನಃ ಯಥಾ ರೂಪದಲ್ಲಿ ಅಚ್ಚು ಮಾಡಲು ಸಾಧ್ಯವಿದೆಯೆಂಬ ಸತ್ಯವನ್ನು ವೇದಪ್ರಕಾಶದವರು ಬಹುಶಃ ತಿಳಿದಿರಲಾರರು. ಈ ಒಂದು ವೈಶಿಷ್ಟ್ಯವು ಪವಿತ್ರ ಖುರ್‌ಆನಿಗಲ್ಲದೆ ಜಗತ್ತಿನ ಬೇರಾವ ಧರ್ಮಗ್ರಂಥಕ್ಕೂ ಇಲ್ಲ. ಇತರ ಧರ್ಮಗ್ರಂಥಗಳೆಲ್ಲವೂ ಮಾನವ ಹಸ್ತಕ್ಷೇಪಕ್ಕೆ ಗುರಿಯಾಗಿ ಕಲುಷಿತವಾದರೂ ಪವಿತ್ರ ಖುರ್‌ಆನಿನ ಸ್ವಚ್ಛ ವಿಶುದ್ಧಿಯು 1400 ವರ್ಷಗಳ ಬಳಿಕವೂ ಅಣು ಅಂಶವೂ ನಷ್ಟವಾಗದೆ ಶುದ್ಧವಾದ ಮೂಲ ರೂಪದಲ್ಲೇ ಇರುತ್ತದೆ. ಅದರ ಒಂದೇ ಒಂದು ಅಕ್ಷರಕ್ಕಾದರೂ ಯಾವುದೇ ವ್ಯತ್ಯಾಸ ಉಂಟಾಗಿಲ್ಲ. ಅಂತ್ಯ ದಿನದ ವರೆಗೂ ಅದರಲ್ಲಿ ಯಾವುದೇ ಮಾರ್ಪಾಟು ಉಂಟಾಗಲಾರದು ಕೂಡಾ.

> ## ಪವಿತ್ರ ಖುರ್ಆನ್
>
> ಪವಿತ್ರ ಖುರ್ಆನಿನ ಅಧ್ಯಾಪನೆಗಳಲ್ಲಿ ಒಂದು ಪರಮಾಣುವಿನ ಸಾವಿರದಲ್ಲಿ ಒಂದು ಅಂಶದಷ್ಟಾದರೂ ಅಸಂಬದ್ಧವನ್ನು ಯಾರಿಗಾದರೂ ಕಂಡುಹಿಡಿಯಲು ಸಾಧ್ಯವಾಯಿತೆಂದಾದರೆ, ತನ್ನ ಯಾವುದಾದರೂ ಪುಸ್ತಕವೋ ತತ್ವಶಾಸ್ತ್ರವೋ ಪವಿತ್ರ ಖುರ್ಆನಿಗಿಂತಲೂ ಅದರ ತತ್ವ ನಿರೂಪಣೆಗಿಂತಲೂ ಮಿಗಿಲಾದದ್ದೆಂದು ರುಜು ಪಡಿಸಲು ಯಾರಿಗಾದರೂ ಸಾಧ್ಯವಾದಲ್ಲಿ, ಮರಣ ಶಿಕ್ಷೆಯನ್ನು ಸಹ ಸಂತೋಷದಿಂದ ಸ್ವೀಕರಿಸಲು ನಾವು ತಯಾರಿದ್ದೇವೆ.
>
> (ಬರಾಹೀನೇ ಅಹ್ಮದಿಯಾ; ಪುಟ 262)
>
> **-ಹಝ್ರತ್ ಮಿರ್ಝಾ ಗುಲಾಂ ಅಹ್ಮದ್,**
>
> ಅಹ್ಮದಿಯಾ ಸಂಘಟನೆಯ ಸ್ಥಾಪಕರು.

ಇತರ ಭಾಷೆಗಳಲ್ಲಿ ಪವಿತ್ರ ಖುರ್ಆನಿನ ಭಾಷಾಂತರಗಳನ್ನು ಕಂಡ ವೇದಪ್ರಕಾಶದ ಲೇಖಕರು ತಪ್ಪಿ ಬಿದ್ದಿದ್ದಾರೆ. ಭಾಷಾಂತರಗಳಲ್ಲಿ ಆಯಾ ಭಾಷೆಗಳ ಶೈಲಿಗೆ ಒಪ್ಪುವಂತೆ ಅರ್ಧ ವಿರಾಮಗಳನ್ನೂ ಪೂರ್ಣ ವಿರಾಮಗಳನ್ನೂ ಹೆಚ್ಚು ಕಡಿಮೆ ಮಾಡಬೇಕಾಗಿ ಬರುವುವರಿಂದ ವಚನಗಳ ಸಂಖ್ಯೆ ಹೆಚ್ಚು ಕಮ್ಮಿಯಾಗುವುದರಲ್ಲಿ ಆಶ್ಚರ್ಯವಿಲ್ಲ. ಇದೇ ರೀತಿ ಮೂಲ ಗ್ರಂಥದಲ್ಲೂ ವ್ಯತ್ಯಾಸಗಳಿರಬಹುದೆಂದು ಲೇಖಕರು ಊಹಿಸಿರಬಹುದು. ಪ್ರಪಂಚದ ಯಾವುದೇ ಭಾಗದಲ್ಲಿರುವ ಪವಿತ್ರ ಖುರ್ಆನಿನ ಮೂಲ ಭಾಷಾ ಪ್ರತಿಯೂ ಅದು ಮುಸ್ಲಿಮರಲ್ಲಿ ಯಾವ ವಿಭಾಗದವರಿಂದ ಮುದ್ರಿಸಲ್ಪಟ್ಟದ್ದಾಗಿದ್ದರೂ ಸರಿಯೇ, ಎಲ್ಲವೂ ಒಂದೇ ಆಗಿದೆ. ಅವುಗಳಲ್ಲಿ ಯಾವುದೇ ವ್ಯತ್ಯಾಸ ಇರಲು ಸುತರಾಂ ಸಾಧ್ಯವಿಲ್ಲ. ಅದಕ್ಕೆ ಪರಮಾತ್ಮನ ಸಂರಕಣೆಯ ವಾಗ್ದಾನವಿದೆ.

ಮಧ್ಯಕಾಲೀನ ಕ್ರೈಸ್ತ ಪಾದ್ರಿಗಳು ಇಸ್ಲಾಂ ಧರ್ಮವನ್ನು ಅತಿ ನಿಷ್ಠುರವಾದ ವಿಮರ್ಶೆಗೆ ಗುರಿಪಡಿಸಿದ್ದರು. 14 ಶತಮಾನಗಳನ್ನು ದಾಟಿ ಬಂದ ಪವಿತ್ರ ಖುರ್ಆನಿನ ಪ್ರತಿಯೊಂದು ಪ್ರತಿಗಳನ್ನೂ ಭೂತ ಕನ್ನಡಿಯಲ್ಲಿ ನಿರೀಕ್ಷಿಸಿದವರಂತೆ ಅದರಲ್ಲಿ ವ್ಯತ್ಯಾಸಗಳನ್ನು ಕಂಡು ಹುಡುಕಲು ಶ್ರಮಪಟ್ಟು ವಿಫಲರಾದರು. ಹಝ್ರತ್ ಮುಹಮ್ಮದ್ ಪೈಗಂಬರರನ್ನು ಕಟುವಾಗಿ ವಿಮರ್ಶಿಸಿದ ಪಾಶ್ಚಾತ್ಯ ವಿದ್ವಾಂಸ ಸರ್ ವಿಲಿಯಂ ಮುಯಿರ್, ಪವಿತ್ರ ಖುರ್ಆನನ್ನು ಒಂದು ದೈವಿಕ ಗ್ರಂಥವೆಂದು ಒಪ್ಪದಿದ್ದರೂ ಅದರ ಭದ್ರತೆಯ ಬಗ್ಗೆ ಈ ರೀತಿ ಒಪ್ಪಿಕೊಳ್ಳಲು ನಿರ್ಬಂಧಿತರಾದರು:

**We may upon the strongest presumption affirm that every verse in the Quran is the genuine and unaltered composition of Mohammad himself...... ...**

**There is otherwise every security internal and external that we possess the text which Mohammad himself gave forth and used..... .. and conclude with at least a close approximation to the verdict of Von Hammer that we hold the Quran to be as surely Mohammad's word as the Mohammadans hold it to be the word of God.**

**-THE LIFE OF MOHAMMAD**
**By William Muir Page XXVIII**

(ಖುರ್ಆನಿನ ಪ್ರತಿಯೊಂದು ವಚನವೂ ಮುಹಮ್ಮದ್ ರಚಿಸಿದ ಅದೇ ಅಸಲು ರೂಪದಲ್ಲಿ ಹಾಗೂ ವ್ಯತ್ಯಾಸಕ್ಕೆ ಗುರಿಯಾಗದಂತೆ ಇರುತ್ತದೆ ಎಂಬುದಾಗಿ ನಮಗೆ ಸುದೃಢವಾಗಿ ನಂಬಲು ಸಾಕಷ್ಟು ಆಧಾರಗಳಿವೆ........ ಮುಹಮ್ಮದರಿಂದ ಪ್ರಕಟಗೊಂಡ ಹಾಗೂ ಅವರು ಉಪಯೋಗಿಸುತ್ತಿದ್ದ ಅದೇ ಮೂಲ ರೂಪದ ಖುರಾನ್ ನಮ್ಮ ಕೈ ಸೇರುವಂತೆ ಆಂತರಿಕವೂ ಬಾಹ್ಯವೂ ಆದ ಎಲ್ಲಾ ಭದ್ರತೆಗಳೂ ಅದಕ್ಕೆ ಲಭಿಸಿದೆ......ಹಾಗೂ ಮುಸಲ್ಮಾನರು ಖುರಾನನ್ನು ದೇವರ ವಚನಗಳೆಂದು ಎಷ್ಟು ಪ್ರಾಮಾಣಿಕವಾಗಿ ನಂಬುವರೋ ಅಷ್ಟೇ ಖಚಿತವಾಗಿ ಅದು ಮುಹಮ್ಮದರ ವಚನಗಳು ಎಂದು ನಾವು ಒಪ್ಪಿಕೊಳ್ಳಬಹುದೆಂಬ ವಾನ್‌ಹೇಮರರ ಅಭಿಪ್ರಾಯದೊಂದಿಗೆ ನಮಗೆ ಸಹಮತವಿದೆ.)

ಬ್ರಿಟಾನಿಕಾ ವಿಶ್ವಕೋಶದಲ್ಲಿ ಈ ರೀತಿ ಉಲ್ಲೇಖಿಸಲಾಗಿದೆ:

**The efforts of European scholars to prove the existence of later interoplations in the Koran have failed.**

-Encyclopedia Brittanica 9th Edition
under the article KORAN

(ಖುರಾನಿನಲ್ಲಿ ಮೂಲಕ್ಕೆ ವ್ಯತಿರಿಕ್ತವಾದ ಪ್ರಕ್ಷಿಪ್ತ ವಚನಗಳು ಸೇರಿಕೊಂಡಿವೆಯೆಂದು ನಿರೂಪಿಸಲು ಐರೋಪ್ಯ ವಿದ್ವಾಂಸರು ನಡೆಸಿದ ಎಲ್ಲಾ ಪ್ರಯತ್ನಗಳೂ ವಿಫಲವಾಗಿವೆ.)

ಕೂಪ ಮಂಡೂಕದಂತೆ ಉಡುಪಿಯ 'ವೇದಪ್ರಕಾಶ'ವು "ಮೂಲಕ್ಕೆ ವ್ಯತಿರಿಕ್ತವಾದ ಪ್ರಕ್ಷಿಪ್ತ ಭಾಗಗಳು ಗ್ರಂಥದಲ್ಲಿ ಸೇರಿಸಲ್ಪಟ್ಟಿರಬೇಕೆಂದು ಯಾರಾದರೂ ಹೇಳಬಹುದು" ಎಂದು ಬರೆದಿದೆ. 'ಯಾರಾದರೂ ಏನಾದರೂ ಹೇಳಬಹುದು ನಿಜ. ಆದರೆ, ಹೇಳಿದ್ದನ್ನು ನಿರೂಪಿಸಿಕೊಡುವ ಜವಾಬ್ದಾರಿಕೆಯೂ ಸಹ ಅವರಿಗಿದೆಯೆಂದು ತಿಳಿದಿರಬೇಕು.

## 'ವೇದಪ್ರಕಾಶ' ಕಣ್ಣು ತೆರೆಯಲಿ

ಪುರಾತನ ಭಾರತ ನಿವಾಸಿಗಳನ್ನು ಉದ್ಧರಿಸಲಿಕ್ಕಾಗಿ ಪರಮಾತ್ಮನು ಅವತೀರ್ಣಗೊಳಿಸಿದ ದಿವ್ಯ ಗ್ರಂಥಗಳಾಗಿವೆ ವೇದಗಳು. ವೇದಗಳನ್ನು ಉಪದೇಶಿಸಿದ ಋಷಿಗಳು ಆ ಕಾಲದ ಭಾರತ ವಾಸಿಗಳನ್ನು ಸಾಕ್ಷಾತ್ ಪರಮಾತ್ಮನ ಸತ್ಯಪಥದತ್ತ ನಡೆಯಿಸಿದರು. ವೇದಗಳು ಹಿಂದೂ ಪ್ರವಾದಿಗಳಾಗಿದ್ದ ಋಷಿಗಳಿಗೆ ದೇವರಿಂದ ಅವತೀರ್ಣವಾದ ದಿವ್ಯ ಗ್ರಂಥಗಳೆಂದು ನಾವು ನಂಬುತ್ತೇವೆ. ಆದರೆ, ಕಾಲಹರಣಕ್ಕೆ ಗುರಿಯಾದ ಒಂದು ಧರ್ಮ ಗ್ರಂಥದ ರೂಪದಲ್ಲಿ ಮಾತ್ರವೇ ಇಂದು ಅಸ್ತಿತ್ವದಲ್ಲಿರುವ ವೇದಗಳನ್ನು ನಮಗೆ ಕಾಣಲು ಸಾಧ್ಯವಿದೆ. ಅವುಗಳು ಅವತೀರ್ಣಗೊಂಡ ಅದೇ ಅಸಲು ರೂಪದಲ್ಲಿ ಇಂದು ಇರುವುದಿಲ್ಲವೆಂಬುದನ್ನು ವೈದಿಕ ವಿದ್ವಾಂಸರೇ ಒಪ್ಪುತ್ತಾರೆ! ಈ ದಿವ್ಯ ಗ್ರಂಥಗಳು ಯಾವ ಋಷಿಗಳ ಮೂಲಕ ಅವತೀರ್ಣಗೊಂಡವು ಎಂಬುದೇ ನಮಗೆ ಗೊತ್ತಿಲ್ಲ. ವೇದ ಮಂತ್ರಗಳ ಪ್ರಾರಂಭದಲ್ಲಿ ಕೆಲವು ಹೆಸರುಗಳು ಕಾಣಲ್ಪಡುತ್ತಿವೆಯಾದರೂ ವೈದಿಕ ವಿದ್ವಾಂಸರ ಅಭಿಪ್ರಾಯ ಪ್ರಕಾರವೇ ಅವುಗಳು, ಯಾರಿಗೆ ವೇದಗಳು ಅವತೀರ್ಣವಾಯಿತೋ ಅವರ ಹೆಸರುಗಳಲ್ಲ; ಕಾಲಾಂತರದಲ್ಲಿ ಅವುಗಳನ್ನು ಸಂಗ್ರಹಿಸಿ ಬರೆದವರ ಹೆಸರುಗಳು ಮಾತ್ರ. ವೇದಗಳ ಬಗ್ಗೆ ಕೆಲವು ವೈದಿಕ ವಿದ್ವಾಂಸರೇ ಸೂಚಿಸಿದ ಅಭಿಪ್ರಾಯಗಳನ್ನು ಇಲ್ಲಿ ಉಲ್ಲೇಖಿಸುತ್ತೇನೆ:-

ಎದುರ್ಕಳ ಶ್ರೀ ಕೆ. ಶಂಕರನಾರಾಯಣ ಭಟ್ಟರು "ಹಿಂದೂ ಧರ್ಮದ ಪರಿಚಯ" ಎಂಬ ತನ್ನ ಗ್ರಂಥದಲ್ಲಿ ಈ ರೀತಿ ಬರೆದಿದ್ದಾರೆ:

"ಯಾವ ಋಷಿಗಳು ವೇದಗಳನ್ನು ಎಲ್ಲಿ ಯಾವಾಗ ಪಡೆದರು ಎಂಬುದರ ಬಗ್ಗೆ ಯಾಗಲಿ, ಎಷ್ಟು ಜನ ಪಡೆದರು ಎಂಬ ವಿವರವಾಗಲಿ ಇನ್ನೂ ಕೂಡಾ ನಿರ್ಧರಿಸಲ್ಪಟ್ಟಿರುವುದಿಲ್ಲ. ಈ ಕುರಿತಾಗಿ ನಿರ್ಧಾರಕ್ಕೆ ಬರುವುದು ಸುಲಭಸಾಧ್ಯವೂ ಅಲ್ಲ. ವೈದಿಕ ಋಷಿಗಳು ವೇದವನ್ನು ತಮ್ಮ ಸ್ಮೃತಿ ಪಟಲದಲ್ಲಿ ಜೋಪಾನವಾಗಿಟ್ಟುಕೊಂಡು ವಿಶ್ವ ಕಲ್ಯಾಣಾರ್ಥವಾಗಿ ಅವನ್ನು ತಮ್ಮ ಶಿಷ್ಯರಿಗೆ ಬಾಯ್ದೆರೆಯಾಗಿ ಹೇಳಿಕೊಟ್ಟರು." (ಹಿಂದೂ ಧರ್ಮದ ಪರಿಚಯ–ಎದುರ್ಕಳ ಕೆ. ಶಂಕರನಾರಾಯಣ ಭಟ್, ಪುಟ 12. ಎರಡನೇ ಮುದ್ರಣ)

ಪಂಡಿತ್ ವೇದಿಕ್ ಮುನಿ ತನ್ನ "ವೇದ ಸರ್ವಸ್ವ" ಎಂಬ ಗ್ರಂಥದಲ್ಲಿ ಈ ರೀತಿ ಬರೆದಿರುವರು:

"ನಿಜವಾಗಿಯೂ ಈ ಅಥರ್ವ ವೇದದ ಬಗ್ಗೆ ಉಂಟಾಗುವಷ್ಟು ಗೊಂದಲವು ಬೇರೆ ಯಾವ ವೇದದ ಕುರಿತೂ ಉಂಟಾಗಲಾರದು. ಸಯಣಾಚಾರ್ಯರ ನಂತರ ಕೂಡಾ ಇದಕ್ಕೆ ಬಹಳಷ್ಟು ಸೂಕ್ತಗಳು ಸೇರಿಸಲ್ಪಟ್ಟಿವೆ. ರೂಪಾಂತರಕ್ಕೆ ಒಂದು ಸುಂದರವಾದ ಮಾದರಿಯನ್ನು ಬಳಸಲಾಗಿದೆ. ಮೊದಲ ಹಂತದಲ್ಲಿ ಈ ಪ್ರಕ್ಷಿಪ್ತ ಭಾಗಗಳು ಮೂಲದಿಂದ ಪ್ರತ್ಯೇಕವಾಗಿ ಕಾಣಲು ಅಥ: (ಪ್ರಾರಂಭ) ಮತ್ತು ಇತಿ (ಮುಕ್ತಾಯ) ಎಂಬ ಪದಗಳನ್ನು ಬಳಸಲಾಯಿತು. ನಂತರ ಅಥ: ಮತ್ತು ಇತಿ: ಎಂಬ ಪದಗಳನ್ನು ನೀಗಿಸಲಾಗಿ ಆ ಪ್ರಕ್ಷಿಪ್ತ ವಚನಗಳೆಲ್ಲವೂ ಮೂಲ ಗ್ರಂಥದ ಭಾಗಗಳೆಂದೇ ತಿಳಿಯಲಾಯಿತು" (ಪುಟ 97) *

ಪಂಡಿತ್ ಮಹೇಶ್‌ಚಂದ್ರ ಪ್ರಸಾದ್ ತನ್ನ 'ಸಂಸ್ಕೃತ ಸಾಹಿತ್ಯ ಕಾ ಇತಿಹಾಸ್' ಎಂಬ ಗ್ರಂಥದಲ್ಲಿ ಹೀಗೆ ಬರೆಯುತ್ತಾರೆ:-

"ವಾಜಸ್ನೇಯೀ ಶುಕ್ಲ ಯಜುರ್ವೇದ ಸಂಹಿತೆ ಎಂಬುದು ಒಂದು ನವೀನ ಮಾದರಿಯ ಸಂಗ್ರಹವಾಗಿದೆ. ಇದರಲ್ಲಿ ಒಟ್ಟು 40 ಅಧ್ಯಾಯಗಳಿವೆ. ಆದರೆ ಇವುಗಳ ಪೈಕಿ 18 ಅಧ್ಯಾಯಗಳು ಮಾತ್ರ ಮೂಲ ರೂಪದವುಗಳೆಂದೂ ಉಳಿದವು ನಂತರದ ಕಾಲದಲ್ಲಿ ಸೇರಿಸಲ್ಪಟ್ಟವೆಂದೂ ನಂಬಲಾಗುತ್ತದೆ. (ಪುಟ 160)*

ಪಂಡಿತ್ ಶಾಂತಿದೇವ ಶಾಸ್ತ್ರಿ "ಗಂಗಾ" ನಿಯತ ಕಾಲಿಕದಲ್ಲಿ ಈ ರೀತಿ ಬರೆದಿರುವರು:

"ಮೊದಲನೆಯದಾಗಿ ವೇದಗಳು ಮೂರು ಮಾತ್ರವೋ ಅಥವಾ ನಾಲ್ಕು ಇವೆಯೋ ಎಂದು ಸಹ ಇಷ್ಟರ ತನಕ ಖಾತ್ರಿಯಾಗಿ ತಿಳಿಯಲಾಗಿಲ್ಲ. ಮನುಸ್ಮೃತಿ ಮತ್ತು ಶತಪಥ ಬ್ರಾಹ್ಮಣ ಪ್ರಕಾರ ಋಗ್ವೇದ, ಯಜು ರ್ವೇದ ಮತ್ತು ಸಾಮವೇದಗಳೆಂಬ ಮೂರು ವೇದಗಳು ಮಾತ್ರ ಇವೆ. ಆದರೆ, ವಾಜಸ್ನೇಯೀ ಉಪನಿಷತ್, ಬ್ರಾಹ್ಮಣ ಉಪನಿಷತ್ ಮತ್ತು ಮುಂಡಕ ಉಪನಿಷತ್ ಗಳ ಪ್ರಕಾರ ವೇದಗಳು ನಾಲ್ಕು ಇವೆ". (ಫೆಬ್ರುವರಿ 1931)*

ಶಾಸ್ತ್ರಿಯವರು ಮತ್ತೂ ಬರೆಯುತ್ತಾರೆ : "ಶೌನಕ ಋಷಿಯು ಚರಣವ್ಯೂಹವೆಂಬ ಕೃತಿಯನ್ನು ರಚಿಸಿದ ವೇಳೆ ಯಲ್ಲಿ ಋಗ್ವೇದದ ಶಾಕಲ್ಯ ಸಂಹಿತೆಯಲ್ಲಿ 1,53,826 ಪದಗಳೂ 4,32,000 ಅಕ್ಷರಗಳೂ 10,622 ಮಂತ್ರ ಗಳೂ ಇದ್ದುವು. ಆದರೆ, ಈ ಸಂಖ್ಯೆಗಳನ್ನು ಇಂದು ನಿಮಗೆ ಆ ಗ್ರಂಥದಲ್ಲಿ ಕಾಣಲು ಸಾಧ್ಯವಿಲ್ಲ". ("ಗಂಗಾ" ಫೆಬ್ರುವರಿ 1931)*

ಪಂಡಿತ್ ಹಿರ್‌ಡೇ ನಾರಾಯಣ "ಗಂಗಾ"ದಲ್ಲಿ ಬರೆಯುತ್ತಾರೆ: "ಶೌನಕ ಋಷಿಯ ಚರಣವ್ಯೂಹ ಮತ್ತು ಇತರ ಕೃತಿಗಳಲ್ಲಿ ವೇದಗಳಲ್ಲಿರುವ ಮಂತ್ರಗಳ ಸಂಖ್ಯೆ ಯನ್ನು ನಿಖರವಾಗಿ ಹೇಳಲಾಗಿದೆ. ಆದರೆ, ಇಂದು ನಮ್ಮ ಲ್ಲಿಗುವ ವೇದಗಳಲ್ಲಿ ಮಂತ್ರಗಳ ಸಂಖ್ಯೆಯು ಇದಕ್ಕಿಂತ ವ್ಯತ್ಯಸ್ತವಾಗಿದೆ. ಇದರಿಂದ, ವೇದಗಳು ಅನೇಕ ವಿಧ ಪ್ರಕ್ಷೇಪ-ವಿಕ್ಷೇಪಕ್ಕೆ ಗುರಿಯಾಗಿವೆ ಎಂದು ತಿಳಿದು ಬರು ತ್ತದೆ. ("ಗಂಗಾ" - ಜನವರಿ 1931)*

ಪಂಡಿತ್ ವೇದಿಕ್ ಮುನಿ ತನ್ನ "ವೇದ ಸರ್ವಸ್ವ" ದಲ್ಲಿ ಈ ರೀತಿ ವಿಲಾಪಿಸುತ್ತಾರೆ:

"ಇವೆಲ್ಲವುಗಳ ಹೊರತಾಗಿ, ಬ್ರಾಹ್ಮಣ ಗ್ರಂಥ ಭಾಗಗಳೂ ಸಹ ವೇದಗಳಿಗೆ ಸೇರಿಕೊಂಡವು. ವಿವೇಚನಾ ದೃಷ್ಟಿಯಲ್ಲಿ ವೇದಗಳ ಅಧ್ಯಯನ ನಡೆಸುವವರಿಗೆ ಇದನ್ನು ಸುಲಭದಲ್ಲೇ ಪತ್ತೆ ಹಚ್ಚಲು ಸಾಧ್ಯವಿದೆ. ಅಥರ್ವ ವೇದವೂ ಸಹ ಇದೇ ದುರವಸ್ಥೆಯಲ್ಲಿದೆ. ನಮ್ಮ ವೈದಿಕ ವಿದ್ವಾಂಸರು ಇದರ ಬಗ್ಗೆ ಚೆನ್ನಾಗಿ ಯೋಚಿಸಬೇಕಾಗಿದೆ. ಒಂದು ಮೂಲಾಧಾರ ಧರ್ಮ ಗ್ರಂಥವು ಈ ರೀತಿ ಶೋ ಚ್ಯಾವಸ್ಥೆಯಲ್ಲಿರುವುದು ನಿಜಕ್ಕೂ ವಿಷಾದನೀಯವಾಗಿದೆ. ("ವೇದ ಸರ್ವಸ್ವ" - ಪುಟ 108)*

ವೇದ ಪ್ರಕಾಶವು ಗಾಜಿನ ಮನೆಯಲ್ಲಿ ಕೂತು 'ಇಸ್ಲಾಂ' ಎಂಬ ಭದ್ರ ಕೋಟೆಯ ಮೇಲೆ ಕಲ್ಲೆಸೆಯುವ ಪ್ರಯತ್ನ ನಡೆಸುತ್ತಿರುವುದು ಹಾಸ್ಯಾಸ್ಪದವಾಗಿದೆ.

## ವೇದ ಪ್ರಕಾಶಕ್ಕೆ ಒಂದು ಆಹ್ವಾನ

"ಇಸ್ಲಾಂಮತದ ಮೇಲೆ ಒಂದು ವಿಹಂಗಮ ದೃಷ್ಟಿ" ಎಂಬ ಪ್ರೊ॥ ಜೇಷ್ಠವರ್ಮನ್‌ರ ತುಚ್ಛ ಲೇಖನವನ್ನು ವೇದಪ್ರಕಾಶವು ಜನವರಿ ಮತ್ತು ಫೆಬ್ರುವರಿ ಸಂಚಿಕೆಗಳಲ್ಲಿ ಪ್ರಕಟಿಸಿದ ಬಳಿಕ ಅದರ ಬಗ್ಗೆ ಸಾಕಷ್ಟು ಪ್ರತಿಭಟನೆಗಳು ನಡೆದುವು. ಆ ನಂತರ ವೇದ ಪ್ರಕಾಶದ ಎಪ್ರಿಲ್ ತಿಂಗಳ ಸಂಚಿಕೆಯಲ್ಲಿ "ವಿಷಾದಿಸುತ್ತೇವೆ" ಮತ್ತು "ಸತ್ಯ ಹೇಳುವು ದಾಗಲಿ, ಸತ್ಯ ಬರೆಯುವುದಾಗಲಿ, ಸತ್ಯ ಪ್ರಕಟಿಸುವುದಾ ಗಲಿ ಕರ್ನಾಟಕದಲ್ಲಿ ತಪ್ಪೆಂದು ಪರಿಗಣಿಸಲಾಗುವುದೇ?" ಎಂಬ ಶಿರೋನಾಮೆಗಳಲ್ಲಿ ಎರಡು ಲೇಖನಗಳನ್ನು ಪ್ರಕಟಿಸ ಲಾಗಿದೆ. ಈ ಎರಡು ಲೇಖನಗಳಲ್ಲೂ ವೇದ ಪ್ರಕಾಶವು ತಾನು ಮೊದಲು ಪ್ರಕಟಿಸಿದ ಆ ಲೇಖನದ ಬಗ್ಗೆ ಸಮರ್ಥ ನೆಯನ್ನು ನೀಡಿರುತ್ತದೆ. ಇಸ್ಲಾಮಿನ ಬಗ್ಗೆ, ಪ್ರವಾದಿ ಮುಹಮ್ಮದ್ ಪೈಗಂಬರರ ಬಗ್ಗೆ ಹಾಗೂ ಪವಿತ್ರ ಖುರ್ ಆನ್ ಬಗ್ಗೆ ವೇದ ಪ್ರಕಾಶವು ಮೊದಲು ಪ್ರಕಟಿಸಿದ್ದೆಲ್ಲವೂ ಸತ್ಯವೂ ಆಧಾರಪೂರ್ಣವೂ ಆಗಿರುತ್ತದೆಯೆಂಬುದೇ ವೇದ ಪ್ರಕಾಶದ ನಿಲುವೆಂದು ಸಂಪಾದಕರ ಈ ಲೇಖನಗಳಿಂದ ವ್ಯಕ್ತವಾಗುತ್ತದೆ. ಅದರ ಕೆಲವು ಭಾಗಗಳನ್ನು ನೋಡಿರಿ:

> "ಸ್ವಯಂ ಲೇಖಕರಾದ ಶ್ರೀ ಜೇಷ್ಠವರ್ಮನ್‌ರೂ ಸಹ ಸರ್ವಥಾ ಯಾವುದೇ ದುರುದ್ದೇಶದವರಲ್ಲ. ಅವರ ವಿಶ್ಲೇಷಣಾತ್ಮಕವಾದ, ಜನ ಜಾಗೃತಿಯ ನ್ನುಂಟುಮಾಡುವ 38 ಲೇಖನಗಳು ಈ ಹಿಂದೆ ವೇದಪ್ರಕಾಶದಲ್ಲಿ ಪ್ರಕಟವಾಗಿವೆ……… ಮೇಲೆ ಹೇಳಿದ ವೈಚಾರಿಕವಾದ ಅವರ ಲೇಖನ ಅವರ ಸ್ವಂತ ಕೃತಿಯಲ್ಲ. ಮುಂಬಯಿನಿಂದ ಹೊರಡುವ "ಮಶೂರಾಶ್ರಮ" ಪತ್ರಿಕೆಯ 1981ನೇ ಜನವರಿ ಯಲ್ಲಿ ಪ್ರಕಟವಾದ ಶ್ರೀಮಾನ್ ಆರ್. ಡಿ. ಶರ್ಮ

* INTRODUCTION TO THE STUDY OF THE HOLY QURAN
By Hazrat Mirza Bashiruddin Mahmood Ahmad.

ರ ಇಂಗ್ಲೀಷ್ ಲೇಖನದ ಅನುವಾದ ಮಾತ್ರವಾಗಿದೆ. ಶ್ರೀಮಾನ್ ಆರ್. ಡಿ. ಶರ್ಮರವರೂ ಸಹ ಸ್ವಯಂ ವಿದ್ವಾಂಸರಾದ ಕಾರಣ ಆಧಾರ ಸಹಿತವಾಗಿಯೇ ಅದನ್ನು ಪ್ರಕಟಿಸಿದ್ದಾರೆಂದು ತಿಳಿದು ಬರುತ್ತದೆ. ಈ ಸತ್ಯವನ್ನು ಇಸ್ಲಾಂ ಧರ್ಮದ ಅಭಿಮಾನೀ ಅನುಯಾಯಿಗಳು ಅರಿತು ಕೊಳ್ಳಬೇಕಾಗಿ ವಿನಂತಿ".

"ಸದರಿ ಲೇಖನ (ಇಸ್ಲಾಂ ಮತದ ಮೇಲೊಂದು ವಿಹಂಗಮ ದೃಷ್ಟಿ ಎಂಬ ಲೇಖನ) ಆಂಗ್ಲ ಭಾಷೆಯಲ್ಲಿ 1981ನೇ ಜನವರಿಯಲ್ಲಿ ಮುಂಬಯಿಯ ಮಸೂರಾಶ್ರಮ ಪತ್ರಿಕೆಯಲ್ಲಿ ಶ್ರೀ ಆರ್. ಡಿ. ಶರ್ಮ, ವೈದಿಕ ಪರಮಾರ್ಥ ಆಶ್ರಮ, ಸಾಂತಾಕ್ರೂಜ್, ಮುಂಬಯಿ - ಇವರಿಂದ ಕುರಾನ್ ಮತ್ತು ಇತರ ಗ್ರಂಥಗಳ ಆಧಾರ ಸಹಿತ ಪ್ರಕಟವಾಗಿತ್ತು. ಈ ಲೇಖನದ ಕನ್ನಡ ಅನುವಾದವನ್ನು ಪ್ರೊ॥ ಜೇಷ್ಮವರ್ಮನರು ಮಾಡಿ ವೇದ ಪ್ರಕಾಶಕ್ಕೆ ಕಳುಹಿಸಿದ್ದರು. ಕಳೆದ ನಾಲ್ಕು ವರ್ಷಗಳಿಂದಲೂ ಸತತವಾಗಿ ಪ್ರಕಟವಾಗುತ್ತಿದ್ದ ಪ್ರೊ॥ ಜೇಷ್ಮವರ್ಮನ್‌ರ ವೈಚಾರಿಕವೂ ದಾರ್ಶನಿಕವೂ ಆದ ಲೇಖನಗಳನ್ನು ತಾವೆಲ್ಲ ಓದಿಯೇ ಇರುವಿರಿ. ಹಿಂದಿನ ಲೇಖನಗಳನ್ನು ಪ್ರಕಟಿಸಿದಂತೆ ಈ ಲೇಖನವೂ ಪ್ರಕಟವಾಗಿದೆ.

ಮೂಲ ಲೇಖನದ ತೆಲುಗು ಆವೃತ್ತಿಯೂ ಸಿಕಂದರಾಬಾದ್‌ನಿಂದ ಹೊರಡುವ 'ಧರ್ಮ ಧ್ವಜಂ' ಎಂಬ ಮಾಸಿಕದಲ್ಲಿ 1981ನೇ ಎಪ್ರಿಲ್‌ನಲ್ಲಿಯೇ ಪ್ರಕಟವಾಗಿದೆ. ಮುಂಬಯಿಯಲ್ಲೂ ಹೈದರಾಬಾದ್‌ನಲ್ಲಿಯೂ ಈ ಲೇಖನದ ಬಗ್ಗೆ ಯಾವುದೇ ಪ್ರತೀಕಾರವೂ ನಡೆದಿಲ್ಲ. ಈ ಲೇಖನದ ವಿಷಯಗಳೆಲ್ಲವೂ ಮೂಲ ಕುರಾನ್‌ನಲ್ಲಿ ಇದ್ದ ಸಂಗತಿ ಎಂಬುದನ್ನು **A Glimpse at Islam** ಎಂಬ ಆಂಗ್ಲ ಲೇಖನದಿಂದ ತಿಳಿದುಬರುತ್ತದೆ."

ವೇದಪ್ರಕಾಶವು ಮೊದಲು ಪ್ರಕಟಿಸಿದ ಜೇಷ್ಮವರ್ಮನವರ ಲೇಖನವು ಸತ್ಯವೂ ಸಾಧಾರವೂ ಆಗಿದೆಯೆಂದೂ ಇದನ್ನು ಖುರ್‌ಆನ್ ಮತ್ತು ಇತರ ಗ್ರಂಥಗಳ ಆಧಾರ ಸಹಿತ ಮೊದಲೊಮ್ಮೆ ಬೊಂಬಾಯಿಲ್ಲಿ ಪ್ರಕಟಿಸಲಾಗಿತ್ತೆಂದೂ ನಂತರ ಅದರ ತೆಲುಗು ಭಾಷಾಂತರವನ್ನು ಸಿಕಂದರಾಬಾದಿನಲ್ಲೂ ಪ್ರಕಟಿಸಿ ಇವೆಲ್ಲವೂ ಮೂಲ ಖುರ್‌ಆನಿನಲ್ಲಿ ಇದ್ದ ಸಂಗತಿ ಎಂಬುದನ್ನು ನಿರೂಪಿಸಿ ಕೊಡಲಾಗಿದೆಯೆಂದೂ ಉಡುಪಿಯ ಕನ್ನಡ ಮಾಸಿಕ 'ವೇದಪ್ರಕಾಶ'ವು ಹೇಳುತ್ತದೆ. ಈ ಕ್ಷುದ್ರ ಲೇಖನದ ಕನ್ನಡ ಆವೃತ್ತಿಯು ಈಗ ಕನ್ನಡ ಭಾಷೆಯಲ್ಲಿ ಕನ್ನಡ ನಾಡಿನಲ್ಲಿ ಪ್ರಕಟವಾಗಿರುವುದರಿಂದ ಆ ಲೇಖನದಲ್ಲಿದ್ದ ಎಲ್ಲಾ ಆರೋಪಗಳನ್ನೂ ಆಧಾರ ಸಹಿತವಾಗಿ ಕನ್ನಡದ ಜನರಿಗೆ ತಿಳಿಸಿಕೊಡಬೇಕಾದ ನೈತಿಕ ಜವಾಬ್ದಾರಿಕೆಯು ಈಗ ವೇದಪ್ರಕಾಶದ ಮೇಲಿದೆ. ವೇದಪ್ರಕಾಶದ ಮಾತುಗಳು ಪ್ರಾಮಾಣಿಕವಾಗಿದ್ದಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರರ ಮೇಲೆ ಅವರು ಹೊರಿಸಿದ ಎಲ್ಲಾ ಆರೋಪಗಳನ್ನೂ ಸಾಧ್ಯವಿದೆಯೆಂದಾದರೆ ಆಧಾರ ಸಹಿತ ನಿರೂಪಿಸಲಿ. ಈ ಸಂದರ್ಭದಲ್ಲಿ ವೇದಪ್ರಕಾಶದ ಗಮನವನ್ನು ಒಂದು ಸರಳವಾದ ವಿಚಾರದೆಡೆ ಸೆಳೆಯಲು ನಾವು ಬಯಸುತ್ತೇವೆ. ಅದರ ಲೇಖನವು ಆಧಾರಪೂರ್ಣವಾಗಿದೆ ಎಂಬ ಅದರ ಹೇಳಿಕೆಯನ್ನು ಪರೀಕ್ಷಿಸಲು ಒಂದೇ ಒಂದು ಪಂಥಾಹ್ವಾನವನ್ನು ನಾವು ಅದರ ಮುಂದಿಡುತ್ತೇವೆ. ಈ ನಮ್ಮಾಹ್ವಾನವನ್ನು ಅದು ಸ್ವೀಕರಿಸಲು ಮುಂದಾಗಬೇಕಾಗಿದೆ. ಅದೇನೆಂದರೆ, "ಇಸ್ಲಾಂ ಮತದ ಮೇಲೊಂದು ವಿಹಂಗಮ ದೃಷ್ಟಿ" ಎಂಬ ಲೇಖನವನ್ನು ವೇದಪ್ರಕಾಶವು ಆರಂಭಿಸಿದ್ದು ಈ ರೀತಿಯಲ್ಲಿ – "ರಾಗ, ದ್ವೇಷ, ಪಕ್ಷಪಾತಾದಿಗಳನ್ನು ಬದಿಗಿಟ್ಟು ಉದಾರ ಹೃದಯದಿಂದ ಇಸ್ಲಾಂ ಮತವನ್ನು ನಾವು ಅವಲೋಕಿಸಿದರೆ, ಇದೊಂದು ತರ್ಕಶೂನ್ಯ ಅವೈಜ್ಞಾನಿಕ, ಭ್ರಾಂತಿ ಮತ್ತು ಕಾಳು ರೂಢಿಗಳಿಂದ ತುಂಬಿದ ಮತ ಅಥವಾ ಸಂಪ್ರದಾಯವೆಂದು ಸ್ಪಷ್ಟವಾಗಿ ಕಾಣುತ್ತದೆ. ಯಾಕೆಂದರೆ, ಇಸ್ಲಾಮಿನ ಆಧಾರವಾದ ಕುರ್‌ಆನ್ ಈ ವಾಕ್ಯದೊಂದಿಗೆ ಪ್ರಾರಂಭವಾಗುತ್ತದೆ: ಲಾ ಇಲ್ಲಾಹ್ ಇಲ್ಲಿಲ್ಲಾಹ್, ಮುಹಮ್ಮದ್ - ಉಲ್ - ರಸೂಲ್ ಇಲ್ಲಾಹ್. ಇದರ ಅರ್ಥ - ದೇವರು ದೊಡ್ಡವನು, ಮುಹಮ್ಮದನು ಅವನ ಪೈಗಂಬರನು."

ಈಗ ಕಾರ್ಯವು ಅತ್ಯಂತ ಸುಲಭವಿದೆ. ಪವಿತ್ರ ಖುರ್‌ಆನ್ ಗ್ರಂಥವು ವೇದಗಳಂತೆ ಅಲಭ್ಯವಾದ ಒಂದು ಗ್ರಂಥವಲ್ಲ. ಪ್ರತಿಯೊಂದು ಮುಸ್ಲಿಂ ಗೃಹದಲ್ಲೂ ಪವಿತ್ರ ಖುರ್‌ಆನಿನ ಮೂಲಭಾಷೆಯ ಒಂದಕ್ಕಿಂತಲೂ ಹೆಚ್ಚು

# ಕ್ರೈಸ್ತ ಮಿತ್ರರಿಗೊಂದು ಸುವಾರ್ತೆ

★ ಬಶೀರ್ ಅಹ್ಮದ್ ಓರ್ಚರ್ಡ್

ಈ ಲೇಖಕ ಕ್ರೈಸ್ತ ಮತವನ್ನು ತ್ಯಜಿಸಿ ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ಓರ್ವ ಪಾಶ್ಚಾತ್ಯರಾಗಿದ್ದಾರೆ. ಬ್ರಿಸ್ಟಲ್ ನಗರದ ಗೌರವಾನಿತ್ವ ಕುಟುಂಬವೊಂದರ ಸದಸ್ಯರಾದ ಇವರು ಬ್ರಿಟಿಷ್ ಸೈನ್ಯದಲ್ಲಿ ಲೆಫ್ಟಿನೆಂಟ್ ಹುದ್ದೆಯಲ್ಲಿದ್ದರು. ದ್ವಿತೀಯ ಜಾಗತಿಕ ಯುದ್ಧ ಕಾಲದಲ್ಲಿ ಇವರು ಡ್ಯೂಟಿಯಲ್ಲಿ ಭಾರತಕ್ಕೆ ಬಂದಿದ್ದಾಗ 1942ರಲ್ಲಿ ಓರ್ವ ಅಹ್ಮದಿ ಸಹೋದರನ ಮುಖಾಂತರ ಇಸ್ಲಾಂ ಧರ್ಮದ ಬಗ್ಗೆ ಅಧ್ಯಯನ ಮಾಡಿ ಅದು ಸತ್ಯವೆಂದು ತಿಳಿದಾಗ ಮುಸ್ಲಿಮನಾಗಿ ಪರಿವರ್ತನೆಗೊಂಡು ಇಸ್ಲಾಮಿಕ ಆಜ್ಞೆಯನುಸಾರ ಜೀವನ ನಡೆಸಲು ಆರಂಭಿಸಿದರು. ಅದರ ನಂತರ ಅವರು ತನ್ನ ಕೆಲವು ಮಿತ್ರರಿಗೆ ಬರೆದು ಕಳುಹಿಸಿದ ಸಂದೇಶವಾಗಿದೆ ಈ ಲೇಖನ. ಇವರು ಸ್ಕಾಟ್‌ಲೇಂಡಿನ ಅಹ್ಮದಿಯಾ ಮಿಶನರಿಯಾಗಿ ಅನೇಕ ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ.

—ಸಂಪಾದಕ.

ಪ್ರಿಯ ಬಾಂಧವರೇ, ನೀವು ಅತ್ಯಂತ ಶ್ರದ್ಧೆಯಿಂದ ಓದಿ ನೋಡಬೇಕೆಂಬ ಅಪೇಕ್ಷೆಯೊಂದಿಗೆ ನಾನು ಈ ಲೇಖನದ ಮೂಲಕ ಒಂದು ಮಹತ್ವಪೂರ್ಣ ಸಂದೇಶವನ್ನು ನಿಮ್ಮ ಮುಂದೆ ಸಮರ್ಪಿಸ ಬಯಸುತ್ತೇನೆ. ಯಾವ ದಾರಿಯಲ್ಲಿ ನಡೆದರೆ ಮನುಷ್ಯನಿಗೆ ದೇವರ ಸನ್ನಿಧಿಯನ್ನು ತಲಪಲು ಸಾಧ್ಯವೋ ಆ ಏಕ ಸತ್ಯ ಪಥದೆಡೆಗೆ ಆಹ್ವಾನಿಸುವಂತಹ ಸಂದೇಶವು ಇದಾಗಿದೆ. ನಿಮಗೆ ಪರಮಾತ್ಮನ ಅನುಗ್ರಹಾಶೀರ್ವಾದಗಳು ಲಭಿಸುವಂತಾಗಲು ನೀವು ಅವಲಂಬಿಸಬೇಕಾದ ಒಂದೇ ಒಂದು ಮಾರ್ಗವೂ ನಿಮ್ಮನ್ನು ದೃಢ ವಿಶ್ವಾಸ ಮತ್ತು ದಿಟ ಜ್ಞಾನದೆಡೆ ನಡೆಸಲು ಸಮರ್ಪಕವಾದ ಏಕಮಾತ್ರ ಪಥವೂ ಇದೇ ಆಗಿರುವುದು. ಇದರ ಮೂಲಕವಲ್ಲದೆ ನಿಮಗೆ ಸೃಷ್ಟಿಕರ್ತನಾದ ಪರಮಾತ್ಮನೊಡನೆ ಆತ್ಮಿಕ ಸಂಬಂಧವನ್ನು ಹೊಂದಲಿಕ್ಕಾಗಲಿ ಪಾಪದಿಂದ ವಿಮುಕ್ತವಾಗಿ ವಿಶುದ್ಧಿಯನ್ನು ಗಳಿಸಲಿಕ್ಕಾಗಲಿ ಸಾಧ್ಯವಾಗಲಾರದು.

( ಹನ್ನೆರಡನೇ ಪುಟದಿಂದ )

ಪ್ರತಿಗಳು ಇರುವುದರಲ್ಲಿ ಸಂಶಯವಿಲ್ಲ. ಜಗತ್ತಿನ ಯಾವ ಮೂಲೆಯಲ್ಲೂ ಮನುಷ್ಯರಿಗೆ ಅತಿ ಸುಲಭವಾಗಿ ಎಟಕುವ ಒಂದು ಧರ್ಮಗ್ರಂಥವಾಗಿದೆ ಪವಿತ್ರ ಖುರ್‌ಆನ್. ಜಗತ್ತಿನಲ್ಲಿ ಅದರ ಎಷ್ಟೋ ಕೋಟಿ ಪ್ರತಿಗಳು ಈಗ ಇರಬಹುದು. ವೇದಪ್ರಕಾಶವು ಹೇಳುವಂತೆ "ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದುರ್ರಸೂಲುಲ್ಲಾಹ್" ಎಂಬ ವಚನದೊಂದಿಗೆ ಪವಿತ್ರ ಖುರ್‌ಆನ್ ಆರಂಭವಾಗುತ್ತದೆ ಎಂಬುದನ್ನು ಆಧಾರ ಸಹಿತ ನಿರೂಪಿಸಲು ನಾವು ವೇದಪ್ರಕಾಶವನ್ನು ಆಹ್ವಾನಿಸುತ್ತೇವೆ. ವೇದಪ್ರಕಾಶದ ಸಂಪಾದಕರಾಗಲಿ, ವಿದ್ವಾನ್ ಜೇಷ್ಠವರ್ಮನ್ ಆಗಲಿ, ವಿದ್ವಾಂಸ ಆರ್. ಡಿ. ಶರ್ಮರವರೇ ಆಗಲಿ ನಮ್ಮ ಈ ಆಹ್ವಾನವನ್ನು ಸ್ವೀಕರಿಸಲು ಮುಂದೆ ಬರಲಿ. "ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದುರ್ರಸೂಲುಲ್ಲಾಹ್" ಎಂಬ ವಾಕ್ಯದೊಂದಿಗೆ ಆರಂಭವಾಗುವ ಪವಿತ್ರ ಖುರ್‌ಆನ್ ಯಾರಿಂದ ಯಾವಾಗ ಮುದ್ರಿತವಾಗಿದೆ ಎಂಬುದನ್ನು ಅವರು ತಿಳಿಸಿ ಕೊಡಲಿ. ಅಥವಾ ಅಂತಹ ಖುರ್‌ಆನ್ ಪ್ರತಿಯು ಅವರ ಬಳಿಯಲ್ಲಿದ್ದರೆ, ಅದನ್ನು ನಮಗೊಮ್ಮೆ (ಯುಗರಶ್ಮಿ ಕಾರ್ಯಾಲಯಕ್ಕೆ) ತಂದು ತೋರಿಸಿಕೊಡಲಿ!

ಅತ್ಯಂತ ಸುಲಭವೂ ಸರಳವೂ ಆದ ಈ ವಿಚಾರದಲ್ಲೇ ವೇದಪ್ರಕಾಶವು ಮರುಮಾತಿಲ್ಲದೆ ಮುಗ್ಗರಿಸಿ ಬೀಳುವುದು ಖಂಡಿತ. ಹಾಗಿರುವಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರ್ ಮತ್ತು ಪವಿತ್ರ ಖುರ್‌ಆನಿನ ಕುರಿತು ಅದು ಆರೋಪಿಸಿದ ವಿಚಾರಗಳೆಲ್ಲವೂ 'ಆಧಾರ ಸಹಿತ' ವೆಂಬುದು ವೇದಪ್ರಕಾಶದ ಕೇವಲ "ಭ್ರಮೆ" ಮಾತ್ರವೆಂದು ತಿಳಿಯಬೇಕಾಗಿದೆ. ●

ಮಹತ್ವಪೂರ್ಣವೂ ಪರಮ ಪ್ರಧಾನವೂ ಆದ ಆ ಸಂದೇಶವೇನೆಂದರೆ, ದೇವರ ಆಜ್ಞೆಗಳನ್ನು ಪಾಲಿಸಬೇಕೆಂಬುದೂ ಅವನ ದೂತರಾದ ಪ್ರವಾದಿಗಳಲ್ಲಿ ವಿಶ್ವಾಸ ಹೊಂದಬೇಕೆಂಬುದೂ ಆಗಿದೆ. ದೇವರು ತನ್ನ ಆಜ್ಞೆಗಳನ್ನು ಮನುಷ್ಯರಿಗೆ ತಲಪಿಸುವುದು ಪ್ರವಾದಿಗಳ ಮುಖಾಂತರವಷ್ಟೆ. ಪುಣ್ಯಾತ್ಮರಾದ ಮೋಶೆ (ಹಝ್ರತ್ ಮೂಸಾ) ಒಬ್ಬ ಮಹಾನ್ ಪ್ರವಾದಿಯಾಗಿದ್ದರೆಂದೂ ಅವರ ಮುಖಾಂತರ ದೇವರು ಇಸ್ರಾಯೀಲ್ಯರಿಗೆ ಟೋರಾ (ಪೆಂಟಟ್ಯೂಕ್)ವನ್ನು ನೀಡಿದನೆಂದೂ ಆ ಧರ್ಮಶಾಸ್ತ್ರದ ಪ್ರಕಾರ ಜೀವಿಸುವುದು ಅವರಿಗೆ ಮೋಕ್ಷಕ್ಕಿರುವ ಮಾರ್ಗವಾಗಿತ್ತು ಎಂಬುದೂ ನೀವು ಸಹ ಒಪ್ಪುವ ಒಂದು ಯಥಾರ್ಥ್ಯವಾಗಿದೆ. ಯಾಕೆಂದರೆ, ಇಸ್ರಾಯೀಲ್ಯರು ಆ ಧರ್ಮವಿಧಿಗಳನ್ನನುಸರಿಸಿಯೇ ತಮ್ಮ ಜೀವಿತವನ್ನು ದೈವಾಭೀಷ್ಟಕ್ಕೆ ಅನುಯೋಜ್ಯವನ್ನಾಗಿ ಮಾಡಿದರು. ಇದಕ್ಕೆ ಒಂದು ಉದಾಹರಣೆಯಾಗಿ ಜಕರೀಯ ಮತ್ತು ಅವರ ಪತ್ನಿಯ ಜೀವಿತವನ್ನು ಲೂಕನ ಸುವಾರ್ತೆಯು ಎತ್ತಿ ತೋರಿಸಿದೆ. ಅದರಲ್ಲಿ ಈ ರೀತಿ ಹೇಳಿದೆ: "ಅವರಿಬ್ಬರೂ ಕರ್ತನ ಎಲ್ಲಾ ಆಜ್ಞೆಗಳನ್ನೂ ನೇಮ ನಿಷ್ಠೆಗಳನ್ನೂ ಕೈಗೊಂಡು ತಪ್ಪಿಲ್ಲದೆ ನಡೆಯುಕೊಳ್ಳುತ್ತಾ ದೇವರ ದೃಷ್ಟಿಯಲ್ಲಿ ನೀತಿವಂತರಾಗಿದ್ದರು" ( ಲೂಕ 1 : 6 ). ಆದುದರಿಂದ, ದೇವರ ಆಜ್ಞೆಗಳನ್ನು ಸರಿಯಾಗಿ ಪಾಲಿಸುವುದೇ ವಿಜಯದ ಮಾರ್ಗವೆಂದು ವ್ಯಕ್ತವಾಯಿತು.

ಪೂರ್ವ ಪ್ರವಾದಿಗಳ ಭವಿಷ್ಯವಾಣಿಗಳ ಪ್ರಕಾರ ಪರಮಾತ್ಮನು ಯೇಸುಕ್ರಿಸ್ತರಿಗೆ ಪ್ರವಾದಿತ್ವವನ್ನು ನೀಡಿ ಅವರನ್ನು ಇಸ್ರಾಯೀಲ್ ಜನರೆಡೆಯಲ್ಲಿ ನಿಯೋಗಿಸಿದನು. ಇಸ್ರಾಯೀಲ್ಯರಿಗೆ ಯೇಸು ನೀಡಿದ ಸಂದೇಶವು, ಅವರು ತಮ್ಮ ದುಷ್ಕರ್ಮಗಳನ್ನೆಲ್ಲಾ ತ್ಯಜಿಸಿ ಪ್ರವಾದಿಯಾದ ಮೋಶೆ ಪ್ರಬೋಧಿಸಿದ ಸತ್ಯ ಮಾರ್ಗದೆಡೆ ಹಿಂದಿರುಗಬೇಕೆಂಬುದೇ ಆಗಿತ್ತು. ಯೇಸುಕ್ರಿಸ್ತರ ದೌತ್ಯದ ಉದ್ದೇಶ ಇದೇ ಆಗಿತ್ತೆಂಬುದಾಗಿ ಬೈಬಲ್ ಸಾಕ್ಷಿ ಹೇಳುತ್ತದೆ. ಯೇಸು ಸ್ವಯಂ ಹೇಳಿರುವುದಾಗಿ ಅದರಲ್ಲಿ ಈ ರೀತಿ ಉಲ್ಲೇಖವಿದೆ :

> "ತಪ್ಪಿಸಿಕೊಂಡ ಕುರಿಗಳಂತಿರುವ ಇಸ್ರಾಯೇಲನ ಮನೆತನದವರ ಬಳಿಗೇ ಹೊರತು ಮತ್ತಾರ ಬಳಿಗೂ ನಾನು ಕಳುಹಿಸಲ್ಪಟ್ಟವನಲ್ಲ."
> (ಮತ್ತಾಯ 15 : 24)

"ಮೋಶೆಯ ಧರ್ಮಶಾಸ್ತ್ರವನ್ನಾಗಲಿ ಪ್ರವಾದಿಗಳ ವಚನವನ್ನಾಗಲಿ ತೆಗೆದು ಹಾಕುವುದಕ್ಕೆ ನಾನು ಬಂದೆನೆಂದು ನೆನಸಬೇಡಿರಿ. ತೆಗೆದು ಹಾಕುವುದಕ್ಕೆ ಬಂದಿಲ್ಲ; ನೆರವೇರಿಸುವುದಕ್ಕೆ ಬಂದಿದ್ದೇನೆ. ನಿಮಗೆ ಸತ್ಯವಾಗಿ ಹೇಳುತ್ತೇನೆ–ಆಕಾಶವೂ ಭೂಮಿಯೂ ಅಳಿದು ಹೋಗುವ ತನಕ ಧರ್ಮಶಾಸ್ತ್ರವೆಲ್ಲಾ ನೆರವೇರಿದ ಹೊರತು ಅದರೊಳಗಿಂದ ಒಂದು ಸೊನ್ನೆಯಾದರೂ ಒಂದು ಗುಡುಸಾದರೂ ಅಳಿದು ಹೋಗಲಾರದು." (ಮತ್ತಾಯ 5 : 17, 18)

ಆದುದರಿಂದ, ಮೋಶೆ ಪ್ರಬೋಧಿಸಿದ ಆ ಮೋಕ್ಷ ಮಾರ್ಗವನ್ನೇ ಯೇಸುಕ್ರಿಸ್ತರೂ ಬೋಧಿಸಿದರು ಎಂಬುದಾಗಿ ಸ್ಪಷ್ಟವಾಗುತ್ತದೆ. ಯೇಸುಕ್ರಿಸ್ತರು, ಮೋಶೆಯ ಧರ್ಮಶಾಸ್ತ್ರದ ಸತ್ಯತೆಯನ್ನು ದೃಢೀಕರಿಸಿ, ಅದರ ಆಜ್ಞೆಗಳನ್ನನುಸರಿಸಿ ಜೀವಿಸುವುದೇ ಮೋಕ್ಷ ಪ್ರಾಪ್ತಿಗೆ ಏಕ ಮಾರ್ಗವೆಂದು ಇಸ್ರಾಯೀಲ್ಯರಿಗೆ ಸರಿಯಾದ ರೀತಿಯಲ್ಲಿ ಕಲಿಸಿಕೊಟ್ಟರು. ಈ ಸಂಗತಿ ಮತ್ತಾಯನ ಸುವಾರ್ತೆ 19ನೇ ಅಧ್ಯಾಯದಿಂದಲೂ ವ್ಯಕ್ತವಾಗುತ್ತದೆ. ಅದರಲ್ಲಿ ಉಲ್ಲೇಖಿಸಿರುವಂತೆ ಯೇಸುವಿನೊಡನೆ ಒಬ್ಬನು ಬಂದು ನಿತ್ಯ ಜೀವನವನ್ನು ಪಡೆಯಬೇಕಾದರೆ ಏನು ಒಳ್ಳೆಯ ಕಾರ್ಯವನ್ನು ಮಾಡಬೇಕು ? ಎಂಬುದಾಗಿ ಕೇಳುತ್ತಾನೆ. "ಆ ಜೀವದಲ್ಲಿ ಸೇರಬೇಕೆಂದಿದ್ದರೆ ದೇವ ರಾಜ್ಞೆಗಳಿಗೆ ಸರಿಯಾಗಿ ನಡೆದುಕೋ" ಎಂದು ಪುಣ್ಯಾತ್ಮರಾದ ಯೇಸು ಉತ್ತರಿಸಿದರು. (ಮತ್ತಾಯ 19:17)

ಈಜಿಪ್ಟಿಯನರ ಅಧೀನದಲ್ಲಿದ್ದ ಕಾರಣ ಅತ್ಯಂತ ಯಾತನೆಗಳನ್ನು ಅನುಭವಿಸುತ್ತಿದ್ದ ಇಸ್ರಾಯೀಲ್ಯರಿಗೆ ಮಹಾತ್ಮಾ ಮೋಶೆ ಒಬ್ಬ ಪ್ರವಾದಿಯಾಗಿ ನಿಯುಕ್ತರಾದರು. ಅಂತೆಯೇ ಯೇಸುವಿನ ದೌತ್ಯವೂ ಇಸ್ರಾಯೀಲ್ಯರಿಗೆ ಮಾತ್ರವಾಗಿತ್ತು. ಮೇಲೆ ವಿವರಿಸಿದ ಪ್ರಕಾರ ಅವರು ಮೋಶೆಯ ಧರ್ಮಶಾಸ್ತ್ರವನ್ನು ಈಡೇರಿಸಲು ಆಗಮಿಸಿದವರಾಗಿದ್ದರು. ಇದಕ್ಕೆ ದೃಷ್ಟಾಂತವಾಗಿ ಯೇಸುಕ್ರಿಸ್ತರ ಸ್ವಂತ ಹೇಳಿಕೆಗಳನ್ನು ಮೊದಲೇ ಉದಾಹರಿಸಿರುವೆನು. ತಾನು ಇಸ್ರಾಯೀಲ್ ಮನೆತನದ ಚದರಿ ಹೋದ ಕುರಿಗಳ ಬಳಿಗೆ ಮಾತ್ರವೇ ಕಳುಹಿಸಲ್ಪಟ್ಟವನು ಎಂಬುದಾಗಿ ಅದರಲ್ಲಿ ಅವರು ಸಮ್ಮತಿಸಿರುವರು. ಈ ವಿಚಾರವು ಕೆಳಗೆ ವಿವರಿಸುವ ಇನ್ನೊಂದು ಬೈಬಲ್ ವಾಕ್ಯದಿಂದಲೂ

ಸುದೃಢವಾಗುತ್ತದೆ. ಅವರು ತನ್ನ ಶಿಷ್ಯರೊಡನೆ ಈ ರೀತಿ ಆಜ್ಞಾಪಿಸಿದರು:

"ಅನ್ಯ ಜನಗಳ ಕಡೆಗೆ ಹೋಗಬೇಡಿರಿ, ಸಮಾರ್ಯರ ಊರೊಳಗೆ ಕಾಲಿಡಬೇಡಿರಿ; ಇವರನ್ನು ಬಿಟ್ಟು ತಪ್ಪಿಸಿಕೊಂಡ ಕುರಿಗಳಂತಿರುವ ಇಸ್ರಾಯೇಲನ ಮನೆತನದವರ ಬಳಿಗೇ ಹೋಗಿರಿ." (ಮತ್ತಾಯ 0:6)

ಈ ಸಂದರ್ಭದಲ್ಲಿ ಒಂದು ಸಂಗತಿಯನ್ನು ವಿವರಿಸುವುದು ಅತ್ಯಾವಶ್ಯಕವೆಂದು ಭಾವಿಸುತ್ತೇನೆ. ಅದು ಸಾಮಾನ್ಯವಾಗಿ ಎಲ್ಲಾ ಕ್ರೈಸ್ತ ಮಿತ್ರರೂ ಯೇಸುವಿನ ದೌತ್ಯವು ಸಾರ್ವಲೌಕಿಕವೆಂದು ನಿರೂಪಿಸಲು ತೆಗೆದು ತೋರಿಸುವ ಒಂದು ಆಧಾರದ ಕುರಿತಾಗಿದೆ. ಸಾಮಾನ್ಯವಾಗಿ ಅವರು ಮಾರ್ಕನ ಸುವಾರ್ತೆಯ ಅಂತಿಮ ಅಧ್ಯಾಯದ 15ನೇ ವಚನವನ್ನು ಇದಕ್ಕೆ ಪ್ರಮಾಣವಾಗಿ ತೋರಿಸುತ್ತಾರೆ. ಅದು ಈ ರೀತಿಯಿದೆ:

And he said unto them, go ye into all the woild and preach the gospel to every ereature *

(ಆ ಮೇಲೆ ಅವರಿಗೆ—ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ—ಎಂದು ಹೇಳಿದನು.)—ಮಾರ್ಕ 16:15.

ಬೈಬಲನ್ನು ಗಾಢವಾಗಿ ಓದಿ ನೋಡುವುದಾದರೆ, ಈ ವಾಕ್ಯವನ್ನು ಯಾವುದೇ ರೀತಿಯಲ್ಲೂ ಮಸೀಹಾರ ದೌತ್ಯವು ಸಾರ್ವಲೌಕಿಕವೆಂಬುದಕ್ಕೆ ಆಧಾರವಾಗಿ ತೋರಿಸಲು ಸಾಧ್ಯವಿಲ್ಲವೆಂದು ಸ್ಪಷ್ಟವಾಗುವುದು. ಯಾಕೆಂದರೆ, ಇದು ಯೇಸು ಕ್ರಿಸ್ತರ ಸ್ವಂತ ಹೇಳಿಕೆಯೆಂದೂ ಆದುದರಿಂದ ಅವರ ದೌತ್ಯವು ಸಾರ್ವಲೌಕಿಕವೆಂದೂ ಒಪ್ಪುವುದಾದಲ್ಲಿ ಈ ವಚನವು, ತನ್ನ ನೇಮಕವು ಇಸ್ರಾಯೀಲ್ ಗೋತ್ರದವರಿಗೆ ಮಾತ್ರ ಸೀಮಿತವೆಂದು ಸ್ಪಷ್ಟವಾಗಿ ಘೋಷಿಸಿದ ಅವರ ಇತರ ಹೇಳಿಕೆಗಳಿಗೆ ಸಂಪೂರ್ಣ ವಿರುದ್ಧವಾಗುವುದು. ಆಗ ಅವರ ಹೇಳಿಕೆಗಳಲ್ಲಿ ಪರಸ್ಪರ ವೈರುಧ್ಯವು ಉಂಟೆಂದು ಸಮ್ಮತಿಸಬೇಕಾಗಿಯೂ ಬರುವುದು.

ಮೇಲಿನ ವಾಕ್ಯದ 'ಲೋಕದ ಎಲ್ಲಾ ಕಡೆ' (all the world) ಎಂಬುದಕ್ಕೆ ಶಬ್ದಾರ್ಥವನ್ನೇ ಕಲ್ಪಿಸಲು ಯಾವುದೇ ಆಧಾರವೂ ಇಲ್ಲ. ನೋಡಿರಿ, ಲೂಕ 2ನೇ ಅಧ್ಯಾಯದ ಒಂದನೇ ವಾಕ್ಯವನ್ನು ನಾವು ಈ ರೀತಿ ಓದುತ್ತೇವೆ:

And it come to pass in those days, that there went out a decree from Caesar Angustus, that all the world should be taxed (St. Luke 2.1) *

(ಆ ಕಾಲದಲ್ಲಿ ಲೋಕದ ಎಲ್ಲಾ ಕಡೆ-ಖಾನೆಷುಮಾರಿ ನಡೆಸಿ ಕರ ವಿಧಿಸಬೇಕೆಂಬ ಆಜ್ಞೆಯು ಸೀಜರ್ ಆಗಸ್ಟಸ್‌ನಿಂದ ಹೊರಟಿತು.)

ಈ ಆಜ್ಞೆಯು ಭೂಲೋಕದಲ್ಲಿರುವ ಎಲ್ಲಾ ರಾಜ್ಯದವರೊಡನೆಯೂ ಆಗಿತ್ತೆಂದು ಬುದ್ಧಿಯಿರುವ ಯಾರಾದರೂ ಹೇಳುವರೇ? ಈ ರಾಜಾಜ್ಞೆಯು ಜಪಾನಿನವರಿಗೂ ಚೀನಾದವರಿಗೂ ಅನ್ವಯಿಸಿತ್ತು ಎಂದು ಯಾರಾದರೂ ತಿಳಿಯುವುದಿದ್ದರೆ ಅದು ಕೇವಲ ಮೌಢ್ಯವೂ ನಿರರ್ಥಕವೂ ಮಾತ್ರ. ಸುವಾರ್ತೆಯ ಲೇಖಕರು ಇಲ್ಲಿ 'ಲೋಕ' ಎಂಬ ಶಬ್ದದಿಂದ ಉದ್ದೇಶಿಸಿದ ಅರ್ಥ, ಐಗುಪ್ತ ಚಕ್ರವರ್ತಿಯು ಆಳ್ವಿಕೆ ನಡೆಸುತ್ತಿದ್ದ ರೋಂ ಸಾಮ್ರಾಜ್ಯ ಮಾತ್ರವಾಗಿತ್ತೆಂಬುದು ನಿಸ್ತರ್ಕ. ಈ ವಿಚಾರದಲ್ಲಿ ಕ್ರೈಸ್ತ ಮಿತ್ರರಿಗೂ ಭಿನ್ನಾಭಿಪ್ರಾಯವಿರಲಾರದೆಂದು ನಾನು ನಂಬುತ್ತೇನೆ. ಇದೇ ರೀತಿ ಯೇಸು ಮಸೀಹಾ ತನ್ನ ಶಿಷ್ಯರೊಡನೆ, 'ಲೋಕದ ಎಲ್ಲಾ ಕಡೆಗೆ' ಹೋಗಿ ಸುವಾರ್ತೆಯನ್ನು ಸಾರಲು ಹೇಳಿದುದರ ಅರ್ಥವೂ ಪ್ರಪಂಚದ ಎಲ್ಲಾ ರಾಜ್ಯಗಳ ಮೂಲೆ ಮೂಲೆಗೂ ಹೋಗಬೇಕೆಂದಲ್ಲ, ಬದಲಾಗಿ ತನ್ನ ಕುರಿಮಂದೆಯು ಒಳಗೊಂಡಿರುವ ಇಸ್ರಾಯೀಲ್ ಲೋಕದ ಎಲ್ಲಾ ಮೂಲೆಗಳಿಗೂ ಸುವಾರ್ತೆಯನ್ನು ಸಾರಬೇಕೆಂದು ಮಾತ್ರವಾಗಿದೆ. ಹೀಗೆ ಪ್ರಸ್ತುತ ಎರಡು ಸಂದರ್ಭಗಳಲ್ಲೂ ಬಳಸಲಾದ 'ಲೋಕ' ಶಬ್ದದ ಉದ್ದೇಶ ಒಂದೇ ಆದರೂ ಐಗುಪ್ತ ಚಕ್ರವರ್ತಿಯ ಲೋಕವು ಆತನ ಆಡಳಿತಾಧಿಕಾರಕ್ಕೆ ಒಳಪಟ್ಟ ಸಕಲ ಜನರನ್ನೂ ಒಳಗೊಂಡದ್ದಾದರೆ, ಯೇಸು ಮಸೀಹಾರ ಲೋಕವು ಅವರ ದೌತ್ಯಾಧಿಕಾರಕ್ಕೆ ವಿಧೇಯವಾದ ಇಸ್ರಾಯೀಲ್ಯ

---

* ಕನ್ನಡ ಬೈಬಲಿನಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸಗಳು ಕಂಡು ಬರುವುದರಿಂದ ಬೈಬಲಿನ ಇಂಗ್ಲೀಷ್ ಉದ್ಧರಣಗಳನ್ನು American Bible Society, New yoik ಪ್ರಕಟಿಸಿದ ಹೊಸ ಒಡಂಬಡಿಕೆಯ King James Versionನಿಂದ ಸೇರಿಸಿರುವೆನು—ಅನುವಾದಕ.

ಸಮುದಾಯವನ್ನು ಸಂಪೂರ್ಣ ಆವರಿಸುವಂಥದ್ದೂ ಆಗಿದೆ.

ಇದಕ್ಕೂ ಹೊರತಾಗಿ ಮೇಲೆ ಹೇಳಿದ ಅಂದರೆ ಮಾರ್ಕ 16:15 ವಚನದ ಸ್ವೀಕಾರ ಯೋಗ್ಯತೆಯು ಸಹ ಪ್ರಶ್ನಿಸಲ್ಪಡುವಂತಹದ್ದೇ. ಮಾರ್ಕನ ಸುವಾರ್ತೆಯ ಕೊನೆಯ ಭಾಗದ ಕುರಿತು ಬ್ರಿಟಾನಿಕಾ ವಿಶ್ವಕೋಶ [Encylopaedia Britannica] ದಲ್ಲಿ ಈ ರೀತಿ ಬರೆದಿದೆ: "ಮಾರ್ಕನ ಕೊನೆಯ ಹನ್ನೆರಡು ವಾಕ್ಯಗಳು ಇನ್ನೂ ನಂತರದ ಕಾಲದಲ್ಲಿ–ಬಹುಶ: ಎರಡನೆಯ ಶತಮಾನದ ಆರಂಭದಲ್ಲಿ–ಮೂಲ ವಿವರಣೆಯೊಂದಿಗೆ ಸೇರಿಸಲ್ಪಟ್ಟದ್ದಾಗಿವೆ. ಅದು ಆ ಅಧ್ಯಾಯದ ಕಳೆದುಹೋದ ಅಥವಾ ಅಪೂರ್ಣವೆಂದು ಭಾವಿಸಲ್ಪಟ್ಟ ಕೊನೆಯ ಭಾಗಕ್ಕೆ ಬದಲಾಗಿ ಸೇರಿಸಲ್ಪಟ್ಟಿರಬಹುದು." (ಹನ್ನೊಂದನೆಯ ಆವೃತ್ತಿ ಸಂ. 17 ಪು. 730) *

ಸ್ನೇಹಿತರೇ, ಇದುವರೆಗೆ ನಾನು ವಿವರಿಸಿದುದು, ಮೋಶೆಯ ಧರ್ಮಶಾಸ್ತ್ರವು ಇಸ್ರಾಯೇಲ್ಯರಿಗೆ ಮಾತ್ರ ಸೀಮಿತವಾಗಿತ್ತೆಂದೂ ಅವರ ಮೋಕ್ಷವು ಆ ಧರ್ಮಶಾಸ್ತ್ರವನ್ನು ಪೂರ್ಣವಾಗಿ ಅನುಸರಿಸುವುದರಲ್ಲಿ ನೆಲೆಗೊಂಡಿತ್ತೆಂದೂ ಅದೇ ರೀತಿ ಯೇಸು ಮಸೀಹಾರ ದೌತ್ಯವೂ ಇಸ್ರಾಯೇಲ್ಯರಿಗೆ ಮಾತ್ರವೇ ಅನ್ವಯಿಸುವಂತಹದ್ದು ಆಗಿದ್ದು ಯೇಸುವಿನ ಆಗಮನವು ಮೋಶೆಯ ಧರ್ಮಶಾಸ್ತ್ರದ ಪೂರ್ತೀಕರಣವಾಗಿತ್ತೆಂದೂ ಆಗಿದೆ. ಇದನ್ನು ಸಾಧ್ಯವಾದಷ್ಟು ವಿವರವಾಗಿ ತಿಳಿಸಲು ನಾನು ಶ್ರಮಿಸಿದ್ದೇನೆ. ನಿಮಗೆ ಸರಿಯಾಗಿ ಬೋಧ್ಯವಾಗುವಂತೆ ಬೈಬಲಿನಲ್ಲಿರುವ ಮಸೀಹಾರ ವಚನಗಳನ್ನು ಆಧಾರವಾಗಿರಿಸಿಯೇ ನಾನೀ ವಿಷಯವನ್ನು ವಿವರಿಸಿರುವೆನು.

ಆಯಾ ಕಾಲದ ಆವಶ್ಯಕತೆಗನುಸಾರವಾಗಿ ಪ್ರವಾದಿಗಳನ್ನು ನಿಯೋಗಿಸುತ್ತಿದ್ದ ಪರಮಾತ್ಮನ ಮಾರ್ಪಾಟಿಲ್ಲದ ಸನಾತನ ನಿಯಮವು ಯೇಸು ಮಸೀಹಾರ ಆವಿರ್ಭಾವದೊಂದಿಗೆ ನಿಂತು ಹೋಯಿತೆಂದು ತಿಳಿಯುವುದು ತೀರಾ ಅಬದ್ಧವಾಗಿದೆ. ಅದೇ ರೀತಿ, ಕೃಪಾಳುವಾದ ದೇವರು ತನ್ನ ದಿವ್ಯ ಪ್ರಕಟಣೆಗಳನ್ನು ಒಂದು ಪ್ರತ್ಯೇಕ ಸಮುದಾಯದವರಿಗೆ ಮಾತ್ರ–ಇಸ್ರಾಯೇಲ್ಯರಿಗೆ ಮಾತ್ರ– ಕರುಣಿಸಿದನೆಂದೂ ಲೋಕದ ವಿವಿಧ ಭಾಗಗಳಲ್ಲಿ ತಾನು ಸೃಷ್ಟಿಸಿ ನೆಲೆಯೂರಿಸಿದ ಇತರ ಅಸಂಖ್ಯಾತ ಜನಸಮುದಾಯಗಳಿಗೆ ದಿವ್ಯ ಪ್ರಕಟಣೆಯ ಮೂಲಕ ತನ್ನ ಪರಿಚಯವನ್ನು ನೀಡಿ ಅವರಿಗೆ ತನ್ನ ಅನುಗ್ರಹಗಳನ್ನು ಕರುಣಿಸಲು ಅವನು ಸ್ವಲ್ಪವೂ ಕಾಳಜಿ ವಹಿಸಲಿಲ್ಲವೆಂದೂ ತಿಳಿಯುವುದು ಸಹ ಅಬದ್ಧವಾಗಿದೆ. ಅಸಂಬದ್ಧವಾದ ಈ ವಿಶ್ವಾಸದ ಕುರಿತು ನಾನು ನಂತರ ವಿವರಿಸುವೆನು.

ಬೈಬಲ್‌ನಲ್ಲಿ ಯೇಸು ಮಸೀಹಾರ ನಂತರ ಅತ್ಯಂತ ಶ್ರೇಷ್ಠರಾದ ಒಬ್ಬ ಪ್ರವಾದಿಯ ಆವಿರ್ಭಾವದ ಕುರಿತು ಭವಿಷ್ಯವಾಣಿಗಳನ್ನು ನಾವು ಕಾಣುತ್ತೇವೆ. ಅವುಗಳಲ್ಲಿ ಕೆಲವನ್ನು ನಾನಿಲ್ಲಿ ವಿವರಿಸುತ್ತೇನೆ. ಅವುಗಳ ಕುರಿತು ಗಾಢವಾಗಿಯೂ ಶಾಂತಚಿತ್ತರಾಗಿಯೂ ಅವಲೋಕಿಸಬೇಕೆಂದು ಎಲ್ಲರೊಡನೆಯೂ ನಾನು ಅಪೇಕ್ಷಿಸುತ್ತೇನೆ. ನಿಮ್ಮಲ್ಲಿ ಕೆಲವರು ಇದಕ್ಕೆ ಮೊದಲು ಅವುಗಳನ್ನು ನೋಡಿರದೆ ಇರಬಹುದು. ಅಥವಾ ನೋಡಿದ್ದರೂ ಸಹ ಅವುಗಳ ಮಹತ್ವವನ್ನು ಸರಿಯಾದ ರೂಪದಲ್ಲಿ ಗ್ರಹಿಸಿಕೊಂಡಿರಲಿಕ್ಕಿಲ್ಲ. ಮೊದಲನೆಯದಾಗಿ ನಾನು ನಿಮ್ಮಾಗಮನವನ್ನು ಬೈಬಲಿನ ಧರ್ಮೋಪದೇಶಕಾಂಡ 18ನೇ ಅಧ್ಯಾಯದ 18ರಿಂದ 20ರ ವರೆಗಿನ ವಚನಗಳ ಕಡೆ ಸೆಳೆಯಲು ಬಯಸುತ್ತೇನೆ. ಸರ್ವಲೋಕ ಪಾಲಕನಾದ ದೇವರು ಮೋಶೆಯೊಡನೆ ಈ ರೀತಿ ಹೇಳಿದನು:

"ಇವರ (ಇಸ್ರಾಯೇಲ್ಯರ) ಸಹೋದರರಲ್ಲಿ ನಿನ್ನಂಥ ಒಬ್ಬ ಪ್ರವಾದಿಯನ್ನು ನಾನು ಅವರಿಗೋಸ್ಕರ ಏರ್ಪಡಿಸುವೆನು; ಅವನ (ಆ ಪ್ರವಾದಿಯ) ಬಾಯಿಯಿಂದ ನನ್ನ ಮಾತುಗಳನ್ನು ನುಡಿಸುವೆನು; ನಾನು ಅವನಿಗೆ ಆಜ್ಞಾಪಿಸಿದ್ದನ್ನೆಲ್ಲಾ ಅವನು ಅವರಿಗೆ ತಿಳಿಸುವನು, ಅವನು ನನ್ನ ಹೆಸರಿನಲ್ಲಿ ಹೇಳಿದ ಮಾತುಗಳಿಗೆ ಯಾರು ಕಿವಿಗೊಡುವುದಿಲ್ಲವೋ ಅಂಥವರನ್ನು ನಾನು ಶಿಕ್ಷಿಸುವೆನು. ಆದರೆ ಯಾವ ಪ್ರವಾದಿ ನನ್ನಿಂದ ಅಧಿಕಾರ ಹೊಂದದೆ ನಾನು ಪ್ರೇರಣೆಮಾಡದ ಮಾತುಗಳನ್ನು ಯೆಹೋವನ (ದೇವರ) ಮಾತೆಂದು ಹೇಳಿ ಜನರಿಗೆ ತಿಳಿಸುವನೋ ಇಲ್ಲವೆ ಇತರ ದೇವರುಗಳ ಹೆಸರಿನಲ್ಲಿ ಮಾತಾಡುವನೋ ಅವನಿಗೆ ಮರಣ ಶಿಕ್ಷೆಯಾಗಬೇಕೆಂದು ಹೇಳಿದನು."

---

* ಬೆಂಗಳೂರಿನ BIBLE SOCIETY OF INDIA ಪ್ರಕಟಿಸಿದ ಬೈಬಲಿನ ಕನ್ನಡ ಭಾಷಾಂತರದಲ್ಲಿ ಮಾರ್ಕನ ಕೊನೆಯ 12 ವಚನಗಳ ಕುರಿತು ಈ ರೀತಿ ಒಂದು ಟಿಪ್ಪಣಿಯನ್ನು ಕೊಡಲಾಗಿರುವುದು ಗಮನೀಯ: "9ನೆಯ ವಚನದಿಂದ 20ನೆಯ ವಚನದ ಪರ್ಯಂತ ಬರೆದಿರುವ ಮಾತುಗಳು ಕೆಲವು ಪುರಾತನ ಪ್ರತಿಗಳಲ್ಲಿ ಇಲ್ಲ." –ಅನುವಾದಕ.

ಈ ಭವಿಷ್ಯವಾಣಿಯಲ್ಲಿ ವಾಗ್ದಾನ ಮಾಡಲ್ಪಟ್ಟ ಆ ಶ್ರೇಷ್ಠ ಪ್ರವಾದಿಯು ಹಝ್ರತ್ ಮುಹಮ್ಮದ್ (ಸ) ಅಲ್ಲದೆ ಇನ್ನಾರೂ ಅಲ್ಲ. ಅವರು ಕ್ರಿಸ್ತಶಕ ಏಳನೆಯ ಶತಮಾನದಲ್ಲಿ ಅರಬಿಗಳೆಡೆಯಲ್ಲಿ ದೇವರಿಂದ ನಿಯೋಗಿಸಲ್ಪಟ್ಟರು. ಈ ಮಹಾ ಪ್ರವಾದಿಯ ಕುರಿತು ಕೇಳಲೆಡೆಯಾದ ಕ್ರೈಸ್ತರು ದುರಾದೃಷ್ಟವಶಾತ್ ಅವರ ಬೋಧನೆಗಳನ್ನು ಸ್ವೀಕರಿಸಲು ತಯಾರಾಗಲಿಲ್ಲ. ಬದಲಾಗಿ ಆ ಪುಣ್ಯಾತ್ಮರ ಕೀರ್ತಿಯನ್ನು ಹಳಿಯಲಿಕ್ಕೂ ಅವರ ಮೇಲೆ ನೀಚವಾದ ದೋಷಾರೋಪಗಳನ್ನು ಹೊರಿಸಲಿಕ್ಕೂ ಮುಂದಾದರು. ಯೇಸು ಮಸೀಹಾರನ್ನು ನಿಂದಿಸಿ, ಆಕ್ಷೇಪಿಸಿ, ನಿರಾಕರಿಸಿ ತಳ್ಳಿದ ಯೆಹೂದ್ಯರಿಂದ ಒಂದು ಪಾಠವನ್ನು ಕಲಿಯಲು ಶ್ರಮಿಸುವುದರ ಬದಲು, ಯೆಹೂದ್ಯ ಸಂಪ್ರದಾಯಗಳನ್ನು ಅದೇ ರೀತಿ ಅನುಕರಿಸುತ್ತಾ ಪ್ರವಾದಿಗಳ ಸಾರ್ವಭೌಮರಾದ ಹಝ್ರತ್ ಮುಹಮ್ಮದ್ ಪೈಗಂಬರ್ (ಸ)ರವರನ್ನು ಇವರು ನಿಂದಿಸಿ ನಿರಾಕರಿಸಿಯೇ ಬಿಟ್ಟರು! ಈ ಸಂದರ್ಭದಲ್ಲಿ ಯೇಸು ಕ್ರಿಸ್ತರ ಶ್ರೇಷ್ಠತೆಯನ್ನು ಹೊಗಳುತ್ತಾ ಅವರು ದೇವರೆಂದೂ ದೇವ ಪುತ್ರರೆಂದೂ ನೀವು ಹೇಳಬಹುದು. ಆ ವಿಷಯದ ಕುರಿತು ಸಂದರ್ಭಾನುಸಾರ ನಾನು ಇನ್ನೊಂದೆಡೆ ಪ್ರತಿಪಾದಿಸುವೆನು.

ಮೇಲೆ ವಿವರಿಸಿದ ಭವಿಷ್ಯ ವಾಣಿಯ ಕುರಿತು, ನನ್ನೊಂದಿಗೆ ಮಾತನಾಡಿದ ಕ್ರೈಸ್ತ ಮಿತ್ರರಲ್ಲಿ ಹೆಚ್ಚಿನವರೂ ಹೇಳಿದುದು ಅದು ಯೇಸುಕ್ರಿಸ್ತರಲ್ಲಿ ಪೂರ್ತಿಗೊಂಡ ಒಂದು ಪ್ರವಾದನವಾಗಿದೆ ಎಂದು. ನಿಮ್ಮ ಅಭಿಮತವೂ ಅದೇ ಇರಬಹುದು. ಆದರೆ, ಈ ಪ್ರವಾದನವು ಪುಣ್ಯಾತ್ಮರಾದ ಹಝ್ರತ್ ಮುಹಮ್ಮದ್ ಪೈಗಂಬರರ ಕುರಿತಲ್ಲದೆ ಬೇರೆ ಯಾರ ಕುರಿತೂ ಅಲ್ಲವೆಂದೂ ಅದು ಯಾವ ರೀತಿಯಲ್ಲೂ ಯೇಸುಕ್ರಿಸ್ತರ ಆಗಮನದೊಂದಿಗೆ ಈಡೇರಲಿಲ್ಲವೆಂದೂ ತಿಳಿದುಕೊಳ್ಳಲು ಹೆಚ್ಚಿನ ಬುದ್ಧಿವಂತಿಕೆ ಅಗತ್ಯವಿದೆಯೆಂದು ತೋರುವುದಿಲ್ಲ.

ಒಂದನೆಯದಾಗಿ, ಪ್ರಸ್ತುತ ಭವಿಷ್ಯನುಡಿಯು ತನ್ನಲ್ಲಿ ಪೂರ್ತಿಯಾಗಿರುವುದಾಗಿ ಯೇಸು ಕ್ರಿಸ್ತರು ಎಲ್ಲಿಯೂ ಪ್ರತಿಪಾದಿಸಲಿಲ್ಲ. ಇಸ್ಲಾಂ ಧರ್ಮ ಸ್ಥಾಪಕರಾದ ಮುಹಮ್ಮದ್ ಪೈಗಂಬರರಾದರೆ, ತನ್ನ ಬರುವಿಕೆಯಿಂದ ಪ್ರಸ್ತುತ ಭವಿಷ್ಯವಾಣಿಯು ಪೂರ್ತಿಯಾಗಿರುವುದೆಂದು ಘೋಷಿಸಿದ್ದರು.

ಎರಡನೆಯದಾಗಿ, ಯೇಸುಕ್ರಿಸ್ತರನ್ನು ಮೋಶೆಯವರೊಂದಿಗೆ ಸಾದೃಶ್ಯ ಪಡಿಸಲು ಎಂದಿಗೂ ಸಾಧ್ಯವಿಲ್ಲ. (ಭವಿಷ್ಯವಾಣಿಯಲ್ಲಿ "ನಿನ್ನಂಥ ಪ್ರವಾದಿ" ಎಂದು ಹೇಳುತ್ತಾ, ಬರಲಿರುವ ಆ ಮಹಾ ಪ್ರವಾದಿಯನ್ನು ಮೋಶೆಯೊಂದಿಗೆ ಸಾದೃಶ್ಯಪಡಿಸಲಾಗಿದೆ.) ಮೋಶೆ ಹೊಸತೊಂದು ಧರ್ಮಶಾಸ್ತ್ರವನ್ನು ಸ್ಥಾಪಿಸಿದ ಪ್ರವಾದಿಯಾಗಿದ್ದರು. ಯೇಸುವಾದರೆ, ಆ ರೀತಿ ಹೊಸತಾದ ಯಾವ ಧರ್ಮಶಾಸ್ತ್ರವನ್ನೂ ತಂದಿರಲಿಲ್ಲ.

ಮೂರನೆಯದಾಗಿ, ಬರಲಿರುವ ಆ ಮಹಾನ್ ಪ್ರವಾದಿಯು ಇಸ್ರಾಯೇಲ್ಯರ ಸಹೋದರ ಸಮುದಾಯದಲ್ಲಿ ನಿಯುಕ್ತರಾಗುವರೆಂದು ಭವಿಷ್ಯವಾಣಿಯು ಸ್ಪಷ್ಟವಾಗಿ ತಿಳಿಸಿ ಕೊಡುತ್ತದೆ. ಇಸ್ರಾಯೇಲ್ ಸಮುದಾಯದ ಸಹೋದರರು ಇಸ್ಮಾಯೀಲ್ ಸಂತತಿಯವರಷ್ಟೆ. ಯೇಸುವಾದರೆ ಇಸ್ಮಾಯೀಲ್ ಸಮುದಾಯದವರಲ್ಲವಲ್ಲ. ಮುಹಮ್ಮದ್ ಪೈಗಂಬರರು ಇಸ್ಮಾಯೀಲ್ ಸಂತತಿಯವರಾಗಿರುವರು!

ನಾಲ್ಕನೆಯದಾಗಿ, ಯೇಸು ಮಸೀಹಾರಿಗೆ ತನ್ನ ಶತ್ರುಗಳೊಂದಿಗೆ ಯುದ್ಧ ಮಾಡಬೇಕಾದ ಪ್ರಸಂಗವೊದಗಿರಲಿಲ್ಲ. ಮೋಶೆಯಾದರೆ, ಅನಿವಾರ್ಯ ಅವಸ್ಥೆಯಲ್ಲಿ ದೈವ ನಿರ್ದೇಶದಂತೆ ಶತ್ರುಗಳೊಂದಿಗೆ ಸಮರ ಹೂಡಬೇಕಾಯಿತು. ಅದೇ ರೀತಿಯಲ್ಲೇ ಮುಹಮ್ಮದ್ ಪೈಗಂಬರರೂ ಸಹ ನಿರ್ಬಂಧಿತರಾಗಿ, ದೈವಾನುಮತಿಯಂತೆ. ವೈರಿಗಳೊಡನೆ ಯುದ್ಧ ಮಾಡಬೇಕಾಗಿ ಬಂತು. ಈ ದೃಷ್ಟಿಯಲ್ಲೂ ಪ್ರವಾದಿ ಮೋಶೆಯೊಂದಿಗೆ ಸಾದೃಶ್ಯವಿರುವವರು ಮುಹಮ್ಮದ್ ಪೈಗಂಬರರೇ ಹೊರತು ಯೇಸುಕ್ರಿಸ್ತರಲ್ಲ.

ಐದನೆಯದಾಗಿ, ದೇವರು ತನ್ನ ವಚನವನ್ನು ಆ ಪ್ರವಾದಿಯ ಬಾಯಿಯಿಂದ ನುಡಿಸುವನು ಎಂಬುದಾಗಿ ಭವಿಷ್ಯವಾಣಿ ಸಾರುತ್ತದೆ. ಮೊದಲೇ ಪ್ರತಿಪಾದಿಸಿದಂತೆ ಪವಿತ್ರ ಖುರ್‌ಆನ್ ಎಂಬುದು ಮುಹಮ್ಮದ್ ಪೈಗಂಬರರಿಗೆ ದೇವರಿಂದ ಅವತೀರ್ಣವಾದ ವಚನಾಮೃತಗಳಾಗಿವೆ. ಪವಿತ್ರ ಖುರ್‌ಆನಿನಲ್ಲಿ ದೇವರು ಹೇಳುವುದನ್ನು ಕಾಣಿರಿ: "ಇವರು (ಮುಹಮ್ಮದ್) ಸ್ವೇಚ್ಛೆಯಿಂದ ಮಾತನಾಡುವುದಲ್ಲ; ಇದು (ಖುರ್‌ಆನ್) ಅವತೀರ್ಣಗೊಳಿಸಲ್ಪಟ್ಟ ದಿವ್ಯ ಬೋಧನೆಗಳಲ್ಲದೆ ಬೇರೇನೂ ಅಲ್ಲ," (53 : 4, 5).

ಬೈಬಲಿನ ಪ್ರಸ್ತುತ ಭವಿಷ್ಯವಾಣಿಯ ಕುರಿತು ನಾನು ವಿಸ್ತಾರವಾಗಿ ಇಲ್ಲಿ ವಿವರಿಸಲಿಲ್ಲ. ಆದರೂ, ಈ ಮಹಾ ಭವಿಷ್ಯವಾಣಿಯ ಕುರಿತು ನೀವೆಲ್ಲರೂ ಗೌರವಪೂರ್ಣ ಚಿಂತನೆ ನಡೆಸುವಿರೆಂದೂ ದೇವರು ನಿಮಗೆ ನೀಡಿರುವ ವಿವೇಚನಾ ಶಕ್ತಿಯನ್ನು ಸದುಪಯೋಗಪಡಿಸಿಕೊಂಡು ಪಕ್ಷಪಾತ ರಹಿತವೂ ದ್ವೇಷ ಮುಕ್ತವೂ ಆದ ಹೃದಯದೊಂದಿಗೆ ಸತ್ಯಾನ್ವೇಷಣೆ ನಡೆಸುವಿರೆಂದೂ ನಾನು ಆಶಿಸುತ್ತೇನೆ.

ಧರ್ಮೋಪದೇಶ ಕಾಂಡದಲ್ಲಿ ಮಾತ್ರವಲ್ಲ ಈ ಪ್ರವಾದಿವರ್ಯರ ಕುರಿತು ವಿವರಣೆಯಿರುವುದು. ಹೊಸ ಒಡಂಬಡಿಕೆಯಲ್ಲಿ ಕೂಡಾ ಅವರ ಆಗಮನದ ಕುರಿತು ಯೆಹೂದ ಜನರಲ್ಲಿ ನಿರೀಕ್ಷೆಯೂ ಭರವಸೆಯೂ ಇದ್ದುದಾಗಿ ಓದುತ್ತೇವೆ. ಹಾಗೆ ಆ ಮಹಾ ಪ್ರವಾದಿಯನ್ನು ಪ್ರತೀಕ್ಷಿಸುತ್ತಿದ್ದವರಲ್ಲಿ ಯೇಸು ಮಸೀಹಾರ ಶಿಷ್ಯರೂ ಒಳಗೊಂಡಿದ್ದರು. ಕೆಳಗೆ ವಿವರಿಸುವ ಸತ್ಯವೇದದ ವಾಕ್ಯಗಳನ್ನು ಗಮನವಿಟ್ಟು ಓದಿ ನೋಡಿರಿ :

"ನೀನು ಯಾರೆಂದು ಯೋಹಾನನೊಡನೆ ಕೇಳಲಿಕ್ಕಾಗಿ ಯೆಹೂದ್ಯರು ಯೆರೂಸಲೇಮಿನಿಂದ ಯಾಜಕರನ್ನೂ ಲೇವಿಯರನ್ನೂ ಅವನ ಬಳಿಗೆ ಕಳುಹಿಸಿ – ನೀನು ಯಾರು ಎಂದು ಕೇಳಿದ್ದಕ್ಕೆ ಅವನು ಮರೆಮಾಜದೆ ನಾನು ಕ್ರಿಸ್ತನಲ್ಲವೆಂದು ಎಲ್ಲರ ಮುಂದೆ ಹೇಳಿದನು. ಹಾಗಾದರೆ ನೀನು ಯಾರು? ಎಲೀಯನೋ? ಎಂದು ಅವರು ಕೇಳಲು ಅಲ್ಲವೆಂದನು. ನೀನು ಬರಬೇಕಾದ ಆ ಪ್ರವಾದಿಯೋ? ಅಂದದ್ದಕ್ಕೂ ಅಲ್ಲವೆಂದನು." (ಯೋಹಾನ 1:19–21).

"ನೀನು ಕ್ರಿಸ್ತನೂ ಎಲೀಯನೂ ಆ ಪ್ರವಾದಿಯೂ ಅಲ್ಲವಾದರೆ ಸ್ನಾನಮಾಡಿಸುವುದೇನು ? ಎಂದು ಅವನನ್ನು ಕೇಳಿದರು " (ಯೋಹಾನ 1:25).

ಈ ಮೇಲಿನ ವಾಕ್ಯಗಳಿಂದ, ಯೆಹೂದ್ಯರು ಮಸೀಹಾರನ್ನೂ ಎಲೀಯರನ್ನೂ ಹೊರತಾಗಿ ಮತ್ತೊಂದು ಪ್ರವಾದಿಯ ಬರುವಿಕೆಯನ್ನೂ ಕೂಡಾ ಪ್ರತೀಕ್ಷಿಸುತ್ತಿದ್ದರು ಎಂಬುದಾಗಿ ಸುಲಭದಲ್ಲೇ ಗ್ರಹಿಸಿಕೊಳ್ಳಲು ಸಾಧ್ಯವಿದೆ. ಯೆಹೂದ್ಯರು ಈ ರೀತಿ ಭರವಸೆಯಿಂದಲೂ ಪ್ರತ್ಯಾಶೆಯಿಂದಲೂ ನಿರೀಕ್ಷಿಸುತ್ತಾ ಇದ್ದ ಆ ಮಹಾ ಪ್ರವಾದಿಯು ಧರ್ಮೋಪದೇಶಕಾಂಡ 18 : 18ರಲ್ಲಿ ವಾಗ್ದಾನ ಮಾಡಲಾದ ಆ ಮಹಾತ್ಮರಲ್ಲದೆ ಬೇರಾರೂ ಅಲ್ಲವೆಂಬುದು ನಿಶ್ಚಯ. ಯೆಹೂದ್ಯರು ಮಾತ್ರವೇ ಅಲ್ಲ ಯೇಸುಕ್ರಿಸ್ತರ ಶಿಷ್ಯನಾದ ಪೇತ್ರನು ಕೂಡಾ ಬರಲಿರುವ ಆ ಪ್ರವಾದಿಯ ಕುರಿತು ಪ್ರತಿಪಾದಿಸಿರುವುದನ್ನು ಕಾಣಬಹುದು. "ಅಪೋಸ್ತಲರ ಕೃತ್ಯಗಳು" 3ನೇ ಅಧ್ಯಾಯ 19ರಿಂದ 23ರ ವರೆಗಿನ ವಾಕ್ಯಗಳಲ್ಲಿ ಕಂಡು ಬರುವ ವಿವರಣೆಯನ್ನು ದಯವಿಟ್ಟು ಓದಿ ನೋಡಿರಿ :

"ಆದುದರಿಂದ ದೇವರು ನಿಮ್ಮ ಪಾಪಗಳನ್ನು ಅಳಿಸಿ ಬಿಡುವ ಹಾಗೆ ನೀವು ಪಶ್ಚಾತ್ತಾಪಪಟ್ಟು ಅವನ ಕಡೆಗೆ ತಿರುಗಿಕೊಳ್ಳಿರಿ. ತಿರುಗಿದರೆ, ದೇವರ ಸನ್ನಿಧಾನದಿಂದ ವಿಶ್ರಾಂತಿ ಕಾಲಗಳು ಒದಗಿ ಅವನು ನಿಮಗೆ ನೇಮಕವಾಗಿರುವ ಕ್ರಿಸ್ತನಾದ ಯೇಸುವನ್ನು ಕಳುಹಿಸಿ ಕೊಡುವನು. ಆದರೆ, ಸಮಸ್ತವನ್ನೂ ಸರಿಮಾಡುವ ಕಾಲವು ಬರುವ ತನಕ ಪರಲೋಕವೇ ಆ ಕ್ರಿಸ್ತನ ಸ್ಥಾನವಾಗಿರಬೇಕು. ಆ ಕಾಲದ ವಿಷಯವಾಗಿ ದೇವರು ಪೂರ್ವದಲ್ಲಿದ್ದ ತನ್ನ ಪರಿಶುದ್ಧ ಪ್ರವಾದಿಗಳ ಬಾಯಿಂದ ಹೇಳಿಸಿದ್ದಾನೆ. ಮೋಶೆಯು ಹೇಳಿದ್ದೇನೆಂದರೆ–ದೇವರಾಗಿರುವ ಕರ್ತನು ನನ್ನನ್ನು ಏರ್ಪಡಿಸಿದಂತೆ ನಿಮ್ಮ ಸಹೋದರರಲ್ಲಿ ಮತ್ತೊಬ್ಬ ಪ್ರವಾದಿಯನ್ನು ನಿಮಗೆ ಏರ್ಪಡಿಸಿಕೊಡುವನು. ಆತನು ನಿಮಗೆ ಹೇಳುವ ಎಲ್ಲಾ ಮಾತುಗಳಿಗೆ ಕಿವಿಕೊಡಬೇಕು; ಆ ಪ್ರವಾದಿಯ ಮಾತನ್ನು ಕೇಳದಿರುವ ಪ್ರತಿಯೊಬ್ಬನು ನಮ್ಮ ಜನರೊಳಗಿಂದ ಸಂಪೂರ್ಣವಾಗಿ ನಾಶವಾಗುವನು ಎಂಬುದೇ." (ಅಪೋಸ್ತಲರ ಕೃತ್ಯಗಳು 3:19-23).

ಇಲ್ಲಿ ಪೇತ್ರನು ವಿವರಿಸುವುದೇನೆಂದರೆ, ಸಮಸ್ತವೂ ಸರಿಯಾಗುವ ಕಾಲದ ವರೆಗೂ ಮಸೀಹಾರ ಪುನರಾಗಮನ ಉಂಟಾಗಲಾರದೆಂದೇ ಆಗಿದೆ. ದೇವರು ತನ್ನ ಪರಿಶುದ್ಧ ಪ್ರವಾದಿಗಳ ಮೂಲಕ ಹೇಳಿಸಿದ್ದೆಲ್ಲವೂ ಅವಶ್ಯವಾಗಿಯೂ ಪೂರ್ತಿಯಾಗಬೇಕಾಗಿದೆ. ದೇವರು ಮೋಶೆಯ ಮುಖಾಂತರ ವಾಗ್ದಾನ ಮಾಡಿರುವ ಆ ಪ್ರವಾದಿಯ ಅವತಾರವೂ ಅವುಗಳಲ್ಲೊಂದು. ಆ ವಾಗ್ದತ್ತ ಪ್ರವಾದಿಯು ಇನ್ನು ಬರಲಿರುವರೆಂದೇ ಪೇತ್ರನು ತಿಳಿಸಿಕೊಡುತ್ತಿರುವುದು. ಆದುದರಿಂದ ಈ ಭವಿಷ್ಯವಾಣಿಯು ಯೇಸುಕ್ರಿಸ್ತರಲ್ಲಿ ಪೂರ್ತಿಯಾಯಿತೆಂದು ಹೇಳುವುದು ಒಂದು ಮಿಥ್ಯಾ ಸಂಕಲ್ಪ ಮಾತ್ರ. ಈ ಪ್ರವಾದನವು ಹಝ್ರತ್ ಮುಹಮ್ಮದ್ ಪೈಗಂಬರ್ (ಸ)ರವರ ಕುರಿತೇ ಎಂಬುದು ಸುವ್ಯಕ್ತ. ಯಾಕೆಂದರೆ, ಭವಿಷ್ಯವಾಣಿಯಲ್ಲಿ ವಿವರಿಸಲಾದ

# ★ ಧೀರತೆಯಿಂದ ಮುನ್ನಡೆಯಿರಿ ★

**(ಅಮೇರಿಕದಲ್ಲಿ ನಡೆದ ದಾರುಣವಾದೊಂದು ಕೊಲೆಪಾತಕದ ಬಗ್ಗೆ ಅಹ್ಮದಿಯಾ ಜಮಾಅತಿನ ಚತುರ್ಥ ಖಲೀಫರಾದ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರು ಕಳೆದ ಆಗಸ್ಟ್ 12ರಂದು ರಬ್ವಾದಲ್ಲಿ ಮಾಡಿದ ಜುಮಾ ಖುತ್ಬಾ)**

ನಾನಿಂದು ಜಮಾಅತಿಗೆ ಅತ್ಯಂತ ದುಃಖದಿಂದ ಕೂಡಿದ ಒಂದು ಸಂತೋಷ ವಾರ್ತೆಯನ್ನು ತಿಳಿಸಲು ಇಚ್ಛಿಸುತ್ತೇನೆ. ಕೇಳುವವರು ಆಶ್ಚರ್ಯಪಡುವರು; ದುಃಖಪೂರ್ಣವಾದ ಏನಾದರೂ ಸಂತೋಷ ವಾರ್ತೆ ಇದೆಯೇ ಎಂದು. ನಾನು ಅವರೊಡನೆ ಹೇಳುತ್ತೇನೆ– ಹೌದು, ಅಂಥ ಒಂದು ಸಂತೋಷ ಸುದ್ದಿಯೂ ಇದೆ. ಅದನ್ನು ಯಾವಾಗಲೂ ದುಃಖ ಸಹಿತವಾಗಿಯೇ ಹೇಳಲು ಸಾಧ್ಯ. ಅದು 'ಶಹಾದತ್' (ಧರ್ಮಬಲಿ)ನ ವಾರ್ತೆಯಾಗಿದೆ. ಎಲ್ಲಾ ಧರ್ಮಬಲಿಯಲ್ಲೂ ಗೋಚರಿಸಲ್ಪಡುವ ಒಂದು ವೈಶಿಷ್ಟ್ಯವೇನೆಂದರೆ ಅದು ಅತ್ಯಂತ ಮಹತ್ವಪೂರ್ಣವೂ ಸಂತೋಷ ಭರಿತವೂ ಆಗಿದ್ದರೂ ಸಹ ದುಃಖದಿಂದ ತುಂಬಿರುತ್ತದೆ. ನಾನು ಹೇಳಲಿಚ್ಛಿಸುವ 'ಶಹಾದತ್' ಚರಿತ್ರೆ ಪ್ರಧಾನವಾದೊಂದು ಧರ್ಮ ಬಲಿಯಾಗಿದೆ. ಏಕೆಂದರೆ ಅಮೇರಿಕದಲ್ಲಿ ಮೊತ್ತಮೊದಲ ಬಾರಿ ಓರ್ವ ಅಹ್ಮದೀ ಯುವಕನಿಗೆ ಅಲ್ಲಾಹು ಶಹಾದತಿನ ಮಹತ್ತಾದ ಸ್ಥಾನವನ್ನು ನೀಡಿರುವನು. ಅಮೇರಿಕದ ಮಣ್ಣು ಸವಿದ ಈ ಧರ್ಮಬಲಿಯ ರಕ್ತ ಅಹ್ಮದಿಯಾ ಚರಿತ್ರೆಯಲ್ಲಿ ಅಮೇರಿಕಕ್ಕೆ ಸಂಬಂಧಿಸಿದಂತೆ ಮೊದಲ ಘಟನೆಯಾಗಿದೆ. ಈ ಧರ್ಮಬಲಿ ಅತಿ ಹೆಚ್ಚು ಮಹತ್ವದಿಂದ ಕೂಡಿದ ಒಂದು ಶಹಾದತಾಗಿದೆ.

ನಮ್ಮೋರ್ವ ಭಕ್ತನಾದ ಸಹೋದರ ಡಾಕ್ಟರ್ ಮುಝಫ್ಫರ್ ಅಹ್ಮದ್ ಸಾಹೇಬ್ ಅಮೇರಿಕದ ಡೆಟ್ರಾಯಿಟ್‌ನಲ್ಲಿ ವಾಸಿಸುತ್ತಿದ್ದರು. ಅವರ ನಿಸ್ವಾರ್ಥ ಸೇವೆಗಳೂ ಅರ್ಪಣಾಬೋಧದಿಂದ ಕೂಡಿದ ಪ್ರವರ್ತನೆಗಳೂ ಅವರು ಅಮೇರಿಕದ ಪ್ರಾದೇಶಿಕ "ಖಾಯಿದ್" (ಅಹ್ಮದಿಯಾ ಯುವಜನ ಸಂಘದ ನಾಯಕ) ಆಗಿ ಚುನಾಯಿಸಲ್ಪಡಲು ಕಾರಣವಾಯಿತು. ಅದರ ನಂತರ ಅಮೇರಿಕನ್ ಜಮಾಅತುಗಳ ನೇಶನಲ್ ಸೆಕ್ರಟರಿಯಾಗಿ ಸಹ ಅವರು ಆಯ್ಕೆಯಾದರು. ರಕ್ತಸಾಕ್ಷಿಯಾಗುವ ಕಾಲದಲ್ಲೂ ಆ ಹುದ್ದೆಯಲ್ಲೇ ಅವರಿದ್ದರು. ಅವರಿಗೆ 'ದಅ್‌ವತೆ ಇಲಲ್ಲಾಹ್' (ಅಲ್ಲಾಹನ ಕಡೆಗೆ ಆಹ್ವಾನಿಸುವುದು)ನಲ್ಲಿ ಅತ್ಯಂತ ಆಸಕ್ತಿಯಿತ್ತು. ಇಸ್ಲಾಮಿನ ಪ್ರಚಾರಕ್ಕಾಗಿ ಅಲ್ಲಾಹನು ನೀಡುವ ಪ್ರತಿಯೊಂದು ಸಂದರ್ಭವನ್ನು ಸಹ ಅವರು ಸರಿಯಾಗಿ ಉಪಯೋಗಿಸುತ್ತಿದ್ದರು. ಒಮ್ಮೆಯೂ ಅಂಥ ಸಂದರ್ಭವನ್ನು ಅವರು ವ್ಯರ್ಥ ಮಾಡುತ್ತಿರಲಿಲ್ಲ. ಮೂರು ದಿನಗಳ ಮೊದಲು ಅಮೇರಿಕದಲ್ಲಿರುವ ಅವರ ನಿವಾಸದಲ್ಲಿ ಓರ್ವ ಬ್ಲೇಕ್ ಅಮೇರಿಕನ್ ಸತ್ಯಾನ್ವೇಷಕನೆಂಬ ಸೋಗಿನಲ್ಲಿ ಬಂದನು. ಆತನು ಅದರ ಮೊದಲು ಸಹ ಅವರನ್ನು ಭೇಟಿಯಾಗಿ ಅವರ ಆತಿಥ್ಯಾದರಗಳನ್ನು ಅನುಭವಿಸಿದ್ದನು. ಹಾಗೆ ಆತ ಪುನಃ ಬಂದಾಗ ಆತನ ಆಸಕ್ತಿಯನ್ನು ಮನಗಂಡು ಆತನಿಗೆ ಇನ್ನೂ ಒಂದು ಸಂಧ

---

(18ನೇ ಪುಟದಿಂದ)

ಎಲ್ಲಾ ನಿಬಂಧನೆಗಳೂ ಲಕ್ಷಣಗಳೂ ಪೂರ್ತಿಯಾಗಿರುವುದು ಆ ಪುಣ್ಯಾತ್ಮರಲ್ಲೇ.

ಪ್ರಿಯ ಸಹೋದರರೇ, ನಿಮಗೆ ಅಂಗೀಕೃತವಾಗಿರುವ ನಿಮ್ಮ ವೇದ ಗ್ರಂಥದಿಂದಲೇ ಇಸ್ಲಾಂ ಧರ್ಮ ಸ್ಥಾಪಕರಾದ ಆ ಪ್ರವಾದಿಯ ಸತ್ಯತೆಯನ್ನು ನಾನು ಸ್ಪಷ್ಟವಾಗಿ ವಿವರಿಸಿರುವುದರಿಂದ ನೀವು ಈ ವಿಷಯದ ಕಡೆ ನಿಮ್ಮ ಗಮನವನ್ನು ಹರಿಯಿಸುವಿರೆಂದು ಭಾವಿಸುತ್ತೇನೆ. ಆ ಪ್ರವಾದಿವರ್ಯರ ಕುರಿತು ಇನ್ನೂ ಅನೇಕ ಭವಿಷ್ಯನುಡಿ ಬೈಬಲಿನಲ್ಲಿವೆ. ಅವೆಲ್ಲವುಗಳನ್ನೂ ಈ ಚಿಕ್ಕ ಲೇಖನದಲ್ಲಿ ವಿವರಿಸಲು ಸಾಧ್ಯವಾಗಲಾರದು. ●

( ಮುಂದುವರಿಯುವುದು )

ಅನುವಾದ : ಇಬ್ನು ಅಬ್ದುಲ್ಲ

ರ್ಶನವನ್ನು ನೀಡಿದರು. ಸಂಭಾಷಣೆಯ ನಂತರ ಆತ ಹಿಂತೆರಳುವಾಗ ಮನೆಯ ಹೊರಬಾಗಿಲ ತನಕ ಹೋಗಿ ಬೀಳ್ಕೊಟ್ಟು ಹಿಂತಿರುಗಿದ ಕೂಡಲೇ ಹಿಂದಿನಿಂದ ಆತ ಗುಂಡಿಟ್ಟು ಅವರನ್ನು ಅಲ್ಲೇ ಹುತಾತ್ಮರನ್ನಾಗಿ ಮಾಡಿದನು. ಆ ಪ್ರದೇಶದಲ್ಲಿ ಅಂದೇ ರಾತ್ರಿ ಇನ್ನೂ ಎರಡು ಘಟನೆಗಳು ಸಹ ಸಂಭವಿಸಿದುವು. ಈ ಘಟನೆಗಳು ಭೀಕರವಾದೊಂದು ಗೂಢಾಲೋಚನೆಯ ಫಲವೆಂದು ತಿಳಿದುಬರುತ್ತದೆ, ಒಂದು ಘಟನೆ ಇದಾಗಿದೆ: ಅಲ್ಲಿನ ಜಮಾಅತ್ ಪ್ರೆಸಿಡೆಂಟ್ ಲಈಕ್‌ಬಟ್ಟ್ ಸಾಹೇಬರ ಮನೆಯ ಮೇಲೆ ಧಾಳಿ ನಡೆಸಲಾಯಿತು. ಆದರೆ ಅಲ್ಲಾಹನು ಅವರನ್ನು ರಕ್ಷಿಸಿದನು. ಅಂದೇ ರಾತ್ರಿ ಅಹ್ಮದಿಯಾ ಜಮಾಅತಿನ ಮಿಶನ್ ಹೌಸನ್ನು ಬಾಂಬ್ ಇಟ್ಟು ಧ್ವಂಸ ಮಾಡಲಾಯಿತು. ನನಗೆ ಮೊದಲು ಲಭಿಸಿದ ವಾರ್ತೆಯನುಸಾರ (ಅದು ಸಹ ಗುರುತರವಾಗಿತ್ತು) ಬೆಳಿಗ್ಗೆ ಆ ಮಿಶನ್ ಹೌಸಿನಿಂದ ಎರಡು ಮೃತ ಶರೀರಗಳು ಪತ್ತೆಯಾದುವು. ಕೂಡಲೇ ತಪಾಸಣೆ ನಡೆದಾಗ ಮನಸ್ಸಮಾಧಾನವಾಯಿತು. ಆವು ಅಹ್ಮದಿಯರ ಮೃತ ದೇಹಗಳಾಗಿರಲಿಲ್ಲ. ಅಮೇರಿಕದ ಯಾವೊಬ್ಬ ಅಹ್ಮದಿ ಕೂಡ ನಾಪತ್ತೆಯಾದ ಸುದ್ದಿಯೂ ಇರಲಿಲ್ಲ. ಪೋಲೀಸ್ ತನಿಖೆ ನಡೆಸಿದಾಗ ಆ ಘಟನೆಯಲ್ಲಿ ಒಂದು ಮಹತ್ವಾದ ಕುರುಹು ಕಂಡು ಬಂತು. ದೈವಿಕ ಸಹಾಯದ ಅತಿ ಅದ್ಭುತಕರವಾದೊಂದು ದೃಷ್ಟಾಂತ ಗೋಚರಿಸಿತು. ಅದೇನೆಂದರೆ, ಡಾ। ಮುಝಫ್ಫರ್ ಅಹ್ಮದ್ ಸಾಹೇಬರನ್ನು ರಕ್ತಸಾಕ್ಷಿ ಮಾಡಿದ ಬಳಿಕ ಘಾತಕನೂ ಅವನೊಬ್ಬ ಸಹಾಯಕನೂ ಅಲ್ಲಿನ ಪ್ರೆಸಿಡೆಂಟ್ ಲಈಕ್‌ಬಟ್ಟ್ ಸಾಹೇಬರ ಮನೆಗೆ ಧಾಳಿಯಿಟ್ಟರು. ನಂತರ ಮಿಶನ್‌ಹೌಸನ್ನು ಬಾಂಬ್ ಇಟ್ಟು ಧ್ವಂಸಗೊಳಿಸಿದಾಗ ಆ ಬಾಂಬ್ ಸ್ಫೋಟನದಲ್ಲೇ ಅವರೀರ್ವರೂ ಕೊಲ್ಲಲ್ಪಟ್ಟರು.

ಅಮೇರಿಕದಲ್ಲಿ ಈ ಘಟನೆ ಅತ್ಯಂತ ಪ್ರಾಧಾನ್ಯವುಳ್ಳದ್ದಾಗಿದೆ. ಏಕೆಂದರೆ, ಇಂಥ ಕೊಲೆಪಾತಕಿಗಳು ಪಾರಾಗಿ ಹೊರಬಂದರೆ ನಂತರ ಅವರ ಬಗ್ಗೆ ಯಾವ ವಿವರವಾಗಲಿ ಲಭಿಸಲಿಕ್ಕಿಲ್ಲವೆಂದು ಅಮೇರಿಕದ ಕುರಿತು ತಿಳಿದವರು ಬಲ್ಲರು. ಕೆಲವು ಸಂಘಟನೆಗಳು ಅದರ ಜವಾಬ್ದಾರಿಕೆಯನ್ನು ವಹಿಸಿದರೂ ನಂತರ ಅದು ಬಗೆ ಹರಿಯದೆಯೇ ಬಾಕಿಯಾಗುತ್ತದೆ. ನಿರಾವಲಂಬಿತರೂ ನಿರ್ಬಲರೂ ಆಗಿರುವ ಅಹ್ಮದಿಯರಿಗೋಸ್ಕರವಾದರೋ ಅಂಥ ತೊಂದರೆಗಳನ್ನು ಸಹಿಸಲಿಕ್ಕೆ ಯಾರೂ ಮುಂದೆ ಬರಲಿಕ್ಕಿಲ್ಲ. ಪೋಲೀಸ್ ತಪಾಸಣೆ ಪ್ರಕಾರ "ಬ್ಲೇಕ್ ಮುಸ್ಲಿಂ ಓರ್ಗನೈಝೇಶನ್" ಎಂಬ ಸಂಘವಾಗಿದೆ ಈ ಘಟನೆಗಳಿಗೆ ಹೊಣೆ. ಅವರಿಗೆ ಕೆಲವು ರಾಜ್ಯಗಳು ಇಸ್ಲಾಮಿನ ಕುರಿತು ಅತ್ಯಂತ ಅಬದ್ಧ ಹಾಗೂ ನಿಕೃಷ್ಟವಾದ ಅಧ್ಯಾಪನಗಳನ್ನು ನೀಡುತ್ತಿವೆ. ಅಮುಸ್ಲಿಮರನ್ನು ಕೊಂದರೆ "ಘಾಝಿ" (ಯೋಧ) ಮತ್ತು "ಶಹೀದ್" (ಹುತಾತ್ಮ) ಆಗಬಹುದೆಂದೂ ಅಕಾರಣವಾಗಿಯೇ ಮುಸ್ಲಿಮೇತರರನ್ನು ವಧಿಸಿದರೆ ಸ್ವರ್ಗ ಖಂಡಿತವಾಗಿಯೂ ದೊರೆಯುವುದೆಂದೆಲ್ಲಾ ಅವರಿಗೆ ಹೇಳಿ ಅವರು ನಂಬುವಂತೆ ಮಾಡಲಾಗುತ್ತಿದೆ. ಇವರು ಇದಕ್ಕಿಂತ ಮೊದಲೂ ಸಹ ಭೀಕರ ಕೃತ್ಯಗಳನ್ನೆಸಗಿದವರಾಗಿದ್ದಾರೆ, ದೀರ್ಘಕಾಲ ತಪಾಸಣೆ ಮಾಡಿದರೂ ಕೋಟಿಗಟ್ಟಲೆ ರೂಪಾಯಿ ವ್ಯಯಿಸಿದರೂ ಸಹ ಅವರನ್ನು ಹಿಡಿಯಲಾಗಲಿಲ್ಲ. ಎರಡು ಮೂರು ವರ್ಷಗಳ ಮೊದಲೆಂದು ತೋರುತ್ತದೆ — ಸಾನ್‌ಫ್ರಾನ್ಸಿಸ್ಕೋದಲ್ಲಿ ಇದೇ ರೀತಿ ಕೊಲೆ ಪಾತಕಗಳ ಒಂದು ಸರಣಿ ಆರಂಭವಾಯಿತು. ಸಾಮಾನ್ಯವಾಗಿ ಯುವದಂಪತಿಗಳನ್ನು ಅಂದು ಕೊಲೆ ಮಾಡಲಾಗುತ್ತಿತ್ತು. ಆದರೆ ಆ ಕೊಲೆ ಪಾತಕಗಳ ಹಿಂದಿನಿಂದ ವರ್ತಿಸುವ ಶಕ್ತಿಯ ಕುರಿತು ಯಾವ ಕುರುಹಾಗಲಿ ದೊರೆಯದ ಕಾರಣ ಅಲ್ಲಿನ ಪೋಲೀಸರಿಗೆ ಅಪರಾಧಿಗಳನ್ನು ಹಿಡಿಯಲಿಕ್ಕೆ ಸಾಧ್ಯವಾಗಲಿಲ್ಲ. ಅಲ್ಲಿ ಹಾಗೆ 24 ಕೊಲೆಪಾತಕಗಳು ನಡೆದುವು. ಅಮೇರಿಕದಲ್ಲೆಲ್ಲಾ ಭಯಭ್ರಾಂತಿಯ ವಾತಾವರಣ ಪಸರಿಸಿತ್ತು. ಒಂದೇ ನಗರದಲ್ಲಿ ಒಂದರ ನಂತರ ಇನ್ನೊಂದರಂತೆ 24 ಕೊಲೆಪಾತಕಗಳು ನಡೆಯುವುದು ನಗಣ್ಯ ಸಂಗತಿಯಲ್ಲವಷ್ಟೇ. ಅಮೇರಿಕದ ಗುಪ್ತಚರ ವಿಭಾಗದ ಎಲ್ಲಾ ಏಜೆನ್ಸಿಗಳೂ ಅತ್ಯಂತ ಶ್ರಮಿಸಿದರೂ ಅಪರಾಧಿಗಳನ್ನು ಕಂಡು ಹಿಡಿಯಲಾಗಲಿಲ್ಲ. ಕೊನೆಗೆ ಬೇರೆ ಯಾವುದೋ ಒಂದು ಅಪರಾಧಕ್ಕಾಗಿ ಅವರಲ್ಲೊಬ್ಬನು ಬಂಧಿಸಲ್ಪಟ್ಟನು. ಅವನ ವಿಚಾರಣೆ ವ್ಯಾಪಕವಾಗಿ ನಡೆಸಿದಾಗ, ಆ ಸಂಘಕ್ಕೆ ಸೇರಿದವರೇ ಈ ಕೊಲೆಪಾತಕಗಳನ್ನೆಸಗಿದ್ದರೆಂದು ಸಾಬೀತಾಯಿತು. ಅಲ್ಲಿ ಸಿಕ್ಕಿದ ಲಘು ಲೇಖನಗಳಲ್ಲಿ, ಅಮುಸ್ಲಿಮರನ್ನು ಕೊಲ್ಲಲಿಕ್ಕೆ ಇಸ್ಲಾಂ ತಮಗೆ ಕಲಿಸುತ್ತದೆಂದು ಹೇಳಲಾಗಿದೆ. ಎಷ್ಟು ಹೆಚ್ಚು ಕೊಲೆ ನಡೆಸಿದರೆ ಅಷ್ಟೇ ಹೆಚ್ಚು ಅಲ್ಲಾಹನಿಂದ ಪ್ರತಿಫಲ ಲಭಿಸುತ್ತದಂತೆ. ಇಂತಹ ಹಲವು ಸಂಘಟನೆಗಳು ಅಲ್ಲಿವೆ. ಅವರಿಗೆ ಇಸ್ಲಾ

ಮನ್ನು ಪರಿಚಯ ಮಾಡಿ ಕೊಡಲಾಗುವುದು ಈ ರೀತಿಯಲ್ಲಾಗಿದೆ. ಒಂದು ರೀತಿಯಲ್ಲಿ ಹೇಳುವುದಾದರೆ ಅವರು ನಿರಪರಾಧಿಗಳು. ಅವರ ನಿಷ್ಕಳಂಕತೆಯ ಕಾರಣದಿಂದ, ಇಸ್ಲಾಮನ್ನು ಈ ವಿಧದಲ್ಲಿ ಪರಿಚಯ ಮಾಡಿ ಕೊಡುವವರ ಮಾತುಗಳನ್ನು ನಿಜವೆಂದು ಅವರು ನಂಬುತ್ತಾರೆ. ಆದರೆ ಅವರ ಪೈಕಿ ಕೆಲವರು ಪಾರಂಪರ್ಯವಾಗಿ ಅಪರಾಧಿಗಳೇ ಆಗಿದ್ದಾರೆ. ಅವರಿಗೆ ಈ ಬಗೆಯ ಅಪರಾಧಗಳನ್ನು ಎಸಗಲು ಹಣ ನೀಡಲಾಗುತ್ತದೆ. ಬೋಂಬ್ ಸ್ಫೋಟನದಲ್ಲಿ ಮೃತನಾದ ಒಬ್ಬನ ಕಿಸೆಯಿಂದ ಒಂದು ಕಾರ್ಡು ಸಿಕ್ಕಿತು. ಆ ಕಾರ್ಡಿನ ಸುಳಿವಿನಲ್ಲಿ ಪೋಲೀಸರು ತಪಾಸಣೆ ಮಾಡಿದಾಗ ಈ ಸಂಗತಿಗಳೆಲ್ಲಾ ಬಯಲಾದುವು.

ಅಮೇರಿಕದಲ್ಲಿ ಕೊಲೆಪಾತಕಿಗಳು ಸೆರೆ ಹಿಡಿಯಲ್ಪಟ್ಟರೂ ಅವರಿಗೆ ವಧೆಶಿಕ್ಷೆ ನೀಡಲಾಗುವುದಿಲ್ಲ. ಹಾಗೆ ಅವರು ಹೆಚ್ಚು ಧೈರ್ಯಶಾಲಿಯಾಗುತ್ತಾರೆ. ಇಂತಹ ಸಂಘಟಿತವಾದ ಅಪರಾಧ ಕೃತ್ಯಗಳು ಎಸಗಲಾಗುವಾಗ ಸಾಕ್ಷಿಗಳ ಮೇಲೆ ಹೆಚ್ಚಿನ ಒತ್ತಡ ಹಾಕಲಾಗುತ್ತಧೆ. ಹೀಗಿರುವ ಘಟನೆಗಳಲ್ಲಿ ಅಪರಾಧಿಗಳು ಬಂಧಿಸಲ್ಪಟ್ಟರೂ ಜೈಲನ್ನು ಧ್ವಂಸಗೊಳಿಸಿಯಾದರೂ ಅವರನ್ನು ಬಂಧಮುಕ್ತ ಮಾಡಲಾಗುತ್ತದೆ. ಹಾಗಿರುವಾಗ ನಿಷ್ಕಳಂಕನಾದ ಒಬ್ಬ ಅಹ್ಮದಿಯ ಕೊಲೆಗಾರ ಬಹಳ ಸುಲಭದಲ್ಲೇ ಪಾರಾಗಬಹುದಾಗಿದ್ದರೂ ಅವನು ಒಂದು ಹೆಜ್ಜೆಯಾದರೂ ಓಡಲಿಕ್ಕೆ ಅಲ್ಲಾಹನು ಬಿಡಲಿಲ್ಲ. ಮಸೀದಿಯನ್ನು ಧ್ವಂಸಗೊಳಿಸಲು ಉಪಯೋಗಿಸಿದ ಅದೇ ಬಾಂಬಿನಿಂದಲೇ ಅವರಿಬ್ಬರೂ ಕೊಲ್ಲಲ್ಪಟ್ಟರು. ಇದು ಅಲ್ಲಾಹನ ಅದ್ಭುತಕರವಾದ ದೃಷ್ಟಾಂತವಾಗಿದೆ.

ಹೆಚ್ಚಿನ ಅನ್ವೇಷಣೆ ನಡೆಸಿದಾಗ, ವೇದನಾಜನಕವೂ ದುಃಖಕರವೂ ಲಜ್ಜಾಕರವೂ ಆದ ಹಲವು ಸಂಗತಿಗಳು ಸಹ ತಿಳಿಯಲು ಸಾಧ್ಯವಾಯಿತು. ಪೋಲೀಸ್ ವರದಿಯಂತೆ ಇವರನ್ನು ಒಂದು ಭಾಗ್ಯಹೀನ ರಾಜ್ಯದ ಮೌಲ್ವಿಗಳು ಅವರ ಸ್ವಂತ ಖರ್ಚಿನಲ್ಲಿ ಅಲ್ಲಿಗೆ ಕರೆಸಿ ಅಹ್ಮದಿಯರು ಅತ್ಯಂತ ದ್ವೇಷಿಸಲ್ಪಡಬೇಕಾದವರೆಂದೂ ಅವರನ್ನು ಕೊಂದರೆ ನಿಮಗೆ ಅತಿ ಹೆಚ್ಚು ಪ್ರತಿಫಲ ಲಭಿಸುವುದೆಂದೂ ಇತ್ಯಾದಿಯಾಗಿ ಬೋಧಿಸಲಾಯಿತು. ಅದು ಮಾತ್ರವಲ್ಲದೆ, ಈ ಲೋಕದಲ್ಲಿ ಹಣ ಲಭಿಸುವುದೆಂದೂ ಪರಲೋಕದಲ್ಲಿ ಸ್ವರ್ಗ ಲಭಿಸುವುದೆಂದೂ ಹೇಳಿ ಅವರನ್ನು ಪ್ರಲೋಭಿಸಲಾಯಿತು. ಹಾಗೆ ಎಲ್ಲಾ ರೀತಿಯಲ್ಲೂ ತಯಾರುಮಾಡಿ ಅವರನ್ನು ಆಚೆಗೆ ಕಳುಹಿಸಲಾಯಿತು. ಅವರೀರ್ವರೂ ಸ್ವಯಂ ಪ್ರೇರಿತರಾಗಿ ಅವಿಹಿತವಾದ ಆವೇಶಕ್ಕೆ ಅಧೀನರಾಗಿರಲಿಲ್ಲ. ತದ್ವಿರುದ್ಧವಾಗಿ ಅತಿ ವಿದಗ್ಧವಾದ ಗೂಢಾಲೋಚನೆಯ ಅನುಸಾರ ಸಿದ್ಧಗೊಳಿಸಲಾದ ಅವರ ಮುಜಾಹಿದರ ಪೈಕಿ ಈರ್ವರಾಗಿದ್ದರು. ಘಟನೆಯ ಆರಂಭದಲ್ಲೇ ಅವರ ಪತ್ತೆಯಾದುದರಿಂದ ಅಲ್ಲಾಹನ ಅನುಗ್ರಹದಿಂದ ಈ ಅಪರಾಧಿಗಳ ಶೃಂಖಲೆಯನ್ನು ಒಟ್ಟಾಗಿ ಹಿಡಿದು ಬಹಿರಂಗ ಪಡಿಸಲಾಗುವುದೆಂದು ನಿರೀಕ್ಷಿಸಬಹುದು.

ಒಟ್ಟಾರೆ, ಘಟನೆ ಏನೇ ಸಂಭವಿಸಿದರೂ ಇದರಿಂದ ಅಹ್ಮದಿಯರು ಭೀತರಾಗುವರೆಂದಾಗಲಿ ಇದರ ಫಲವಾಗಿ ಅವರು ಸತ್ಯ ಪ್ರಬೋಧನೆಯಿಂದ ಹಿಮ್ಮೆಟ್ಟುವರೆಂದಾಗಲಿ ಯಾರಾದರೂ ಭಾವಿಸುವುದಾದರೆ ಅದು ಅವರ ಬುದ್ಧಿಹೀನ ಗ್ರಹಿಕೆ ಮಾತ್ರವಾಗಿದೆ. ಅಹ್ಮದಿಯರು ಭಯಭೀತರಾಗಲಿಕ್ಕಾಗಿ ಸೃಷ್ಟಿಸಲ್ಪಡಲೇ ಇಲ್ಲ. ಅಹ್ಮದಿಯರ ಹೃದಯ ಭಾವನೆಗಳ ಕುರಿತಾಗಲಿ ಅವರ ಮನೋದಾರ್ಢ್ಯತೆಯ ಬಗ್ಗೆಯಾಗಲಿ ಈ ಜನರಿಗೆ ತಿಳುವಳಿಕೆಯೇ ಇಲ್ಲ. ಅಹ್ಮದಿಯರು, ತಾವು ಹಝ್ರತ್ ಮುಹಮ್ಮದ್ ಪೈಗಂಬರ್ (ಸ)ರವರ ದಾಸರೂ ಭಟರೂ ಎಂದು ವಾದಿಸುವವರಾಗಿದ್ದಾರೆ. ಜನಸಾಮಾನ್ಯರು ನಮ್ಮ ಮಹೋನ್ನತ ಸ್ಥಾನದ ಕುರಿತು ಅಜ್ಞರು. ಪ್ರತಿಯೊಂದು ಹೆಜ್ಜೆಯಲ್ಲೂ ದೈವ ಸಹಾಯ ನಮ್ಮೊಡನೆ ಇದೆಯೆಂದು ನಾವು ಮನಗಾಣುತ್ತೇವೆ. ಆದ್ದರಿಂದಲೇ ಅಮೇರಿಕದಲ್ಲಾಗಲಿ ಲೋಕದ ಬೇರೆ ಯಾವುದೇ ಕಡೆಯಲ್ಲಾಗಲಿ ಈ ತರದ ಆಕ್ರಮಣಗಳ ಫಲವಾಗಿ ಅಹ್ಮದಿಯರು ತಮ್ಮ ಸತ್ಯ ಪ್ರಬೋಧನೆಯಿಂದ ವಿರಮಿಸುವ ಪ್ರಶ್ನೆಯೇ ಏಳುವುದಿಲ್ಲ. ಎಲ್ಲಾ ಪರಿಸ್ಥಿತಿಗಳಲ್ಲೂ ಅವರು ದೇವನ ಕಡೆಗೆ ಜನರನ್ನು ಕರೆಯುವರು, ಕರೆಯುತ್ತಲೇ ಇರುವರು; ಒಂದರಿಂದ ನೂರು, ನೂರರಿಂದ ಸಾವಿರ, ಸಾವಿರದಿಂದ ಲಕ್ಷ ಎಂಬ ಕ್ರಮದಲ್ಲಿ ದೈವಿಕ ಪ್ರಬೋಧಕರು ಉಂಟಾಗುತ್ತಲೇ ಇರುವರು. ಆದುದರಿಂದ ಇದು ಎಂದಿಗೂ ಭೀತಿ ಅಥವಾ ವಿಷಾದದ ಸಂದರ್ಭವಲ್ಲ. ದೈವ ಮಾರ್ಗದಲ್ಲಿ ಆತ್ಮಾರ್ಪಣೆ ದೈವಿಕ ಪ್ರಬೋಧಕರಾದ ಜನರಿಗೆ ವಿಧಿಸಲ್ಪಟ್ಟದ್ದು. ಈ ಆತ್ಮಾರ್ಪಣೆಗಳು ಮಹತ್ತಾದ ಪಾರಿತೋಷಕವೆಂಬ ರೀತಿಯಲ್ಲಿ ವಿಧಿಸಲ್ಪಟ್ಟಿದೆ; ಶಿಕ್ಷೆಯೆಂಬ

ರೀತಿಯಲ್ಲಲ್ಲ. ಆದ್ದರಿಂದ ನಾನು ಈ ಆಘಾತದಿಂದ ಅತ್ಯಂತ ನೊಂದಿರುವ ಜನರೊಡನೆ, ಮುಖ್ಯವಾಗಿ ಡೆಟ್ರಾಯಿಟ್ ನಿವಾಸಿಗಳೊಡನೆ ಹೇಳುತ್ತೇನೆ: ಎಲೈ ಡೆಟ್ರಾಯಿಟ್‌ನಲ್ಲೂ ಅಮೇರಿಕದ ಇತರ ಪಟ್ಟಣಗಳಲ್ಲೂ ವಾಸಿಸುವ ಅಹ್ಮದಿಯರೇ, ಎಲೈ ಪೂರ್ವ – ಪಶ್ಚಿಮ ದಿಕ್ಕುಗಳಲ್ಲಿ ವಾಸಿಸುವ, ಇಸ್ಲಾಮಿಗಾಗಿ ಆತ್ಮಸಮರ್ಪಣಕ್ಕೆ ಸನ್ನದ್ಧರಾದ ಪ್ರವರ್ತಕರೇ, ಈ ತಾತ್ಕಾಲಿಕ ದು:ಖದಿಂದ ನೀವು ಶಕ್ತಿಗುಂದಬಾರದು. ಇದು ಅಪಾರವಾದ ಸಂತೋಷ ಲಬ್ಧಿಯ ನಾಂದಿಯಾಗಿದೆ. ಈ ಹುತಾತ್ಮರನ್ನು ಮೃತರೆಂದು ಹೇಳಬೇಡಿರಿ. ಅವರು ಜೀವಂತ ಇದ್ದಾರೆ. ಯಾವ ಮಾರ್ಗದಲ್ಲಿ ಈ ಸತ್ಯವಂತನಾದ ಮನುಷ್ಯ ಮುಂದಕ್ಕೆ ಸಾಗಿದ್ದಾರೋ, ಆ ಮಾರ್ಗದಿಂದ ಒಂದಿಂಚಾಗಲಿ ಹಿಂದೆ ಸರಿಯಬೇಡಿರಿ. ನಿಮ್ಮ ಪಾದಗಳು ಕುಸಿಯದಿರಲಿ. ನಿಮ್ಮ ಉದ್ದೇಶ ಲಕ್ಷ್ಯಗಳು ಚಂಚಲಿತವಾಗದಿರಲಿ. ನೀವು ಚೆನ್ನಾಗಿ ಯೋಚಿಸಿ ಸುದೃಢವಾದ ಜ್ಞಾನ ಮತ್ತು ಪರಿಪೂರ್ಣವಾದ ವಿಶ್ವಾಸದ ಆಧಾರದಲ್ಲಿ "ಸಾಲಿಹಿಯ್ಯತ್"(ಧರ್ಮಶೀಲತೆ)ನ ನಂತರ "ಶಹಾದತ್" (ಧರ್ಮಬಲಿ) ಎಂಬೊಂದು ಉನ್ನತ ಸ್ಥಾನ ಸಹ ನಿಶ್ಚಯಿಸಲ್ಪಟ್ಟ ಒಂದು ಸತ್ಯಮಾರ್ಗವನ್ನು ಆಯ್ಕೆ ಮಾಡಿರುವಿರಿ. ಅದನ್ನು ನೀವು ಭಯ ಅಥವಾ ವಿಷಾದದ ಸ್ಥಾನವಾಗಿ ಮಾರ್ಪಡಿಸಬೇಡಿರಿ. ಇದು ಅತ್ಯುತ್ಕೃಷ್ಟವೂ ಅತಿ ಮಹತ್ವಪೂರ್ಣವೂ ಆದ ಒಂದು ಗೌರವಲಬ್ಧಿಯ ಸ್ಥಾನವಾಗಿದೆ. ಆ ಸ್ಥಾನವನ್ನು ಗಳಿಸುವ ಕಾತರದಿಂದ ಲಕ್ಷಗಟ್ಟಲೆ ಜನರು ಮೃತರಾದರು. ಲಕ್ಷಗಟ್ಟಲೆ ಜನರು ಆ ಸ್ಥಾನವನ್ನು ಪಡೆಯಲಿಕ್ಕಾಗಿ ಆಶಿಸುತ್ತಿದ್ದರು. ಮಹನೀಯ ಖಾಲಿದ್ ಇಬ್ನು ವಲೀದ್ (ರ)ರವರ ಆ ಸಂದರ್ಭವನ್ನು ಒಮ್ಮೆ ಜ್ಞಾಪಿಸಿರಿ. ಅವರು ಮರಣ ಶಯ್ಯೆಯಲ್ಲಿ ಅತ್ತು ಅತ್ತು ಬಳಲಿದ್ದಾಗ ಅವರ ಸಂದರ್ಶನಕ್ಕೆ ಬಂದ ಒಬ್ಬರು ಆಶ್ಚರ್ಯ ಚಕಿತರಾಗಿ ಕೇಳಿದರು: "ಎಲೈ ಅಲ್ಲಾಹನ ಖಡ್ಗವೇ, ನೀವು ರಣಾಂಗಣದಲ್ಲಿ, ಮಹಾ ಮಹಾ ಧೀರರೂ ಯೋಧರೂ ಆದ ಭಟರೂ ಭಯಚಕಿತರಾಗಿ ಹಿಮ್ಮೆಟ್ಟುವ ಅಪತ್ಕರವೂ ಭಯಾನಕವೂ ಆದ ಸಂದರ್ಭಗಳಲ್ಲಿ ಹಿರಿದ ಖಡ್ಗ ಸಹಿತ ನಿರ್ಭಯದಿಂದ ಮುನ್ನುಗ್ಗಿದ ವ್ಯಕ್ತಿಯಾಗಿದ್ದೀರಿ. ಇಂದು ಮೃತ್ಯುವಿಗೆ ಇಷ್ಟೇಕೆ ಹೆದರುತ್ತೀರಿ? ಈ ಭೀರುತ್ವ ತಮಗೆ ಉಚಿತವಲ್ಲ." ಮಹನೀಯ ಖಾಲಿದ್ (ರ) ಅದಕ್ಕೆ ಉತ್ತರ ಹೇಳಿದರು: "ಅಲ್ಲ ಅಲ್ಲ; ಖಾಲಿದ್ ಮೃತ್ಯುವಿಗೆ ಹೆದರುವವನಲ್ಲ. ಆದರೆ ದೇವಮಾರ್ಗದಲ್ಲಿ ರಕ್ತಸಾಕ್ಷಿಯಾಗಲು ಭಾಗ್ಯ ಸಿಗಲಿಲ್ಲವೆಂದು ದುಃಖಿತನು." ನೋಡಿರಿ, ಇದೇ ಖಾಲಿದ್ (ರ) ಎಲ್ಲಾ ಯುದ್ಧರಂಗಗಳಲ್ಲೂ ಅಲ್ಲಾಹನ ಮಾರ್ಗದಲ್ಲಿ ಧರ್ಮಬಲಿಯಾಗುವ ಸೌಭಾಗ್ಯವಂತರೊಂದಿಗೆ ಸೇರಬೇಕೆಂಬ ಆಶೆಯಿಂದ ಮುನ್ನುಗ್ಗಿದರು. ಇದೇ ಆಶೆಯಿಟ್ಟುಕೊಂಡು ಅವರು ಎಲ್ಲಾ ಆಪತ್ಕಾರಿ ಸ್ಥಳಗಳನ್ನೂ ಪ್ರವೇಶಿಸಿದರು. ಶರೀರ – ಶಿರಸ್ಸು ಬೇರ್ಪಡುವಂಥ, ಕೊರಳು ಕೊಯ್ಯಲ್ಪಡುವಂಥ, ಎದೆ ಸೀಳಲ್ಪಡುವಂಥ, ಶರೀರಾವಯವಗಳು ತುಂಡು ತುಂಡು ಮಾಡಲ್ಪಡುವಂಥ ಭಯಾನಕವಾದ ಎಲ್ಲಾ ಯುದ್ಧಕೇಂದ್ರಗಳನ್ನೂ ಅವರು ಪ್ರವೇಶಿಸಿದರು. ಆದರೆ ಇಂತಹ ಎಲ್ಲಾ ಕಡೆಗಳಿಂದಲೂ ವಿಜೇತನಾಗಿ ಅವರು ಹಿಂತಿರುಗಿ ಬಂದರು. ಶಹಾದತಿನ ರುಚಿ ಸವಿಯಲು ಅವರಿಗೆ ಸಾಧ್ಯವಾಗಲಿಲ್ಲ. ಮರಣ ಶಯ್ಯೆಯಲ್ಲಿ ತನ್ನೊಡನೆ ಕೇಳಿದ ಆ ಸಂದರ್ಶಕನಿಗೆ ಖಾಲಿದ್ (ರ), ಯುದ್ಧರಂಗದಲ್ಲಿ ತನ್ನ ದೇಹದ ಮೇಲುಂಟಾದ ಗಾಯಗಳನ್ನು ತೋರಿಸಿದರು. ತನ್ನ ಶರೀರದ ವಸ್ತ್ರವನ್ನು ಸರಿಸಿ, ತನ್ನ ಹೊಟ್ಟೆಯನ್ನು ತೋರಿಸಿದರು, ತನ್ನ ಎದೆಯನ್ನು ತೋರಿಸಿದರು, ತನ್ನ ಕೈಗಳನ್ನು ತೋರಿಸಿದರು. ಆಪಾದಮಸ್ತಕ ತನಗೆ ಉಂಟಾದ ಗಾಯಗಳನ್ನೆಲ್ಲಾ ಅವರು ತೋರಿಸಿದರು. ನಂತರ ಹೇಳಿದರು – "ನೋಡಿರಿ, ಇಲ್ಲಿ ನೋಡಿರಿ, ಇದೋ ನೋಡಿರಿ! ಓ ಮನುಷ್ಯಾ, ದೇವಮಾರ್ಗದಲ್ಲಿ ಖಾಲಿದ್‌ನ ಶರೀರಕ್ಕೆ ಘಾಸಿಯಾಗದ ಒಂದಿಂಚು ಸ್ಥಳವನ್ನು ನೀವು ಕಾಣುತ್ತೀರಾ? ಆದರೆ ಅಯ್ಯೋ ಕಷ್ಟ! ಅಯ್ಯೋ ಕಷ್ಟ!! ಖಾಲಿದ್‌ನಿಗೆ ಶಹೀದ್ ಆಗಲಿಕ್ಕೆ ಸಾಧ್ಯವಾಗಲಿಲ್ಲ. ಇಂದು ನನ್ನನ್ನು ಪೀಡಿಸುತ್ತಿರುವ ಈ ದುಃಖ ರಕ್ತಸಾಕ್ಷಿಯಾಗಲು ಅತ್ಯಧಿಕವಾದ ಆಶೆಯಿಂದ ರಣಾಂಗಣದಲ್ಲಿ ನಾನು ಸಹಿಸಿದ ಗಾಯಗಳಿಗಿಂತ ಎಷ್ಟೋ ಹೆಚ್ಚು ವೇದನಾಜನಕವಾಗಿದೆ."

ಎಲೈ ಅಲ್ಲಾಹುವಿನ ಮತ್ತು ಅವನ ಪ್ರವಾದಿಯ ಅನುಸರಣದ ಕವಾಟದ ಮೂಲಕ ಸತ್ಯಮಾರ್ಗಕ್ಕೆ ದಾಟಿ ಬಂದವರೇ, ನಿಮ್ಮ ಈ ಜೀವಿತ ಯಾತ್ರೆಯಲ್ಲಿ ನಿಶ್ಚಯವಾಗಿಯೂ 'ಸಾಲಿಹಿಯ್ಯತಿ'ಗಿಂತಲೂ ಮಹೋನ್ನತವಾದೊಂದು ಪದವಿ ಕೂಡ ನಿಮಗೆ ಲಭಿಸುವ ಸಂದರ್ಭ ಒದಗಬಹುದು.

ಚೆನ್ನಾಗಿ ನೆನಪಿಟ್ಟುಕೊಳ್ಳಿರಿ; ಇದು ಭೀತಿ ಅಥವಾ ವಿಷಾದದ, ಲಾಭ ಅಥವಾ ನಷ್ಟದ ಮಾರ್ಗವಲ್ಲ. ತದ್ವಿರುದ್ಧವಾಗಿ ನಿಸ್ಸೀಮವಾದ ಸಮ್ಮಾನಲಬ್ಧಿಯ ಒಂದು ದುರ್ಗಮ ಪಥವಾಗಿದೆ. ಆ ಸಮ್ಮಾನಗಳ ಪ್ರತಿಯೊಂದು ಹಂತ ಇನ್ನೊಂದಕ್ಕಿಂತ ಉನ್ನತವಾದುದು. ನೀವು ಸಂತೋಷದಿಂದ, ಹರ್ಷ ವದನರಾಗಿ, ಧೀರತೆಯಿಂದ, ಉನ್ನತ ಮನೋದಾರ್ಢ್ಯದಿಂದ ಮುನ್ನಡೆಯಿರಿ.

ಅಲ್ಲಾಹನು ನನ್ನ ಹದಯಾಂತರಾಳದಲ್ಲಿ ಬೆಳಗಿದ ಇಸ್ಲಾಮಿಕ ಪ್ರಬೋಧನದ ದೀಪ್ತಿ ಇಂದು ಸಾವಿರ ಗಟ್ಟಲೆ ಅಹ್ಮದಿಯರ ಹೃದಯಗಳಲ್ಲೂ ಪ್ರಕಾಶಿಸುತ್ತಾ ಇದೆ. ಅದನ್ನು ನಂದಿ ಹೋಗಲು ಬಿಡಬಾರದು. ಏಕನೂ ಸಹಭಾಗಿ ಇಲ್ಲದವನೂ ಆದ ದೇವನಾಣೆ ನಾನು ಹೇಳುತ್ತೇನೆ—ನೀವು ಅದನ್ನು ನಂದಿ ಹೋಗಲು ಬಿಡಬಾರದು. ಈ ಪವಿತ್ರವಾದ ವಿಶ್ವಸ್ತ ನಿಧಿಯನ್ನು ನೀವು ಸಂರಕ್ಷಿಸಬೇಕು. ನಾನು ಪ್ರತಾಪಶಾಲಿಯೂ ಮಹತ್ವವಂತನೂ ಆದ ದೇವನ ಪ್ರಮಾಣ ಮಾಡಿ ಹೇಳುತ್ತೇನೆ- ನೀವು ಈ ಪ್ರಕಾಶ ದೀಪದ ಸಂರಕ್ಷಕರಾಗಿ ಮಾರ್ಪಡುವಿರಾದರೆ ದೇವನು ಅದನ್ನು ಎಂದಿಗೂ ನಂದಿ ಹೋಗಲಿಕ್ಕೆ ಬಿಡಲಾರನು. ಈ ಪ್ರಕಾಶ ಜ್ವಾಲೆ ಅತ್ಯುನ್ನತಕ್ಕೇರುವುದು; ಅದು ವ್ಯಾಪಿಸುವುದು; ಹೃದಯಗಳಿಂದ ಹೃದಯಗಳಿಗೆ ಅದು ಪ್ರಸರಿಸುತ್ತಲೇ ಇರುವುದು; ಭೂಮಿಯಲ್ಲಿಡೀ ಅದು ಹರಡಿ ಅಂಧಕಾರವನ್ನೆಲ್ಲಾ ಪ್ರಕಾಶಮಯವಾಗಿ ಮಾರ್ಪಡಿಸುವುದು.

ಎಲ್ಲೈ ಅಹ್ಮದಿಯತಿನೊಡನೆ ವಿದ್ವೇಷವನ್ನು ತೋರಿಸುವವರೇ, ನನಗೆ ನಿಮಗೊಂದು ಸಂದೇಶವನ್ನು ತಲಪಿಸಲಿಕ್ಕಿದೆ. ಎಲ್ಲೈ ಅಶುದ್ಧವಾದ ನೇತ್ರಗಳಿಂದ ಈ ದೀಪದ ಬೆಳಕನ್ನು ನೋಡುತ್ತಿರುವವರೇ, ಕೇಳಿರಿ: ಇದನ್ನು ನಂದಿಸುವ ಕಾರ್ಯದಲ್ಲಿ ನಿಮಗೆ ಎಂದಿಗೂ ಜಯ ದೊರಕಲಾರದು. ಸಮುಜ್ವಲ ಶೋಭೆಯಿಂದ ಪ್ರಕಾಶಿಸುತ್ತಿರುವ ಈ ದೀಪವನ್ನು ನಿಮ್ಮ ನಿಸ್ಸಾರವಾದ ಊದುವಿಕೆಯಿಂದ ನಿಷ್ಪ್ರಭಗೊಳಿಸಲು ಸಾಧ್ಯವಿಲ್ಲ; ಬಲವಂತದಿಂದ ಅದರ ಪ್ರಕಾಶವನ್ನು ಕುಂದಿಸಲಸದಳ. ಕಣ್ಣು ತೆರೆದು ನೋಡಿರಿ. ಮುಝಫ್ಫರ್ ಇಂದು ಸಹ ಜೀವಂತ ಇದ್ದಾರೆ! ಮೊದಲಿಗಿಂತ ಸುಖಕರವಾದ ಜೀವನ!! ಓ ಮುಝಫ್ಫರ್ ನಿನಗೆ ಅಭಿನಂದನೆ. ನಿನ್ನ ನಂತರ ಲಕ್ಷಗಟ್ಟಲೆ ಮುಝಫ್ಫರ್‌ಗಳು ಮುಂದೆ ಬಂದು ನಿನ್ನ ಸ್ಥಾನವನ್ನಲಂಕರಿಸಲು ಕಾತರದಿಂದಿದ್ದಾರೆ. ಎಲ್ಲೈ ಮುಝಫ್ಫರನ ಜೀವಿತ ಜ್ವಾಲೆಯನ್ನು ನಂದಿಸಲು ಯತ್ನಿಸುವವರೇ, ನೀವು ಆತನಿಗೆ ಅನಶ್ವರವಾದ ಜೀವಿತದ ಮಧುಪಾನೀಯ ಕುಡಿಸಿರುವಿರಿ, ಆತನಿಗೆ ಜೀವಿತ ದೊರೆಯಿತು! ಮರಣ ನಿಮಗೆ ವಿಧಿಸಲ್ಪಟ್ಟಿತು.

ಮತ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಖುರ್‌ಆನಿನ ಕಲ್ಪನೆ ಬಹಳ ಪರಿಶುದ್ಧವೂ ಅತ್ಯುತ್ಕೃಷ್ಟವೂ ಅತಿ ಮಹತ್ವಪೂರ್ಣವೂ ವಿಶಾಲವಾದುದೂ ಆಗಿದೆ. ಅದನ್ನು ಬಲಾತ್ಕಾರ, ಒತ್ತಾಯ, ಅನಿಷ್ಟಕರ, ಅಹಿತಕರ ಹಾಗೂ ಗೊಂದಲಮಯ ಆಗಿ ಮಾರ್ಪಡಿಸುವವರೇ, ಎಲ್ಲೈ ಧರ್ಮದ ಪವಿತ್ರವಾದ ಚಿಲುಮೆಯಿಂದ ಪುಟಿದೇಳುವ ಶಾಶ್ವತವಾದ ಸ್ನೇಹವನ್ನು ದ್ವೇಷವನ್ನಾಗಿ ಪರಿವರ್ತಿಸುವವರೇ, ಎಲ್ಲೈ ಸರ್ವವಿಧ ಪ್ರಕಾಶವನ್ನು ಬೆಂಕಿಯಾಗಿಯೂ ಸಕಲ ಅನುಗ್ರಹಗಳನ್ನು ಶಾಪವಾಗಿಯೂ ಬದಲಾಯಿಸಲು ಇಚ್ಛಿಸುವ ಮನುಷ್ಯರೆಂದು ಕರೆಸಿಕೊಳ್ಳುವ ನಿರ್ಭಾಗ್ಯವಂತರೇ, ಚೆನ್ನಾಗಿ ಜ್ಞಾಪಕದಲ್ಲಿರಿಸಿ–ನಿಮ್ಮ ಅಧಮ ಕುತಂತ್ರಗಳೆಲ್ಲಾ ಸರ್ವಶಕ್ತನಾದ ಅಲ್ಲಾಹನ ಅಜೇಯ ವಿಧಿಯೊಂದಿಗೆ ಸಂಘರ್ಷಿಸಿ ನುಚ್ಚುನೂರಾಗುವುವು. ನಿಮ್ಮ ಎಲ್ಲಾ ದುರುದ್ದೇಶಗಳು ಮಣ್ಣುಗೂಡುವುವು. ಅತ್ಯುನ್ನತನಾದ ಅಲ್ಲಾಹನ ವಿಧಿಯ ಶಿಲಾಫಲಕಗಳಿಗೆ ಹೊಡೆದು ನಿಮ್ಮ ಶಿರಸ್ಸುಗಳು ಸೀಳಲ್ಪಡುವುವು. ನಿಮ್ಮ ವಿರೋಧದ ಕೊಚ್ಚೆಯಿಂದ ಕೂಡಿದ ಅಲೆಗಳು ಇಸ್ಲಾಮಿನ ಮಹಾದಂಡೆಗೆ ಬಡಿದು ಚದರಿಹೋಗುವುವು. ಅದಕ್ಕೆ ಮುಂದೆ ಸಾಗಲು ಸಾಧ್ಯವಾಗದು. ಎಲ್ಲೈ ಇಸ್ಲಾಮಿಗೆ ವಿರುದ್ಧವಾಗಿ ಎದ್ದು ಬರುವ ಆಂತರಿಕವೂ ಬಾಹ್ಯವೂ ನೇರವೂ ಪರೋಕ್ಷವೂ ಆದ ಶಕ್ತಿಗಳೇ, ಕೇಳಿರಿ–ನಿಮ್ಮ ವಿಧಿಯಲ್ಲಿ ಪರಾಜಯ! ಮತ್ತೂ ಪರಾಜಯ! ಪರಾಜಯವಲ್ಲದೆ ಬೇರೇನೂ ಇಲ್ಲ! ನೋಡಿರಿ ಇಸ್ಲಾಮಿಗಾಗಿ ಆತ್ಮಾರ್ಪಣೆ ಮಾಡುವ ಜೀವಪರಿತ್ಯಾಗಿಗಳಾದ ನಾವು ಸತ್ಯದ ಕಾವಲುಭಟರು; ಪರಾಜಯ ನಮಗೆ ವಿಧಿಸಲ್ಪಡಲೇ ಇಲ್ಲ!

ಇಂದು ನಾನು ವಿವರಿಸಿದ ಪ್ರತಿಯೊಂದು ಪದ ಸಹ ಸತ್ಯವಾಗಿ ಪರಿಣಮಿಸುವ ಆ ದಿನವನ್ನು ವಿದೂರವಲ್ಲದ ಸದ್ಯೋಭವಿಷ್ಯದಲ್ಲೇ ನಮಗೆ ಅಲ್ಲಾಹನು ತೋರಿಸಿಕೊಡುವನು. ಏಕೆಂದರೆ ಇದು ನನ್ನ ಸ್ವಂತ ವಚನಗಳಲ್ಲ. ಇದು ದೈವ ವಿಧಿಯ ನಿಶ್ಚಿತ ತೀರ್ಮಾನವಾಗಿದೆ. ಇದಕ್ಕೆ ಎಂದಿಗೂ ಬದಲಾವಣೆ ಉಂಟಾಗಲಾರದು. ಇದು ಎಂದಿ

**ಪ್ರತಿಕ್ರಿಯೆ**

# ಕನ್ನಡದಲ್ಲಿ ಖುತ್‌ಬಾ - ಮುಸ್ಲಿಂ ಲೋಕ ಎತ್ತ?

ಹುಬ್ಬಳ್ಳಿಯ ಸೌವಾಡಿ ಗ್ರಾಮದ ಮಸೀದಿಯೊಂದರಲ್ಲಿ ಶುಕ್ರವಾರದ ಖುತ್ಬಾ ಪ್ರವಚನವನ್ನು ಕನ್ನಡ ಭಾಷೆಯಲ್ಲಿ ನೆರವೇರಿಸಲಾದ ಒಂದು ವಾರ್ತೆಯು ತಾ. 22–11–83ರ "ಉದಯವಾಣಿ"ಯಲ್ಲಿ ಪ್ರಕಟವಾಗಿದೆ. ಜುಮಾ ನಮಾಜ್ ಸಲ್ಲಿಸಲು ಮಸೀದಿಯಲ್ಲಿ ಸೇರಿದ ಸದಸ್ಯರ ಅಪೇಕ್ಷೆಯ ಮೇರೆಗೆ ಖುತ್ಬಾ ಪ್ರವಚನವನ್ನು ಕನ್ನಡದಲ್ಲಿ ನಡೆಸಲಾಯಿತೆಂದು ವರದಿ. ಕನ್ನಡ ನಾಡಿನಲ್ಲಿ ಕನ್ನಡ ಜನರೇ ಹೆಚ್ಚು ಸೇರಿರುವ ಮಸೀದಿಯೊಂದರಲ್ಲಿ ಖುತ್ಬಾ ಪ್ರವಚನವನ್ನು ಕನ್ನಡ ಭಾಷೆಯಲ್ಲಿ ನಿರ್ವಹಿಸಲಾದುದು ಉದಯವಾಣಿಯಂತಹ ರಾಷ್ಟ್ರ ಮಟ್ಟದ ಪತ್ರಿಕೆಯಲ್ಲಿ ವರದಿಯಾಗುವಷ್ಟು ಮಹತ್ವದ ಸುದ್ದಿಯೇ? ಹೌದು, ಶುಕ್ರವಾರದ ಖುತ್ಬಾ ಭಾಷಣವನ್ನು ಅರಬಿ ಭಾಷೆಯಲ್ಲೇ ನಿರ್ವಹಿಸಬೇಕೆಂಬ ಪರಂಪರೆಗೆ ಶತಮಾನಗಳಿಂದಲೂ ಜೋತು ಬಿದ್ದ ಬಹುಸಂಖ್ಯಾತ ಸಂಪ್ರದಾಯವಾದಿ ಮುಸ್ಲಿಮರಿಗೆ ಅದೊಂದು ಮಹತ್ವದ ಸುದ್ದಿಯೇ ಸರಿ. ಅಂತೆಯೇ ಆಶ್ಚರ್ಯದ ಸುದ್ದಿ ಕೂಡಾ.

ಕನ್ನಡದಲ್ಲಿ ಖುತ್ಬಾ ನಿರ್ವಹಿಸಿದ ಆ ಮುಸ್ಲಿಂ ಪಂಗಡವು ಯಾವುದೆಂದು ವರದಿಯಲ್ಲಿಲ್ಲ. ಆದರೆ, ಇಲ್ಲೊಂದು ಮಹತ್ವಪೂರ್ಣವಾದ ಸಂಗತಿಯು ಎದ್ದು ಕಾಣುತ್ತಿದೆ. ಇಸ್ಲಾಮಿನ ಪ್ರಯೋಗಾತ್ಮಕವೂ ಸರ್ವಸಂಪೂರ್ಣವೂ ಆದ ತತ್ವ ನಿರ್ದೇಶನಗಳಿಂದ ದೂರವಾಗಿ, ತಾವೇ ನಿರ್ಮಿಸಿಕೊಂಡ ಅನಾಚಾರಗಳಿಗೂ ಅಂಧವಿಶ್ವಾಸಗಳಿಗೂ ಬಲಿಬಿದ್ದು ನರಳುತ್ತಿದ್ದ ಮುಸ್ಲಿಂ ಸಮುದಾಯವನ್ನು ಉದ್ಧರಿಸಿ ಅವರಿಗೆ ನಿಜವಾದ ಇಸ್ಲಾಮಿನ ತತ್ವೋಪದೇಶಗಳನ್ನು ಕಲಿಸಿ ಕೊಡಲು ಅಲ್ಲಾಹನಿಂದ ನಿಯೋಗಿತರಾದ ಇಸ್ಲಾಂ ಧರ್ಮದ ಪುನರುದ್ಧಾರಕ, ಇಮಾಂ ಮಹದಿ ಹಝ್ರತ್ ಅಹ್ಮದ್ (ಅ)ರವರ ಉಪದೇಶಗಳ ಕಡೆ ಮುಸ್ಲಿಂ ಲೋಕವು ಮೆಲ್ಲ ಮೆಲ್ಲನೆ ವಾಲಿ ಬರುತ್ತಿದೆ ಎಂಬುದು ಇಲ್ಲಿ ಗಮನಾರ್ಹವಾದ ಅಂಶ. ಮುಸ್ಲಿಂ ಜನಸ್ತೋಮವು ಇಸ್ಲಾಂ ಧರ್ಮದ ಯಥಾರ್ಥ ತತ್ವಗಳನ್ನು ಕೈ ಬಿಟ್ಟು ಅಂಧಕಾರದಲ್ಲಿ ಮುಳುಗಿದ್ದ ಈ 14ನೇ ಶತಮಾನದ ಆದಿಯಲ್ಲೇ ಪರಮಾತ್ಮನು ಇಸ್ಲಾಂ ಧರ್ಮದ ಸಂರಕ್ಷಣೆಗಾಗಿ ಆ ಮಹಾತ್ಮರನ್ನು ನಿಯೋಗಿಸಿ ಕಳುಹಿಸಿದನು. ಆದರೆ, ಅವರ ತತ್ವೋಪದೇಶಗಳಿಗೆ ಕಿವಿಕೊಟ್ಟು ಇಸ್ಲಾಂ ಧರ್ಮದ ಪುನರುತ್ಥಾನ ಯೋಜನೆಯಲ್ಲಿ ಅವರಿಗೆ ಸಹಕಾರ ನೀಡುವ ಬದಲು ಬಹುಸಂಖ್ಯಾತ ಮುಸ್ಲಿಮರು ಅಹಂಕಾರದಿಂದ ಅವರನ್ನು ವಿರೋಧಿಸಿ ಪರಿಹಾಸ್ಯ ಮಾಡಿ ದೇವಶಾಪಕ್ಕೆ ಗುರಿಯಾದರು. ಇದೊಂದು ಚಾರಿತ್ರಿಕ ಪುನರಾವರ್ತನೆ ಮಾತ್ರ. ದೇವರು ತಾನು ಕಳುಹಿಸುವ ಪ್ರವಾದಿಗಳನ್ನೂ ಅವರ ಅನುಚರ ಸಂಘವನ್ನೂ ತನ್ನ ಅನುಗ್ರಹದಿಂದ ಆಶೀರ್ವದಿಸುವನೆಂಬುದು ದೇವರ ಸನಾತನವಾದ ನಿಯಮ. "ನಾನು ಮತ್ತು ನನ್ನ ಪ್ರವಾದಿಗಳು ಖಂಡಿತವಾಗಿಯೂ ವಿಜಯ ಹೊಂದುವೆವು ಎಂಬುದು ಅಲ್ಲಾಹನು ಬರೆದಿಟ್ಟ ಸಂಗತಿಯಾಗಿದೆ" ಎಂದು ಪವಿತ್ರ ಖುರ್‌ಆನ್ ಹೇಳುತ್ತದೆ. ಪ್ರವಾದಿಗಳ ಕಾಲದಲ್ಲಿ ಎಷ್ಟೋ ಜನರು ಅವರನ್ನು ವಿರೋಧಿಸಿದರೂ ಕೂಡಾ ಅಂತಿಮ ವಿಜಯವು ಅಲ್ಲಾಹನ ಪ್ರವಾದಿಗಳಿಗೂ ಅವರ ಪ್ರಬೋಧನೆಗಳಿಗೂ ಲಭಿಸಿವೆ ಎಂಬುದಾಗಿ ಮತ ಚರಿತ್ರೆಯಿಂದ ನಮಗೆ ತಿಳಿದು ಬರುತ್ತದೆ.

---

(23ನೇ ಪುಟದಿಂದ)

ಗೂ ಎಂದಿಗೂ ಬದಲಾಗದು. ಅಹ್ಮದಿಯತ್ ಎಂದಿಗೂ ಯಾವ ಘಟ್ಟದಲ್ಲೂ ಪರಾಜಿತಗೊಳ್ಳಲಾರದು. ಅದು ಮುಂದಕ್ಕೆ ಸಾಗುತ್ತಲೇ ಹೋಗುವುದು.

ಎಲೈ ಅಹ್ಮದಿಯಾ ಜಮಾಅತಿನೊಡನೆ ಸಂಬಂಧ ವಿರಿಸಿದ ಭ್ರಾತೃಗಳೇ, ಅಲ್ಲಾಹನ ಮಾರ್ಗದಲ್ಲಿ ಎಷ್ಟು ಹೆಚ್ಚು ಜೀವಾರ್ಪಣ ಮಾಡುವರೆ ನಿಮಗೆ ಸಂದರ್ಭ ಲಭಿಸುವುದೋ, ಅಷ್ಟೇ ಹೆಚ್ಚು ವಿಜಯಗಳು ನಿಮ್ಮ ವಿಧಿಯಲ್ಲಿ ಬರೆಯಲ್ಪಡುವುವು. ಅಲ್ಲಾಹನು ಹಾಗೆಯೇ ಮಾಡಲಿ. ಶೀಘ್ರದಲ್ಲೇ ಇಸ್ಲಾಮಿನ ವಿಜಯವನ್ನು ನಮ್ಮ ಕಣ್ಣುಗಳಿಂದ ಕಾಣುವ ಸೌಭಾಗ್ಯವನ್ನು ನಮಗೆ ಅವನು ನೀಡಲಿ. ಆಮೀನ್. ●

ಅಹ್ಮದಿಯಾ ಜಮಾಅತಿನ ಸ್ಥಾಪನೆಯ ಮೊದಲ್ಗೊಂಡು ಶುಕ್ರವಾರದ ಖುತ್ಬಾ ಪ್ರವಚನವು ಆಯಾ ಪ್ರದೇಶದ ಹೆಚ್ಚಿನ ಜನರಿಗೆ ತಿಳಿಯುವ ಭಾಷೆಯಲ್ಲಿಯೇ ನಿರ್ವಹಿಸಲಾಗುತ್ತಿದೆ. ಸಂದರ್ಭೋಚಿತವಾದ ಉಪದೇಶಗಳಿಂದ ಕೂಡಿದ ಭಾಷಣವಾಗಿರುವ ಖುತ್‌ಬಾ ಪ್ರವಚನವು ಶ್ರೋತೃ ಜನರಲ್ಲಿ ಹೆಚ್ಚಿನವರಿಗೆ ತಿಳಿಯುವ ಭಾಷೆಯಲ್ಲಾಗಿರದೆ ಕೇವಲ ಕೆಲವೇ ಜನರಿಗೆ ತಿಳಿಯುವ ಅಥವಾ ಯಾರಿಗೂ ತಿಳಿಯದ, ಕೆಲವು ಸಂದರ್ಭಗಳಲ್ಲಿ ಓದುವವರಿಗೂ ಕೂಡಾ ತಿಳಿಯದ ಅರಬಿ ಭಾಷೆಯಲ್ಲಾದರೆ ಅದರ ಉದ್ದೇಶವೇ ಈಡೇರಲಾರದು. ಖುತ್‌ಬಾದಲ್ಲಿನ ಭಾಷಣದ ಭಾಗವನ್ನು ಅರಬಿ ಅಲ್ಲದ ಬೇರೆ ಭಾಷೆಗಳಲ್ಲೂ ನಿರ್ವಹಿಸಬಹುದೆಂಬುದಾಗಿ ಅಹ್ಮದಿಯಾ ಜಮಾಅತಿನ ಸ್ಥಾಪಕರು ಒಂದು ಶತಮಾನದ ಮೊದಲು ಹೇಳಿದಾಗ ಅಂದು ಬಹುಸಂಖ್ಯಾತ ಮುಸ್ಲಿಮರು ಅದನ್ನು ಬಹಳವಾಗಿ ವಿರೋಧಿಸಿದ್ದರು. ಆದರೆ, ಮುಸ್ಲಿಂ ಲೋಕವು ಇಂದು ತಿಳಿದೋ ತಿಳಿಯದೆಯೋ ಮೆಲ್ಲ ಮೆಲ್ಲನೆಯಾದರೂ ಆ ದಿವ್ಯ ಸಂದೇಶವಾಹಕರ ತತ್ವೋಪದೇಶಗಳ ಕಡೆಗೆ ನೀಗುತ್ತಿರುವುದು ಕಂಡು ಬರುತ್ತಿದೆ.

ಅಂತೆಯೇ ಬಹುಸಂಖ್ಯಾತ ಮುಸ್ಲಿಂ ಸಮುದಾಯದೆಡೆಯಲ್ಲಿ ಕಂಡು ಬರುತ್ತಿರುವ ಮತ್ತೊಂದು ಮಹತ್ವಪೂರ್ಣ ಬದಲಾವಣೆಯು ಪ್ರವಾದಿ ಈಸಾ (ಅ)ರ ಮರಣದ ಕುರಿತಾಗಿದೆ. ಬನೀ ಇಸ್ರಾಯೀಲ್ ಗೋತ್ರದವರ ಮಾರ್ಗದರ್ಶನಕ್ಕಾಗಿ ನಿಯೋಗಿತರಾದ ಪ್ರವಾದಿ ಈಸಾ (ಅ)ರವರು ಇಂದು ಕೂಡಾ ಆಕಾಶದಲ್ಲಿ ಸ್ವಶರೀರದೊಂದಿಗೆ ಜೀವಿಸುತ್ತಿರುವರೆಂದೂ ಅಂತ್ಯ ಕಾಲದಲ್ಲಿ ಅವರು ಅದೇ ಶರೀರದೊಂದಿಗೆ ಭೂಮಿಗೆ ಇಳಿದು ಬರುವರೆಂದೂ ಒಂದು ಮಿಥ್ಯಾ ವಿಶ್ವಾಸವು ಬಹುಸಂಖ್ಯಾತ ಮುಸ್ಲಿಮರೆಡೆಯಲ್ಲಿ ಬೇರೂರಿತ್ತು. ಮುಸ್ಲಿಮರಿಗೆ ಕ್ರೈಸ್ತರಿಂದ ಸಾಂಕ್ರಾಮಿಕವಾಗಿ ಹರಡಿ ಬಂದಿದ್ದ ಈ ವಿಶ್ವಾಸದ ಅಬದ್ಧತೆಯನ್ನು ಹಝ್ರತ್ ಅಹ್ಮದ್ (ಅ)ರವರು ಆಧಾರ ಸಹಿತ ನಿರೂಪಿಸಿದರು. ಪ್ರವಾದಿ ಈಸಾ (ಅ)ರವರು ಇತರ ಎಲ್ಲಾ ಪ್ರವಾದಿಗಳಂತೆ ಮರಣ ಹೊಂದಿರುವರೆಂಬ ಪವಿತ್ರ ಖುರ್‌ಆನಿನ ಬೋಧನೆಯನ್ನು ಅವರು ಜನರಿಗೆ ಉಪದೇಶಿಸಿದರು. ಆದರೆ, ಇದೊಂದು ಕಾರಣಕ್ಕಾಗಿಯೇ ಅವರ ವಿರುದ್ಧ ಭುಗಿಲೆದ್ದ ಅಂದಿನ ಮುಸ್ಲಿಂ ಬಹುಸಂಖ್ಯಾತರೂ ಮತಪಂಡಿತರೂ ಹಝ್ರತ್ ಅಹ್ಮದರನ್ನು ಧರ್ಮಭ್ರಷ್ಟನೆಂದು ವಿಧಿಸುವಷ್ಟು ಅಹಂಕಾರಿಗಳಾಗಿ ಮಾರ್ಪಟ್ಟರು. ಆದರೆ, ಪ್ರವಾದಿ ಈಸಾ(ಅ) ಆಕಾಶದಲ್ಲಿ ಜೀವಿಸುತ್ತಿರುವರೆಂಬ ವಿಶ್ವಾಸವು ಸರಿಯಲ್ಲವೆಂಬುದಾಗಿ ಕಾಲಕ್ರಮೇಣ ಮುಸ್ಲಿಂ ಮತ ಪಂಡಿತರಲ್ಲಿ ಕೆಲವರಿಗೆ ತೋರಲು ತೊಡಗಿತು. ಈಸಾ ಪ್ರವಾದಿಯವರು ಮರಣ ಹೊಂದಿರುವರೆಂಬುದಾಗಿ ಖುರ್‌ಆನಿನಿಂದ ಸಾಬೀತಾಗುತ್ತದೆ ಎಂದು ಕೂಡಾ ಕೆಲವು ಮುಸ್ಲಿಂ ಮತ ಪಂಡಿತರು ಬಹಿರಂಗವಾಗಿ ಸಾರಿದರು. ಹಝ್ರತ್ ಈಸಾ (ಅ) ಆಕಾಶದಲ್ಲಿ ಜೀವಿಸುತ್ತಿರುವರೆಂಬುದೂ ಅವರು ಪುನಃ ಆಕಾಶದಿಂದ ಇಳಿದು ಬರುವರೆಂಬುದೂ ಕಾಲಕ್ರಮೇಣ ಮುಸ್ಲಿಂ ಜಗತ್ತಿಗೆ ನಂಬಲಸಾಧ್ಯವಾದ ಒಂದು ವಿಶ್ವಾಸವಾಗಿ ಮಾರ್ಪಟ್ಟಿತು. ಮುಸ್ಲಿಂ ಜಗತ್ತು ತಿಳಿದೋ ತಿಳಿಯದೆಯೋ ಹಝ್ರತ್ ಅಹ್ಮದ್‌ರವರ ತತ್ವೋಪದೇಶಗಳ ಕಡೆಗೆ ಆಕರ್ಷಿಸಲ್ಪಡುತ್ತಿದೆ ಎಂಬುದಕ್ಕೆ ಇದು ಮತ್ತೊಂದು ಪುರಾವೆಯಾಗಿದೆ. ತಾನು ಪ್ರಬೋಧಿಸುವ ಯಥಾರ್ಥ ಇಸ್ಲಾಮಿಕ ತತ್ವೋಪದೇಶಗಳನ್ನು ಇಂದು ಲೋಕವು ವಿರೋಧಿಸುತ್ತಿದೆಯಾದರೂ ಕಾಲಕ್ರಮೇಣ ಲೋಕದ ಬಹುಪಾಲು ಜನರು ಈ ಉಪದೇಶಗಳನ್ನು ಅಂಗೀಕರಿಸುವರೆಂಬುದಾಗಿ ಆ ಮಹಾತ್ಮರೇ ಭವಿಷ್ಯ ನುಡಿದಿರುವರು. “ಇಂದಿನಿಂದ ಮೂರು ಶತಮಾನಗಳು ಪೂರ್ತಿಯಾಗುವುದರ ಮುಂಚಿತವಾಗಿ ನಾನು ಪ್ರಬೋಧಿಸುವ ಈ ತತ್ವಗಳನ್ನು ಲೋಕದ ಬಹುಸಂಖ್ಯಾತ ಜನರು ಸ್ವೀಕರಿಸುವರು” ಎಂಬುದಾಗಿ ಅವರು ಹೇಳಿದ್ದರು. ಕನ್ನಡದಲ್ಲಿ ಖುತ್ಬಾ ಭಾಷಣ ಅವರ ಭವಿಷ್ಯವಾಣಿಯ ಒಂದು ಪೂರ್ತೀಕರಣ ಮಾತ್ರ.

—ಇಯಾ

## ಹಿರಿಯ ಪತ್ರಿಕೆ ಯಾವುದು?

ಈ ಕಳೆದ ಅಕ್ಟೋಬರ್ 20ನೇ ತಾರೀಕಿನ ಉದಯವಾಣಿಯಲ್ಲಿ ಬಿ. ಎಂ. ಇಚ್ಲಂಗೋಡು ಅವರು ಬರೆದ ಒಂದು ಲೇಖನ ಪ್ರಕಟವಾಗಿತ್ತು. ತಲೆಬರಹ “ಕನ್ನಡ ನಾಡಿನ ಮುಸ್ಲಿಮರ ಭಾಷೆ ಯಾವುದು ?” ಎಂದು. ಭಾಷೆ ಯಾವುದಾದರೂ ಕೂಡಾ ಆಭಾಸವನ್ನಂತೂ ಕನ್ನಡದ ಜನರು ಸಹಿಸಲಾರರು ಎಂದು ನಾವು ಭಾವಿಸುತ್ತೇವೆ. ಲೇಖನದ ಮೂಲೆಯಲ್ಲಿ ಬಿ. ಎಂ. ಇಚ್ಲಂಗೋಡರು ಅವರ ಸ್ವಂತ ಪತ್ರಿಕೆಯಾದ ‘ತವನಿಧಿ’ಯ ಕುರಿತು ಬರೆದು

# ಚುಟುಕು - ಚೂರು

* 'ಭಿನ್ನಾಭಿಪ್ರಾಯ' ಮತ್ತು 'ದೇವನ ಸ್ಥಾನ' ಎಂಬೆರಡು ಕೃತಿಗಳನ್ನು ಬಂಗ್ಲಾ ಸರಕಾರವು ನಿಷೇಧಿಸಿರುವುದಾಗಿ 'ಅಲ್‌ಮುಜ್ತಮಅ್' ಪತ್ರಿಕೆ ವರದಿ ಮಾಡಿದೆ. ಅವು ಬಂಗ್ಲಾ ದೇಶದ ಈರ್ವರು ಕಾದಿಯಾನೀ ಸಾಹಿತಿಗಳ ಕೃತಿಗಳೆಂದು ಶಂಕಿಸಲಾಗಿದೆ.

(ಮೌದೂದೀ ಪತ್ರಿಕೆ 'ಸನ್ಮಾರ್ಗ', ನವೆಂಬರ್ 20–26, 1983)

● ಅವು ಮೌದೂದೀ ಸಾಹಿತಿಗಳ ಕೃತಿಗಳೆಂದು ಶಂಕಿಸಬಾರದೇಕೆ?

–ವಾಚಕರೊಬ್ಬರ ಪ್ರತಿಕ್ರಿಯೆ

* ಪ್ರವಾದಿ ಈಸಾ(ಅ)ರನ್ನು ಶಿಲುಬೆಗೇರಿಸಲಾಗಿಲ್ಲ. ಕೊಲೆ ಮಾಡಲಾಗಿಲ್ಲ. ಅವರನ್ನು ಅಲ್ಲಾಹನು ತನ್ನ ಮಹಿಮಾ ವಿಶೇಷದಿಂದ ಭೂಮಿಯಿಂದ ಬೇರೆಡೆಗೆ ಜೀವ ಸಹಿತ ಕೊಂಡೊಯ್ದನು. ಈಗ ಅವರು ತಮ್ಮ ಪ್ರಭುವಿನ ವಿಶೇಷ ಸಂರಕ್ಷಣೆಯಲ್ಲಿದ್ದಾರೆ.

(ಪ್ರಶ್ನೆಯೊಂದಕ್ಕೆ ಉತ್ತರ–'ಸನ್ಮಾರ್ಗ', ದಶಂಬರ 4-10, 1983)

● ಅರೆ!? ಸುಮಾರು ಎರಡು ಸಾವಿರ ವರ್ಷಗಳಿಂದ ಅವರು ಆಕಾಶದಲ್ಲಿ ವಾಸ ಮಾಡಿಕೊಂಡಿದ್ದರಪ್ಪೇ? ಪಾಪ; ಬಹುಶಃ ಈಗ ರಶ್ಯಾ, ಅಮೇರಿಕ ಮೊದಲಾದ ದೇಶಗಳ ರಾಕೆಟ್ ಹಾವಳಿ ವಿಪರೀತವಾದ್ದರಿಂದ ಅದು ಸುರಕ್ಷಿತ ತಾಣವಲ್ಲವೆಂದು ಬೇರೆಡೆಗೆ ಕೊಂಡೊಯ್ಯಲ್ಪಟ್ಟರೇನೋ?

– ಅ. ರಘು.

---

(25ನೇಪುಟದಿಂದ)

"ಈಗ ಬದುಕಿರುವ ಪತ್ರಿಕೆಗಳಲ್ಲಿ ಅತ್ಯಂತ ಹಿರಿಯ ಇಸ್ಲಾಮೀ ಮಾಸ ಪತ್ರಿಕೆ ಮೂಡಬಿದ್ರೆಯ ತವನಿಧಿ ಮಾತ್ರ" ಎಂದು ಹೇಳಿಕೊಂಡಿದ್ದಾರೆ. ಶಹಭಾಸ್! ಉದಯವಾಣಿಯಲ್ಲಿ ತಮ್ಮ ಸ್ವಂತ ಪತ್ರಿಕೆಯ ಹಿರಿಮೆಯನ್ನು ಹಾಡಿ ಹೊಗಳಿ ಇಚ್ಲಂಗೋಡರು ಸಮಾಧಾನಪಟ್ಟಿರಬಹುದು. ಆದರೆ, ಕನ್ನಡ ಭಾಷೆಯಲ್ಲಿ, ಈಗ ಬದುಕಿರುವ ಹಿರಿಯ ಇಸ್ಲಾಮೀ ಪತ್ರಿಕೆ 'ತವನಿಧಿ'ಯಲ್ಲ. ತವನಿಧಿ ಹುಟ್ಟಿದ್ದು 1976ನೇ ನವೆಂಬರ್ ತಿಂಗಳಲ್ಲಿ. ಅದು ಈ ಜಗತ್ತಿನ ಬೆಳಕನ್ನು ಕಾಣುವುದಕ್ಕಿಂತ ಸುಮಾರು ಒಂದೂವರೆ ವರ್ಷ ಮೊದಲೇ ಅಂದರೆ 1975ನೇ ಎಪ್ರಿಲ್ ತಿಂಗಳಿಂದಲೇ ಮಂಗಳೂರಿನಿಂದ "ಯುಗರಶ್ಮಿ" ಪತ್ರಿಕೆಯು ಪ್ರಕಟಣೆಯನ್ನು ಆರಂಭಿಸಿರುತ್ತದೆ. ಮಾತ್ರವಲ್ಲ ಬಿ. ಎಂ. ಇಚ್ಲಂಗೋಡರ ಪತ್ರಿಕೆಯಾದ "ತವನಿಧಿ"ಯ ಪ್ರಥಮ ಸಂಚಿಕೆಯಲ್ಲೇ "ಯುಗರಶ್ಮಿ"ಯ ಕುರಿತು ಬರೆಯಲಾಗಿದೆ. ಆದುದರಿಂದ "ಈಗ ಬದುಕಿರುವ ಅತ್ಯಂತ ಹಿರಿಯ ಇಸ್ಲಾಮೀ ಕನ್ನಡ ಪತ್ರಿಕೆ" ಎಂಬ ಹಿರಿಮೆ ಅಲ್ಲಾಹನ ಅನುಗ್ರಹದಿಂದ "ಯುಗರಶ್ಮಿ"ಗೆ ಹೊರತು ಇನ್ನಾವ ಪತ್ರಿಕೆಗೂ ಇಲ್ಲ.

—ಇಯೊ

# ಅಹ್ಮದಿಯಾ ವಾರ್ತೆಗಳು

## ಆಸ್ಟ್ರೇಲಿಯಾದಲ್ಲಿ ಪ್ರಥಮ ಅಹ್ಮದಿಯಾ ಮಸೀದಿಗೆ ಶಂಕುಸ್ಥಾಪನೆ

ಅಹ್ಮದಿಯಾ ಜಮಾಅತಿನ ಇಮಾಂ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರು ಆಸ್ಟ್ರೇಲಿಯಾ ದಲ್ಲಿ ಅಹ್ಮದಿಯಾ ಜಮಾಅತಿನ ವತಿಯಿಂದ ನಿರ್ಮಿಸಲ್ಪಡುವ ಪ್ರಥಮ ಮಸೀದಿ "ಮಸ್ಜಿದ್ ಬೈತುಲ್ ಹುದಾ"ಕ್ಕೆ ಕಳೆದ ಸಪ್ಟೆಂಬರ್ 25ರಂದು ಶಂಕುಸ್ಥಾಪನೆ ಮಾಡಿದರು.

ಸಿಡ್ನಿಯಿಂದ 50 ಕಿ. ಮಿ. ದೂರದಲ್ಲಿರುವ ಲಟೋಕಾ ಎಂಬಲ್ಲಿ 10 ಎಕ್ರೆಯ ನಿವೇಶನವೊಂದರಲ್ಲಿ ವಿಶಾಲವಾದ ಮಸೀದಿ ಮಾತ್ರವಲ್ಲದೆ ಮಿಶನ್ ಹೌಸ್ ಮತ್ತು ಲೈಬ್ರರಿ ಸಹ ನಿರ್ಮಿಸಲಾಗುವುದು.

## ನೈಜೀರಿಯಾದಲ್ಲಿ ಅಧ್ಯಯನ ಶಿಬಿರ

ನೈಜೀರಿಯಾದ ಕೇಂದ್ರೀಯ ಖುದ್ದಾಮುಲ್ ಅಹ್ಮದಿಯಾ ಕಳೆದ ಜುಲಾಯಿ 16ರಿಂದ 31ರ ವರೆಗೆ ಲಾಗೋಸ್, ಓಯೋ, ಅಂಕುರೆ, ಬೆನಿನ್ ಸಿಟಿ, ಇಜೆಬು ಇಗ್ಬೋ ಎಂಬೀ ಕಡೆಗಳಲ್ಲಿ ಏರ್ಪಡಿಸಿದ ರಜಾಕಾಲ ಇಸ್ಲಾಮಿಕ ಅಧ್ಯಯನ ಶಿಬಿರ ಯಶಸ್ವಿಯಾಗಿ ನಡೆಯಿತು. ಈ ಶಿಬಿರದಲ್ಲಿ 2500 ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗವಹಿಸಿದರು. ಪವಿತ್ರ ಖುರ್‌ಆನ್, ಹದೀಸ್, ಖುರ್‌ಆನ್ ಮತ್ತು ಹದೀಸುಗಳ ಪ್ರಾರ್ಥನೆ, ಇಸ್ಲಾಮಿಕ ನಡೆವಳಿಕೆ, ಇಸ್ಲಾಮಿನ ಮೂಲ ವಿಶ್ವಾಸಗಳೂ ಅನುಷ್ಠಾನಗಳೂ ಎಂಬೀ ವಿಷಯಗಳ ಬಗ್ಗೆ ಬೋಧಿಸಲಾಯಿತು.

## ಇಸ್ಲಾಮಿನ ಬಗ್ಗೆ ಆಕ್ಷೇಪಕ್ಕೆ ಅಮೇರಿಕನ್ ದೂರದರ್ಶನದಲ್ಲಿ ಉತ್ತರ

ಕಳೆದ ಮಾರ್ಚ್ 7ರಂದು ಟೊರೊಂಟೋದ ಟಿ. ವಿ. ಚಾನಲ್ ನಂಬರ್ 10ರ ಮೂಲಕ ಇಸ್ಲಾಮಿನ ಕುರಿತು ಅಹ್ಮದಿಯಾ ವಿದ್ವಾಂಸರು ಮಾಡಿದ ಭಾಷಣವನ್ನು ಬಿತ್ತರಿಸಲಾಯಿತು.

ಮೌಲಾನ ಮುನೀರುದ್ದೀನ್ ಸಾಹೇಬ್ 'ಪವಿತ್ರ ಖುರ್‌ಆನ್ ಸಾರ್ವಲೌಕಿಕವೂ ಸುರಕ್ಷಿತವೂ ಆಗಿರುವ ಒಂದೇ ಒಂದು ಗ್ರಂಥ', 'ಮುಹಮ್ಮದ್ ಪೈಗಂಬರರ ಜೀವನ ಕ್ರಮ' ಎಂಬೀ ವಿಷಯಗಳ ಬಗ್ಗೆ ವಿವರಿಸಿದರು. ಇಸ್ಲಾಂ ಖಡ್ಗದಿಂದ ಪ್ರಚಾರಗೊಂಡ ಧರ್ಮ ಮತ್ತು ಸ್ತ್ರೀಯರಿಗೆ ಇಸ್ಲಾಮಿನಲ್ಲಿ ಸ್ವಾತಂತ್ರ್ಯವಿಲ್ಲವೆಂಬ ಆಕ್ಷೇಪಗಳನ್ನು ಮೌಲಾನ ಮುಸ್ತಫಾ ಸಾಬಿತ್ ಸಾಹೇಬ್ ಖಂಡಿಸಿದರು. ಮುಹಮ್ಮದ್ ಪೈಗಂಬರರ ಕುರಿತು ಬೈಬಲಿನಲ್ಲಿರುವ ಭವಿಷ್ಯನುಡಿಗಳ ಬಗ್ಗೆ ಸಹ ಈ ಕಾರ್ಯಕ್ರಮದಲ್ಲಿ ಪ್ರಸ್ತಾಪಿಸಲಾಯಿತು.

## ಕೊರಿಯದಲ್ಲಿ ಪ್ರಚಾರ ಕಾರ್ಯಕ್ರಮ

ಮೂರು ಮಂದಿ ಜಪಾನಿ ಅಹ್ಮದಿಯರ ಒಂದು ತಂಡ ಕಳೆದ ಮೇ 11ರಿಂದ 17ರ ವರೆಗೆ ಕೊರಿಯದಲ್ಲಿ ಅಹ್ಮದಿಯಾ ಪ್ರಚಾರವನ್ನು ನಡೆಸಿದರು. ಅವರು ಅಪರಿಚಿತರಾಗಿದ್ದರೂ ಅವರಿಗೆ ಅಲ್ಲಿ ಸಹಾಯ ಸಹಕಾರ ಲಭಿಸಿತು. ಮಿ। ಪಾರ್ಕ್ ಎಂಬೊಬ್ಬರು ಎಲ್ಲಾ ಸಮಯ ಅವರೊಂದಿಗಿದ್ದರು. ಅವರು ತನ್ನ ಕೆಲಸವನ್ನು ಬಿಟ್ಟು ಕಾರಿನಲ್ಲಿ ಈ ತಂಡದೊಂದಿಗೆ ಹಲವು ಕಡೆ ಸಂಚರಿಸಿದರು. ಪಿಎಚ್. ಡಿ. ಪದವೀಧರ ಕೆಮಿಸ್ಟ್ರಿ ಪ್ರೊಫೆಸರ್ ಮಿ। ಜಂಗ್ ಉಪಯುಕ್ತವಾದ ಮಾಹಿತಿಗಳನ್ನು ನೀಡಿದರು. ಮಿ। ಚೊ ಎಂಬ ವಿದ್ಯಾರ್ಥಿ ತನ್ನ ಹೆಚ್ಚಿನ ಸಮಯವನ್ನು ಈ ತಂಡದೊಂದಿಗೆ ಕಳೆದರು.

## ದೂರದರ್ಶನದಲ್ಲಿ ಇಸ್ಲಾಂ ಧರ್ಮ ಪ್ರಚಾರ

"Islam—The completion of Religion" ಎಂಬ ವಿಷಯದ ಬಗ್ಗೆ ಅಹ್ಮದಿಯಾ ವಿದ್ವಾಂಸರು ಮಾಡಿದ ಅರ್ಧ ಘಂಟೆ ಕಾಲದ 5 ಭಾಷಣಗಳನ್ನು ಲೂಯಿಸ್‌ನ (ಅಮೇರಿಕ) South Western Cable TV ಅನೇಕ ಬಾರಿ ಬಿತ್ತರಿಸಿರುತ್ತದೆ. ಈ ಮೂಲಕ ಅಮೇರಿಕದ ಲಕ್ಷ ಗಟ್ಟಲೆ ಜನರಿಗೆ ಇಸ್ಲಾಮಿನ ಸಂದೇಶವೂ ಅಧ್ಯಾಪನಗಳೂ ತಲುಪುತ್ತಿವೆ.

## ಅಮೇರಿಕದಲ್ಲಿ ವಾರ್ಷಿಕ ಮಹಾ ಸಮ್ಮೇಳನ

ಕಳೆದ ಆಗಸ್ಟ್ ತಾ. 12, 13, 14ರಂದು ಅಮೇರಿಕದ ಮಿಚಿಗನ್ ಪ್ರಾಂತ್ಯದ ರಾಜಧಾನಿ ಡೆಟ್ರಾಯಿಟ್‌ನಲ್ಲಿ ಅಹ್ಮದಿಯಾ ವಾರ್ಷಿಕ ಸಮ್ಮೇಳನವು ಯಶಸ್ವಿಯಾಗಿ ಸಮಾವೇಶಗೊಂಡಿತು. ಜಾಗತಿಕ ಬೇಂಕಿನ ಡೈರೆಕ್ಟರ್ ಸಾಹಿಬ್‌ಜಾದಾ ಮಿರ್ಝಾ ಮುಝಫ್ಫರ್ ಅಹ್ಮದ್ ಸಾಹೇಬ್ ಸಮ್ಮೇಳನವನ್ನು ಉದ್ಘಾಟಿಸಿದರು.

ಅಹ್ಮದಿಯಾ ಮಹಿಳಾ ವಿಭಾಗದ ಸಮ್ಮೇಳನ ಸಹ ಪ್ರತ್ಯೇಕವಾಗಿ ಜರಗಿತು. ಕೇಂದ್ರೀಯ ಲಜ್ನಾ ಇಮಾ ಇಲ್ಲಾಹ್ (ರಬ್ವಾ) ಅಧ್ಯಕ್ಷೆ ಸಯ್ಯಿದ ಮರ್‌ಯಂ ಸಿದ್ದೀಖ ಸಾಹಿಬ ಸಮ್ಮೇಳನದಲ್ಲಿ ಪಾಲುಗೊಂಡು ಉಪದೇಶಗಳನ್ನು ನೀಡಿದರು.

## ಗಿಯಾನಾದಲ್ಲಿ ಮಹಿಳಾಮಣಿಯ ಕೊಡುಗೆ

ಗಿಯಾನಾದ ಎರಡನೆಯ ದೊಡ್ಡ ನಗರವಾದ ನ್ಯೂ ಎಮ್‌ಸ್ಟರ್‌ಡಮ್‌ನಲ್ಲಿ ಅಹ್ಮದೀ ಮಹಿಳಾಮಣಿ ಷಾಹಿದ ಇಸ್ಮಾಯಿಲ್ ಅವರು ನಗರದ ಹೃದಯಸ್ಥಾನದಲ್ಲಿರುವ ಸುಮಾರು ಎರಡೂವರೆ ಲಕ್ಷ ರೂಪಾಯಿ ಬೆಲೆಬಾಳುವ ತನ್ನ ಎರಡಂತಸ್ತಿನ ಕಟ್ಟಡವೊಂದನ್ನು ಅಹ್ಮದಿಯಾ ಮಿಶನ್ ಹೌಸಿಗಾಗಿ ಇತ್ತೀಚೆಗೆ ನೀಡಿರುವರೆಂದು ತಿಳಿದು ಬಂದಿದೆ.

## ಮದರಾಸು ಟಿ. ವಿ.ಯಲ್ಲಿ ಭಾಷಣ

ಮದರಾಸಿನ ಅಹ್ಮದಿಯಾ ಮಿಶನರಿ ಜನಾಬ್ ಮುಹಮ್ಮದ್ ಉಮರ್ ಸಾಹೇಬರು ಕಳೆದ ಈದುಲ್ ಅಝ್‌ಹಾದಂದು ಆ ದಿನದ ವೈಶಿಷ್ಟ್ಯಗಳ ಕುರಿತು ಮದರಾಸು ದೂರದರ್ಶನದಲ್ಲಿ ಭಾಷಣ ಮಾಡಿದರು.

## ಮಡಿಕೇರಿಯಲ್ಲಿ ರೋಗಿಗಳಿಗೆ ಹಣ್ಣು ಹಂಪಲು

ಕಳೆದ ಈದುಲ್ ಅಝ್‌ಹಾ ದಿನದಂದು ಮಡಿಕೇರಿ ಜನರಲ್ ಆಸ್ಪತ್ರೆಯ ಸುಮಾರು 300 ರೋಗಿಗಳಿಗೆ ಸ್ಥಳೀಯ ಅಹ್ಮದಿಯಾ ಜಮಾಅತಿನ ವತಿಯಿಂದ ಹಣ್ಣು ಹಂಪಲುಗಳನ್ನು ವಿತರಣೆ ಮಾಡಲಾಯಿತು.

## ಅಮೇರಿಕದಲ್ಲಿ ಹೊಸ ಮಿಶನ್ ಹೌಸ್ ಮತ್ತು ಮಸೀದಿಗಳು

ಮುಂದಿನ ನಾಲ್ಕು ವರ್ಷಗಳೊಳಗೆ ಅಮೇರಿಕದ ಐದು ಪ್ರಧಾನ ಕೇಂದ್ರಗಳಲ್ಲಿ ಅಹ್ಮದಿಯಾ ಮಿಶನ್ ಹೌಸ್ ಮತ್ತು ಮಸೀದಿಗಳನ್ನು ಸ್ಥಾಪಿಸುವರೆ ಖಲೀಫತುಲ್ ಮಸೀಹ್ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರು ಆದೇಶಿಸಿದ್ದಾರೆ. ಈ ಯೋಜನೆಯನುಸಾರ ಅಹ್ಮದೀ ಸಹೋದರರಿಂದ ಈಗಾಗಲೇ ಸುಮಾರು 2 ಕೋಟಿ ರೂಪಾಯಿಗಳ ವಾಗ್ದಾನ ಲಭಿಸಿರುತ್ತದೆ.

## ಅಹ್ಮದೀ ವನಿತೆಗೆ ಡಾಕ್ಟರೇಟ್ ಬಿರುದು

ಮುಲ್ತಾನಿನ (ಪಾಕಿಸ್ತಾನ) ಅಮತುಲ್ ಮುಜೀಬ್ ಎಂಬ ಅಹ್ಮದೀ ವನಿತೆಗೆ ಇತ್ತೀಚೆಗೆ ಓಕ್ಸ್‌ಫರ್ಡ್ ವಿಶ್ವವಿದ್ಯಾಲಯದಿಂದ ಪಿಎಚ್. ಡಿ. ಬಿರುದು ದೊರತಿರುತ್ತದೆಂದು ತಿಳಿದು ಬಂದಿದೆ.

## ಭುವನೇಶ್ವರದಲ್ಲಿ ಮಸೀದಿ ಉದ್ಘಾಟನೆ

ಒರಿಸ್ಸಾದ ಭುವನೇಶ್ವರದಲ್ಲಿ ಅಹ್ಮದಿಯಾ ಜಮಾಅತಿನ ವತಿಯಿಂದ ನಿರ್ಮಿಸಲಾದ ಮನೋಹರವಾದ ಮಸೀದಿ "ಮಸ್ಜಿದ್ ಹಮ್ದ್"ನ್ನು ಭಾರತದ ಅಹ್ಮದಿಯಾ ಪ್ರಧಾನ ಕಾರ್ಯದರ್ಶಿ ಹಝ್ರತ್ ಮಿರ್ಝಾ ವಸೀಂ ಅಹ್ಮದ್ ಸಾಹೇಬರು ಕಳೆದ ನವೆಂಬರ್ 18 ರಂದು ಜುಮಾ ಪ್ರಾರ್ಥನೆ ಸಮಯದಲ್ಲಿ ಉದ್ಘಾಟಿಸಿದರು. ಅಂದು ರಾತ್ರಿ ಮಸೀದಿಯ ವಠಾರದಲ್ಲಿ ಸಾರ್ವಜನಿಕ ಸಭೆ ಸಹ ಜರಗಿತು. ಊರಿನ ಮತ್ತು ಪರವೂರಿನ ಅನೇಕ ಗಣ್ಯರು ಈ ಸಮಾರಂಭಗಳಲ್ಲಿ ಪಾಲ್ಗೊಂಡರು.

## ಲಕ್ನೋ ಸರ್ವಧರ್ಮ ಸಮ್ಮೇಳನದಲ್ಲಿ ಭಾಷಣ

ಕಳೆದ ಒಕ್ಟೋಬರ್ 30ರಂದು ಲಕ್ನೋದಲ್ಲಿ ಜರಗಿದ ಸರ್ವಧರ್ಮ ಸಮ್ಮೇಳನದಲ್ಲಿ ಶಾಹ್‌ಜಾನ್‌ಪುರದ ಅಹ್ಮದಿಯಾ ಮಿಶನರಿ ಮೌಲವಿ ಅಬ್ದುರ್ರಶೀದ್ ಸಾಹೇಬರು ಇಸ್ಲಾಂ ಧರ್ಮದ ಬಗ್ಗೆ ಭಾಷಣ ಮಾಡಿದರು. ಇನ್ನೋರ್ವ ಅಹ್ಮದೀ ಸಹೋದರ ಡಾಕ್ಟರ್ ಮುಹಮ್ಮದ್ ಅಶ್‌ಫಾಕ್ ಸಾಹೇಬ್ ಖುರ್‌ಆನ್ ಪಠಿಸಿ ಅದರ

ಅನುವಾದವನ್ನು ಹೇಳಿದರು. ಸಭಿಕರು ಕೇಳಿದ ಪ್ರಶ್ನೆಗಳಿಗೆ ಮೌಲವಿ ಅಬ್ದುರ್ರಶೀದ್ ಸಾಹೇಬರು ಸಮಂಜಸವಾದ ಉತ್ತರಗಳನ್ನಿತ್ತರು. ಸಭಿಕರಿಗೆ ಅಹ್ಮದಿಯಾ ಸಾಹಿತ್ಯಗಳನ್ನು ಸಹ ನೀಡಲಾಯಿತು.

## ಬೊಂಬಾಯಿಯಲ್ಲಿ ವಾರ್ಷಿಕ ಸಮ್ಮೇಳನ

ಮಹಾರಾಷ್ಟ್ರ–ಗುಜರಾತ್ ತೃತೀಯ ಅಹ್ಮದಿಯಾ ವಾರ್ಷಿಕ ಸಮ್ಮೇಳನವು ಕಳೆದ ಅಕ್ಟೋಬರ್ 22 ಮತ್ತು 23ರಂದು ಬೊಂಬಾಯಿಯ ಅಹ್ಮದಿಯಾ ಮಿಶನ್ ಹೌಸಿನ ವಠಾರದಲ್ಲಿ ಜರಗಿತು. ಮಿರ್ಝಾ ವಸೀಂ ಅಹ್ಮದ್ ಸಾಹೇಬರು ಸಮ್ಮೇಳನವನ್ನು ಉದ್ಘಾಟಿಸಿದರು.

ಅಹ್ಮದಿಯಾ ವಿದ್ವಾಂಸರಲ್ಲದೆ, ಮಹಾರಾಷ್ಟ್ರ ಸಚಿವರಲ್ಲೋರ್ವರಾದ ಸತೀಶ್ ಪಟ್ನೇಕರ್ ಅವರು ಸಹ ಭಾಷಣವಿತ್ತರು.

ಎರಡನೆ ದಿನ ನಡೆದ ಸರ್ವಧರ್ಮ ಸಮ್ಮೇಳನವನ್ನು ಬೊಂಬಾಯಿ ಮೇಯರ್ ಮನಮೋಹನ್ ಸಿಂಘ್ ಉದ್ಘಾಟಿಸಿದರು. ಶ್ರೀ ಗಿರಿರಾಜ್ ಸ್ವಾಮಿ ಶ್ರೀ ಕೃಷ್ಣರ ಕುರಿತು, ಶ್ರೀ ಪ್ರಸನ್ನ ಜೀತ್ ಮಹಾತ್ಮ ಬುದ್ಧರ ಕುರಿತು, ಗ್ಯಾನಿ ಗುರುಬಚನ್ ಸಿಂಘ್ ಬಾಬಾ ಗುರುನಾನಕರ ಕುರಿತು, ಮಿ। ಅಂಡ್ರ್ಯೂ ರೋಡಕ್ ಯೇಸುಕ್ರಿಸ್ತರ ಕುರಿತು, ಮೌಲಾನ ಶರೀಫ್ ಅಹ್ಮದ್ ಅಮೀನಿ ಸಾಹೇಬ್ ಮುಹಮ್ಮದ್ ಪೈಗಂಬರರ ಕುರಿತು ಮಾತನಾಡಿದರು,

## ಕಾಮನ್ವೆಲ್ತ್ ಶೃಂಗ ಸಭೆಯ ನಾಯಕರಿಗೆ ಅಹ್ಮದಿಯಾ ಸಾಹಿತ್ಯ

ಕಳೆದ ನವೆಂಬರ್ 23ರಿಂದ 30ರ ವರೆಗೆ ಹೊಸ ದಿಲ್ಲಿಯಲ್ಲಿ ನಡೆದ ಕಾಮನ್‌ವೆಲ್ತ್ ಶೃಂಗಸಭೆಗೆ ಆಗಮಿಸಿದ 47 ರಾಷ್ಟ್ರಗಳ ನಾಯಕರಿಗೆ ಖುರ್‌ಆನಿನ ಇಂಗ್ಲಿಷ್ ಭಾಷಾಂತರ, ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ, Visit Anothe Wonder in India -- Tomb of Jesus Christ ಮೊದಲಾದ ಅಹ್ಮದಿಯಾ ಸಾಹಿತ್ಯಗಳು ಒಳಗೊಂಡ ಕಟ್ಟುಗಳನ್ನು ಖಾದಿಯಾನದಲ್ಲಿರುವ ಭಾರತದ ಕೇಂದ್ರೀಯ ಅಹ್ಮದಿಯಾ ಸಂಸ್ಥೆಯ ವತಿಯಿಂದ ಪಾರಿತೋಷಕವಾಗಿ ನೀಡಲಾಯಿತು. ಮಾತ್ರವಲ್ಲದೆ ಕೆಂಪು ಕೋಟೆ, ಜುಮಾ ಮಸೀದಿ, ಅಶೋಕ ಹೋಟೇಲ್, ಅಕ್ಬರ್ ಹೋಟೇಲ್, ತಾಜ್ ಹೋಟೇಲ್ ಮೊದಲಾದ ಕಡೆಗಳಲ್ಲಿ ವಿದೇಶದಿಂದ ಬಂದ ಅತಿಥಿಗಳಿಗೆ ಅಹ್ಮದಿಯಾ ಕಿರುಕೃತಿಗಳನ್ನು ಹಂಚಲಾಯಿತು.

## ಖಾದಿಯಾನದಲ್ಲಿ 92ನೇ ವಾರ್ಷಿಕ ಮಹಾ ಸಮ್ಮೇಳನ

ಕಳೆದ ಡಿಸೆಂಬರ್ 18, 19ಮತ್ತು 20ರಂದು ಅಖಿಲ ಭಾರತ ಅಹ್ಮದಿಯಾ 92ನೇ ವಾರ್ಷಿಕ ಮಹಾ ಸಮ್ಮೇಳನವು ಖಾದಿಯಾನದಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು.

ದೈವೇಕತ್ವ, ಪವಿತ್ರ ಖುರ್‌ಆನಿನ ಮಹತ್ವ, ಮುಹಮ್ಮದ್ ಪೈಗಂಬರರ ಮಹತ್ ಗುಣಗಳು, ವಾಗ್ದತ್ತ ಲೋಕಗುರು, ಇಸ್ಲಾಮಿನ ಪುನರುತ್ಥಾನ, ಖುರ್‌ಆನ್–ಬೈಬಲ್–ವಿಜ್ಞಾನ, ಜಾಗತಿಕ ಸಮಸ್ಯೆಗಳಿಗೆ ಇಸ್ಲಾಮಿನ ಪರಿಹಾರ, ರಾಷ್ಟ್ರೀಯ ಭಾವೈಕ್ಯ ಮತ್ತು ಅಹ್ಮದಿಯಾ ಜಮಾಅತ್, ಮಸೀಹ್ ಮೌಊದರ ಭವಿಷ್ಯ ನುಡಿಗಳು ಮುಂತಾದ ವಿಷಯಗಳ ಕುರಿತು ಭಾರತ ಮತ್ತು ವಿದೇಶದ ಅಹ್ಮದಿಯಾ ವಿದ್ವಾಂಸರು ಭಾಷಣ ಮಾಡಿದರು.

ಭಾರತದ ನಾನಾ ಕಡೆಗಳಿಂದಲೂ ಅಮೇರಿಕ, ಇಂಗ್ಲೆಂಡ್, ಜರ್ಮನಿ, ನೈಜೀರಿಯಾ, ಘಾನಾ, ಇಂಡೋನೇಷ್ಯಾ, ಜಪಾನ್, ಜೋರ್ಡಾನ್, ಪೆಲಸ್ತೀನ್ ಇತ್ಯಾದಿ ಪರ ದೇಶಗಳಿಂದಲೂ ಸಾವಿರಾರು ಸ್ತ್ರೀ–ಪುರುಷರು ಸಮ್ಮೇಳನದಲ್ಲಿ ಪಾಲ್ಗೊಂಡರು.

## ವಕ್ಫೆ ಜದೀದ್ ಶಿಕ್ಷಣ ಶಿಬಿರ

ಅಂಜುಮಾನ್ ಅಹ್ಮದಿಯಾ ವಕ್ಫೆ ಜದೀದಿನ ಆಶ್ರಯದಲ್ಲಿ ಮುರಿಯಕಣ್ಣಿ (ಮಲಪ್ಪುರಂ ಜಿಲ್ಲೆ)ಯಲ್ಲಿ ಕಳೆದ ಅಕ್ಟೋಬರ್ 22 ಮತ್ತು 23ರಂದು ಶಿಕ್ಷಣ ಶಿಬಿರವನ್ನು ಏರ್ಪಡಿಸಲಾಯಿತು.

ಶಿಬಿರದ ಮೇಲ್ನೋಟವನ್ನು ವಹಿಸುವರೆ ಕೇಂದ್ರೀಯ ವಕ್ಫ್ ಜದೀದಿನ ಕಾರ್ಯದರ್ಶಿ ಜ। ಮಲಿಕ್ ಸಲಾಹುದ್ದೀನ್ ಸಾಹೇಬ್ ಎಂ. ಎ. ಅವರು ಖಾದಿಯಾನದಿಂದ ಆಗಮಿಸಿದ್ದರು. ಶಿಬಿರದ ಸಂಚಾಲಕ ಮೌಲವಿ ಯು. ಅಬೂಬಕರ್ ಸಾಹೇಬರು ಸ್ವಾಗತ ಭಾಷಣ ಮಾಡಿದರು. ಅಧ್ಯಕ್ಷತೆ ವಹಿಸಿದ್ದ ಕೇರಳ ಅಹ್ಮದಿಯಾ ಮುಖ್ಯ ಮಿಶನರಿ ಜ। ಮೌಲವಿ ಮುಹಮ್ಮದ್ ಅಬುಲ್ ವಫಾ ಸಾಹೇಬರು, ಪವಿತ್ರ ಖುರ್‌ಆನ್ ಮತ್ತು ಪೈಗಂಬರರ ವಚನಗಳನ್ನು ಉದ್ಧರಿಸಿ ವಿಶ್ವಾಸಿಗಳು ಐಕ್ಯದಿಂದಲೂ ಪ್ರೀತಿಯಿಂದಲೂ ಅನುಸರಣೆಯಿಂದಲೂ ಜೀವನ ನಡೆಸಬೇಕೆಂದೂ ಅವುಗಳಿಗೆ ವಿರುದ್ಧವಾದ ಎಲ್ಲಾ ಮಾರ್ಗಗಳನ್ನು ತ್ಯಜಿಸಬೇಕೆಂದೂ ಉಪದೇಶಿಸಿದರು.

## ಮಿರ್ಝಾ ವಸೀಂ ಅಹ್ಮದರ ಸಂದರ್ಶನ

ಬೊಂಬಾಯಿಯಲ್ಲಿ ಜರಗಿದ ಅಹ್ಮದಿಯಾ ವಾರ್ಷಿಕ ಸಮ್ಮೇಳನದಲ್ಲಿ ಪಾಲ್ಗೊಂಡ ಬಳಿಕ ಭಾರತದ ಅಹ್ಮದಿಯಾ ಪ್ರಧಾನ ಕಾರ್ಯದರ್ಶಿ ಹಝ್ರತ್ ಮಿರ್ಝಾ ವಸೀಂ ಅಹ್ಮದ್ ಸಾಹೇಬರು ತನ್ನ ಪತ್ನಿ ಮತ್ತು ಪುತ್ರಿ ಅಮತುಲ್ ರವೂಫ್ ಸಮೇತ ಎರಡು ವಾರಗಳ ಕರ್ನಾಟಕ – ಕೇರಳ ಖಾಸಗಿ ಸಂದರ್ಶನದ ಸಲುವಾಗಿ ಹೊರಟು ಅಕ್ಟೋಬರ್ 31ರಂದು ಮಂಗಳೂರು ತಲಪಿದರು.

ಅಂದು ಮಂಗಳೂರಿನಲ್ಲೇ ತಂಗಿ ಮರುದಿನ ನವೆಂಬರ್ 1ರಂದು ಮಂಜೇಶ್ವರ ಮತ್ತು ಮೊಗ್ರಾಲಿಗೆ ಭೇಟಿಯಿತ್ತರು. ನವೆಂಬರ್ 4ರಂದು ಅವರು ಮಡಿಕೇರಿಗೆ ಆಗಮಿಸಿದರು.

ನವೆಂಬರ್ 15ರಂದು ಕಲ್ಲಿಕೋಟೆಯ ಮಾನಾಂಚಿರ ಮೈದಾನದಲ್ಲಿ ಜರಗಿದ ಸಮಾರಂಭದಲ್ಲಿ ಅವರು, ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ ಸಾಹೇಬ್ (ಖಲೀಫತುಲ್ ಮಸೀಹ್ II) ರವರು ಉರ್ದು ಭಾಷೆಯಲ್ಲಿ ಬರೆದ ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆಯ ಮಲೆಯಾಳ ತರ್ಜುಮೆ "ತಿರುನಬಿ ಚರಿತ್ರಂ" ಎಂಬ ಕೃತಿಯನ್ನು ಬಿಡುಗಡೆ ಗೊಳಿಸಿದರು.

## ಉಪ್ಪಳ ಮತ್ತು ಮಂಜೇಶ್ವರದಲ್ಲಿ ಪ್ರಚಾರ

ಕಳೆದ ನವೆಂಬರ್ 27ರಂದು ಮೊಗ್ರಾಲ್ ಖುದ್ದಾಮುಲ್ ಅಹ್ಮದಿಯಾ ವತಿಯಿಂದ ಉಪ್ಪಳ ಮತ್ತು ಮಂಜೇಶ್ವರದಲ್ಲಿ ಅಹ್ಮದಿಯಾ ಪ್ರಚಾರ ಕಾರ್ಯಕ್ರಮಗಳು ನಡೆದುವು.

ಮಂಗಳೂರು, ಉಳ್ಳಾಲ, ಮಂಜೇಶ್ವರ, ಕುಂಬಳೆ ಮೊದಲಾದ ಕಡೆಗಳಿಂದ ಬೆಳಗಾತ ಆಗಮಿಸಿದ 16 ಮಂದಿ ಅಹ್ಮದೀ ಯುವಕರು ಮಂಗಲಪ್ಪಾಡಿ ಹೈಸ್ಕೂಲಿನ ಸಮೀಪ ಒಂದು ಸೇರಿ, ಮಂಗಲಪ್ಪಾಡಿ–ಉಪ್ಪಳ ಪರಿಸರಗಳಲ್ಲಿ ಅಹ್ಮದಿಯಾ ಸಾಹಿತ್ಯಗಳನ್ನೂ ಕಿರುಕೃತಿಗಳನ್ನೂ ವಿತರಣೆ ಮಾಡಿದರು.

ಅಂದೇ ಸಂಜೆ 5 ಗಂಟೆಗೆ ಕುಂಜತ್ತೂರಿನ (ಮಂಜೇಶ್ವರ) ಸರಕಾರಿ ಪ್ರಾಥಮಿಕ ಶಾಲೆಯ ಸಮೀಪ ಪ್ರಚಾರ ಸಭೆಯನ್ನು ಏರ್ಪಡಿಸಲಾಯಿತು. ಕೊಚ್ಚಿನ್ ಅಹ್ಮದಿಯಾ ಮಿಶನರಿ ಜ। ಮುಹಮ್ಮದ್ ಯೂಸುಫ್ ಸಾಹೇಬರು ಮುಹಮ್ಮದ್ ಪೈಗಂಬರ್ (ಸ.)ರವರ ಕುರಿತು ಮತ್ತು ಇಮಾಂ ಮಹ್‌ದಿ (ಅ)ರವರ ಬಗ್ಗೆ ಭಾಷಣ ಮಾಡಿದರು. ಮೊಗ್ರಾಲ್ ಅಹ್ಮದಿಯಾ ಜಮಾಅತಿನ ಅಧ್ಯಕ್ಷ ಸಿದ್ದೀಖ್ ಅಮೀರ್ ಅಲಿ ಸಾಹೇಬರು ಅಧ್ಯಕ್ಷತೆ ವಹಿಸಿದ್ದರು.

## ಮೊಗ್ರಾಲಿನಲ್ಲಿ ವಿವಿಧ ಪಂದ್ಯಾಟಗಳು

ಕಳೆದ ಡಿಸೆಂಬರ್ 11ರಂದು ಮೊಗ್ರಾಲ್ ಖುದ್ದಾಮುಲ್ ಅಹ್ಮದಿಯಾ (ಅಹ್ಮದಿಯಾ ಯುವಜನ ಸಂಘಟನೆ) ಆಶ್ರಯದಲ್ಲಿ ವಿವಿಧ ಪಂದ್ಯಾಟಗಳು ಜರಗಿದುವು.

ಯುವಕರಿಗೆ ಶಟ್ಲ್ ಬ್ಯಾಡ್ಮಿಂಟನ್, ಓಟ, ಲಾಂಗ್ ಜಂಪ್, ಹೈಜಂಪ್, ಶಾಟ್‌ಪುಟ್, ಕಬಡ್ಡಿ, ಕ್ರಿಕೆಟ್ ಮತ್ತು ಮಕ್ಕಳಿಗೆ ಓಟ, ಲಾಂಗ್ ಜಂಪ್, ಹೈಜಂಪ್ ಪಂದ್ಯಾಟಗಳನ್ನು ಏರ್ಪಡಿಸಲಾಗಿತ್ತು.

ಯುವಕರ ವಿಭಾಗದಲ್ಲಿ ಸೈಯ್ಯದ್ ಅಶ್ರಫ್ ಅವರಿಗೆ ವೈಯಕ್ತಿಕ ಚಾಂಪಿಯನ್‌ಶಿಪ್ ಲಭಿಸಿತು.

---

ನಿಧನ ವಾರ್ತೆ

# ಜ। ಕೆ. ಪಿ. ಅಬೂಬಕ್ಕರ್ ಸಾಹೇಬ್

ಮೂಲತಃ ಬಡಗರದವರಾದ ಜ। ಕೆ. ಪಿ. ಅಬೂಬಕ್ಕರ್ ಸಾಹೇಬರು ಕಳೆದ ಸಪ್ಟೆಂಬರ್ 14ರಂದು ಮಂಜೇಶ್ವರದಲ್ಲಿರುವ ತನ್ನ ವಸತಿಯಲ್ಲಿ ನಿಧನರಾದರು. "ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್." ಮರಣ ಕಾಲದಲ್ಲಿ ಅವರಿಗೆ ಸುಮಾರು 65 ವರ್ಷ ಪ್ರಾಯವಾಗಿತ್ತು. ಸುಮಾರು 25 ವರ್ಷಗಳ ಮೊದಲು ಅವರು ಅಹ್ಮದಿಯಾ ಜಮಾಅತಿಗೆ ಸೇರಿದರು.

ದಿವಂಗತರಿಗೆ ಪತ್ನಿಯೂ ನಾಲ್ವರು ಪುತ್ರರೂ ಇಬ್ಬರು ಪುತ್ರಿಯರೂ ಇದ್ದಾರೆ. ದಿವಂಗತರಿಗೆ ಅಲ್ಲಾಹು ಮಗ್‌ಫಿರತನ್ನು ನೀಡಲಿ. ಆಮೀನ್.

# ಅಹ್ಮದಿಯಾ ಮುಸ್ಲಿಂ
# ಕೇರಳ ರಾಜ್ಯ ಸಮ್ಮೇಳನ

## ಕೊಡಿಯತ್ತೂರಿನಲ್ಲಿ

(ಕಲ್ಲಿಕೋಟೆ ಜಿಲ್ಲೆ)

**ಜನವರಿ 13, 14, 15 — 1984**

ಪ್ರತಿನಿಧಿ ಸಮ್ಮೇಳನ, ವಿದ್ಯಾರ್ಥಿ ಸಮ್ಮೇಳನ, ಯುವಜನ ಸಮ್ಮೇಳನ, ವಯೋಜನ ಸಮ್ಮೇಳನ,
ಶಿಕ್ಷಣ-ಬೋಧನ ಕ್ಲಾಸುಗಳು, ವಿವಿಧ ಸ್ಪರ್ಧೆಗಳು.

ಸಾರ್ವಜನಿಕ ಸಭೆ: ಜನವರಿ 14, 15. ಸಂಜೆ 5 ಗಂಟೆಗೆ
ಇಮಾಂ ಮುಹ್‌ದಿ ನಗರದಲ್ಲಿ.

ಉದ್ಘಾಟನೆ: ಪ್ರಥಮ ದಿನ - ಅಲ್‌ಹಾಜ್ ಮೌಲಾನ ಬಶೀರ್ ಅಹ್ಮದ್ ಸಾಹೇಬ್
(ಭಾರತದ ಅಹ್ಮದಿಯಾ ಪ್ರಧಾನ ಪ್ರಚಾರ ಕಾರ್ಯದರ್ಶಿ)


ದ್ವಿತೀಯ ದಿನ - ಜನಾಬ್ ಹಸನ್ ಖಸಖ್ ಸಾಹೇಬ್ (ಪೆಲಸ್ತೀನ್)

ಭಾಷಣಗಾರರು: ಮೌಲವಿ ಮುಹಮ್ಮದ್ ಉಮರ್ ಸಾಹೇಬ್ ಎಚ್. ಎ. (ಮದ್ರಾಸ್)
ಎನ್. ಅಬ್ದುರ್ರಹೀಂ ಸಾಹೇಬ್ (ಕಣ್ಣನ್ನೂರ್)
ಮೌಲವಿ ಮುಹಮ್ಮದ್ ಯೂಸುಫ್ ಸಾಹೇಬ್ (ಎರ್ನಾಕುಳಂ)
ಮೌಲವಿ ಹಮೀದುದ್ದೀನ್ ಶಮ್ಸ್ ಸಾಹೇಬ್ (ಹೈದರಾಬಾದ್)
ಮೌಲವಿ ಮುಹಮ್ಮದ್ ಅಬುಲ್ ವಫಾ ಸಾಹೇಬ್ (ಕಲ್ಲಿಕೋಟೆ)
ಬಿ. ಮುಹ್ಮೂದ್ ಅಹ್ಮದ್ ಸಾಹೇಬ್ (ಪಯ್ಯನ್ನೂರ್)

ವಿಷಯುಗಳು: ಹಝ್ರತ್ ಅಹ್ಮದರ ಸತ್ಯ ಸಾಕ್ಷ್ಯಗಳು, ಮತ ಮತ್ತು ನೈತಿಕ ಜೀವನ, ಪ್ರವಾದಿತ್ವ,
ಅಹ್ಮದಿಯಾ ಜಮಾಅತ್ ಏನು? ಏಕೆ?, ಆಧುನಿಕ ಘಟನೆಗಳು ಭವಿಷ್ಯನುಡಿಗಳ
ಬೆಳಕಿನಲ್ಲಿ, ಮುಹಮ್ಮದ್ ನಬಿ (ಸ) ಲೋಕಾನುಗ್ರಹಿ ಇತ್ಯಾದಿ ಇತ್ಯಾದಿ.

Regd. with the Registrar of Newspapers for India. Regd. No. R. N. 27354/75
**YUGARASHMI Kannada Quarterly, January 1984 / Sulh 1363**

## English Translation of the HOLY QURAN with Arabic Text & Extensive Index




**Price : Rs. 20-00**

**Postal Charge Extra**

### AHMADIYYA ENGLISH LITERATURE

1. INTRODUCTION TO THE STUDY OF HOLY QUR'AN 16-00
   by Hazrath Mirza Bashiruddin Mahmud Ahmad
2. THE TEACHINGS OF ISLAM 6 00
   by Hazrath Mirza Ghulam Ahmad
3. JESUS IN INDIA 2-25
   by Hazrath Mirza Ghulam Ahmad
4. WHERE DID JESUS DIE? 2-25
   by J. D. Shams, Ex-Imam, London Mosque
5. THE TOMB OF JESUS 1-00
   by Soofi Mutiurrahman Bengali, M. A.

**Write to: NAZIR DAWAT-O-TABLIGH, Qadian-143 516 [Punjab]**

Edited and Published by Muhammad Yusuf on behalf of Jamath Ahmadiyya at 10-23 1008, Ansari Road, Bunder, Mangalore-575 001.
Printed at Karavali Printers, Azizuddin Road, Bunder, Mangalore-575 001.